# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಫೆಬ್ರವರಿ 07, 2021

ಸಂಪುಟ : 47 ಸಂಚಿಕೆ : 279 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com


## ತೋಮರ್ ತಲೆಗೇರಿದ ಅಧಿಕಾರ ಮದ

### ಹರಿಹಾಯ್ದ ಆರೆಸ್ಸೆಸ್ ನಾಯಕ

ಭೂಪಾಲ್, ಫೆ. 6 – ಮೂರು ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ವಿರುದ್ಧ ಹರಿಹಾಯ್ದಿರುವ ಆರ್.ಎಸ್.ಎಸ್. ನಾಯಕ ರಘುನಂದನ್ ಶರ್ಮಾ, ಅಧಿಕಾರದ ಅಮಲು ನೆತ್ತಿಗೇರಿದೆ ಎಂದಿದ್ದಾರೆ.

ಬಿಜೆಪಿಯ ಮಾಜಿ ರಾಜ್ಯಸಭಾ ಸದಸ್ಯರು ಆಗಿರುವ ಶರ್ಮ, ಫೇಸ್‌ಬುಕ್‌ನಲ್ಲಿ ಹೇಳಿಕೆ ನೀಡಿದ್ದು, ಸಚಿವರು ರಾಷ್ಟ್ರವಾದ ಬಲಗೊಳಿಸುವತ್ತ ಕೆಲಸ ಮಾಡಬೇಕು (4ನೇ ಪುಟಕ್ಕೆ)

## ಪ್ರತಿ ಗುರುವಾರ ಜನಸ್ಪಂದನ ಸಭೆ

ದಾವಣಗೆರೆ, ಫೆ. 06 - ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇದೇ ದಿನಾಂಕ 18 ರಿಂದ ಪ್ರತಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಜನಸ್ಪಂದನ ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಿ ಅಹವಾಲು ಸಲ್ಲಿಸಬಹುದು.

## ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಪ್ರಸ್ತಾವನೆ

### ಏಕಗವಾಕ್ಷಿ ಸಭೆಯಲ್ಲಿ ತೀರ್ಮಾನ

ದಾವಣಗೆರೆ, ಫೆ. 6 – ಸಮೀಪದ ತೋಳಹುಣಸೆಯಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗಾಗಿ ಪ್ರಸ್ತಾವನೆ ಕಳಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮುಂದಿನ ಮೂರು ವರ್ಷಗಳಲ್ಲಿ ದೇಶದ ವಿವಿಧೆಡೆ ಏಳು ಬೃಹತ್ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021-22ರ ಬಜೆಟ್ ಮಂಡನೆ ಸಂದರ್ಭದಲ್ಲಿ ಪ್ರಕಟಿಸಿದ್ದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಏಕಗವಾಕ್ಷಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಬಂಜಾರ್ ಗಾರ್ಮೆಂಟ್ಸ್‌ನ ಮಾಲೀಕರಾದ ಮಂಜುನಾಥ ನಾಯ್ಕ, (4ನೇ ಪುಟಕ್ಕೆ)


## ಪ್ರಥಮ ಪುಣ್ಯಸ್ಮರಣೆ



**ಡಾ|| ಶಾರದ ಶೆಟ್ಟಿ**

ಜನನ : 07.05.1938 ನಿಧನ : 7.02.2020

ಮರಣವು ಈ ಭೌತಿಕ ಶರೀರಕ್ಕೆ ಮಾತ್ರ...
ಶರೀರ ಅಂತ್ಯವಾದರೂ ಆತ್ಮ ಶಾಶ್ವತ...
ನೀವು ಕಣ್ಣು ಮುಂದೆ ಇಲ್ಲವಾದರೂ, ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ.
ನೀವು ನಡೆಸಿದ ದಾರಿಯಲ್ಲೇ ನಾವೂ ನಡೆಯುತ್ತಾ ಇದ್ದೇವೆ. ನಿಮ್ಮ ನೆನಪು, ಒಡನಾಟ ಸದಾ ನಮ್ಮಲ್ಲಿದೆ.
ನಿಮಗಿದೋ ನಮ್ಮ ಭಾವಪೂರ್ಣ ಶ್ರದ್ಧಾಂಜಲಿಗಳು.

ಮಗ : ಡಾ|| ಸುಭೋದ್ ಶೆಟ್ಟಿ, ಸೊಸೆ : ಡಾ|| ರಶ್ಮಿ ಶೆಟ್ಟಿ
ಮಗಳು : ಡಾ|| ಸಹನಾ ಹೆಗಡೆ, ಅಳಿಯ : ಶ್ರೀ ಅಶೋಕ್ ಹೆಗಡೆ
ಮೊಮ್ಮಕ್ಕಳು ಹಾಗೂ ಸಿಬ್ಬಂದಿ ವರ್ಗ

ಸಿಟಿ ಮೆಡಿಕಲ್ ಸೆಂಟರ್, ದಾವಣಗೆರೆ.



## Awarded as the 'Outstanding Educational Network in India' by the Economic Times in 2020.

PODAR INTERNATIONAL SCHOOL
Since 1927

93 years | 131 schools | 1,60,000 students

A Proposed CBSE School*



Admissions Open • Nursery to Grade 6

- Rich Academic Heritage
- Distinguished Faculty
- Digital Classrooms
- Hygienic & Sanitised Premises
- Virtual Learning
- Innovative Labs
- Remedial Academic Support
- CCTV Cameras in School Premises
- Comprehensive Sports Coaching
- Free Transfer to another Podar School^
- No Donations. No Deposits. No Interviews.
- Safe Transport Facilities

*Affiliation will be done in due course as per CBSE guidelines. ^Conditions Apply.

95119 46160 podareducation.org

SCHOOL ADDRESS:
Survey No 232/14/15/16, J H Patel Nagar, Davanagere. Karnataka.



## ಆಸ್ತಿ ಖರೀದಿದಾರರು, ರಿಯಲ್ ಎಸ್ಟೇಟ್‌ದಾರರು ಹಾಗೂ ಸಾರ್ವಜನಿಕರ ಗಮನಕ್ಕೆ

ದಾವಣಗೆರೆ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. # 461, ಕುವೆಂಪು ರಸ್ತೆ, ದಾವಣಗೆರೆ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು, (ಈಗ ಸರಕಾರವು ಸದರಿ ಬ್ಯಾಂಕಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿರುತ್ತದೆ) ಬ್ಯಾಂಕಿನಲ್ಲಿ ಠೇವಣಿ ಮಾಡಿರುವ ಠೇವಣಿದಾರರಿಗೆ ಹಣ ಹಿಂದಿರುಗಿಸದೇ ವಂಚಿಸಿರುವ ಬಗ್ಗೆ ಈಗಾಗಲೇ ದಾವಣಗೆರೆ ನಗರದ ಕೆ.ಟಿ.ಜೆ ನಗರ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರು ಸಂಖ್ಯೆ : 0202/2019 ದಿನಾಂಕ: 22.11.2019 ರಂತೆ ದಾಖಲಾಗಿರುತ್ತದೆ. ಅದರಂತೆ ಮಾನ್ಯ ನ್ಯಾಯಾಲಯದಲ್ಲಿ ಬ್ಯಾಂಕ್‌ನವರ ವಿರುದ್ಧ (Karnataka Protection of Interest of Depositors in Financial Establishment Act., 2004) (Karnataka Act. No. 30 of 2005) ಪ್ರಕಾರ ಕ್ರಿಮಿನಲ್ ಎಫ್.ಐ.ಆರ್. ದಾಖಲಾಗಿರುತ್ತದೆ. ಮತ್ತು ಹೆಚ್ಚಿನ ತನಿಖೆಗಾಗಿ ಮಾನ್ಯ COD, Bangalore ಇವರಿಗೆ ವಹಿಸಲಾಗಿದ್ದು ತನಿಖಾ ಹಂತದಲ್ಲಿರುತ್ತದೆ.

ಸದರಿ (KPID Act 2004) ರ ಕಾನೂನಿನಂತೆ ಠೇವಣಿದಾರರಿಗೆ ಹಣ ಹಿಂದಿರುಗಿಸುವ ಸಲುವಾಗಿ ಸದರಿ ಎಲ್ಲಾ ನಿರ್ದೇಶಕರುಗಳ ಚರ ಮತ್ತು ಸ್ಥಿರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಕಾನೂನಿನ ಪ್ರಕ್ರಿಯೆ ನಡೆಯುತ್ತಿರುವುದರಿಂದ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲೆ ಸೂಚಿಸಿದ ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಅವರ ಕುಟುಂಬ ಸದಸ್ಯರುಗಳಿಗೆ ಸೇರಿದ ಯಾವುದೇ ರೀತಿಯ ಸ್ಥಿರಾಸ್ತಿಗಳನ್ನು ಅವರಿಂದ ಖರೀದಿಸುವುದಾಗಲೀ, ದಾನ ಪತ್ರವಾಗಲೀ ಅಥವಾ ವ್ಯವಹರಿಸುವುದಾಗಲೀ ಮಾಡಬಾರದಾಗಿ ವಿನಂತಿಸಿಕೊಳ್ಳುತ್ತೇವೆ. ಹಾಗೊಮ್ಮೆ ಯಾರಾದರೂ ಆ ರೀತಿ ವ್ಯವಹರಿಸಿದರೆ ಮುಂದೆ ಕಾನೂನಿನ ತೊಂದರೆಗಳನ್ನು ಎದುರಿಸಬೇಕಾಗಬಹುದು. ಯಾರೂ ಮುಂದೆ ಕಾನೂನಿನ ತೊಂದರೆಯಲ್ಲಿ ಸಿಲುಕಿಕೊಳ್ಳಬಾರದೆಂಬ ಸದುದ್ದೇಶದಿಂದ ಈ ಪ್ರಕಟಣೆಯನ್ನು ನೀಡುತ್ತಿದ್ದೇವೆ.

ಸಹಿ/- (ಎ.ಎಸ್. ಪ್ರಭಾಕರ್)
ಅಧ್ಯಕ್ಷರು, ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ಠೇವಣಿದಾರರ ವೇದಿಕೆ, ದಾವಣಗೆರೆ.



## ಬೇತೂರು ಬಸವರಾಜ್ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ ವಾಸಿ, ದಿ|| ಬೇತೂರು ಚನ್ನಬಸಪ್ಪನವರ ಪುತ್ರರೂ, ಹಿರಿಯ ವಕೀಲರೂ ಆದ **ಶ್ರೀ ಬೇತೂರು ಬಸವರಾಜ್** ಅವರು ದಿನಾಂಕ 06.02.2021ರ ಶನಿವಾರ ಸಂಜೆ 4.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು. ಪತ್ನಿ ಶ್ರೀಮತಿ ಭಾರತಿ ಬಸವರಾಜ್, ಪುತ್ರ ಸಚಿನ್ ಬೇತೂರು, ಸೊಸೆ ಶ್ರೀಮತಿ ಸಿಂಧು ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.02.2021ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಬೇತೂರು ಬಂಧುಗಳು



Jain Group of Institutions
Since 1990, 85 Institution, 51,000 Students across India

## JAIN PUBLIC SCHOOL

CHALAGERI;RANEBENNUR;HAVERI DIST
Affiliated to CBSE, Affil No: 830778

JPS Chalageri is a CBSE affiliated school having Preschool to Grade10. Applications are invited from qualified and experienced teachers for empanelment to the following posts.

1. Secondary School Teachers : Post Graduates in relevant subject with B.Ed.(English,Mathematics,Science,Social Science,Hindi & Kannada)
2. Primary School Teachers : Graduates in any subject with B.Ed/D.Ed/D.El.Ed
3. Co-Scholastic Teachers : Computer Instructors, Librarian Physical Education Teachers and Art &Craft Teachers
4. Pre-School Teachers : B.A/B.Sc/Plus Two with NTT/Montessori training or equivalent.

- Candidates having fluency in English, excellent communication skills as well as experience in similar position in reputed schools will get an advantage.
- Attractive remuneration and transportion from Davangere will be offered.
- Those interested may send their detailed resume with qualification and experience to career@jpsranebennur.com.

Walk-In Interview at Davangere on 14-02-2021 (Sunday)
Venue: Chetana Hotel, Davangere
Timings: 10:30 am to 01:30 pm
For further details please contact Ph: 9620480713
MANAGEMENT




AMRITH NONI

## ಅಮೃತ್‌ನೋನಿ ಆರ್ಥೋಪ್ಲಸ್

ನನ್ನ ಜೀವನದಲ್ಲಿ ಮರಳಿ ಖುಷಿಯನ್ನು ತಂದಿದೆ.



ದೊಡ್ಡಮ್ಮ, 65 ವರ್ಷ – ಹೆಚ್ ಗೊಲ್ಲಳ್ಳಿ, ಬೆಂಗಳೂರು ಗ್ರಾಮಾಂತರ, ನನಗೆ ಮಂಡಿನೋವಿತ್ತು, ಸೊಂಟನೋವಿತ್ತು, ತೊಡೆನೋವ್ ಇತ್ತು. ಬೆಳಗ್ಗೆ ಹಾಸ್ಗೆಯಿಂದ ತಕ್ಷಣ ಎದ್ದ್ ಬರೋಕ್ ಆಗ್ತಿರ್ಲಿಲ್ಲ, ಸ್ವಲ್ಪ ಹೊತ್ತ್ ಸುಧಾರಿಸ್ಕೊಂಡು ಏಳ್ಬೇಕಾಗ್ತಿತ್ತು. ನಮ್ಮ್ ಮನೆ ಫಸ್ಟ್ ಫ್ಲೋರಲ್ ಇರೋದ್ರಿಂದ ಮೆಟ್ಲ್ ಹತ್ತಿ ಇಳಿಯೋಕ್ ಆಗ್ತಿರ್ಲಿಲ್ಲ. ಕೂರದು ಏಳದು ಕಷ್ಟ ಆಗ್ತಿತ್ತು. ಯಾವ್ದೇ ಕಾರ್ಯ ಅಂತ ಬಂದ್ರೂ ಹೋಗಾಕ್ ಆಗ್ತಿರ್ಲಿಲ್ಲ. ಎಷ್ಟ್ ಕಡೆ ತೋರ್ಸಿದ್ರೂ ಯಾವ್ ಮಾತ್ರೆ ತಗಂಡ್ರೂ ನೋವ್ ಹೋಗ್ಲಿಲ್ಲ. ಮೂರ್ ತಿಂಗ್ಳ್ ಹಿಂದೆ ನನ್ನ್ ಮಗ ಅಮೃತ್‌ನೋನಿ ಆರ್ಥೋಪ್ಲಸ್ ತರುಸ್ಕೊಟ್ಟ. ಅದುನ್ ತಗಳಾಕ್ ಶುರುಮಾಡ್ದಾಗ್ಲಿಂದ ಬೆನ್ನ್ ನೋವ್ ಇಲ್ಲ, ಮಂಡಿನೋವ್ ಇಲ್ಲ, ತೊಡೆನೋವ್ ಸ್ವಲ್ಪ ಕಮ್ಮಿ ಆಗಿದೆ. ಈಗ್ ಎಲ್ಲಾ ಕೆಲಸ ಮಾಡ್ತಿನಿ. ಮನೆ ಪಕ್ಕದಲ್ಲೇ ಸಣ್ಣ ತೋಟ ಮಾಡ್ಕೊಂಡಿದಿನಿ. ತರಕಾರಿ ಬೆಳಿತೀನಿ. ನಾನೇ ನೀರ್ ಹಾಕ್ತಿನಿ ಎಲ್ಲಾ ಮಾಡ್ತಿನಿ. ನನಗ್ ಈಗ್ ಯಾವ್ ನೋವೂ ಇಲ್ಲ ಆರಾಮಾಗಿದೀನಿ. ಆರ್ಥೋಪ್ಲಸ್ಗಿಗೆ ಥ್ಯಾಂಕ್ಸ್.




ನೋನಿ ಹಾಗೂ 10ಕ್ಕಿಂತ ಹೆಚ್ಚು ಆಯುರ್ವೇದ ಔಷಧೀಯ ಗಿಡಮೂಲಿಕೆಗಳಿಂದ ತಯಾರಿಸಲಾಗಿದೆ

ಪ್ರತಿ ಬಾಟಲ್ ನಲ್ಲೂ 80% ರಷ್ಟು ನೋನಿ ಹಣ್ಣಿನ ಸತ್ವ ಹೊಂದಿರುವ ಏಕೈಕ ಉತ್ಪನ್ನ.

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್ ಗಳಲ್ಲಿ ಲಭ್ಯ!

Mfd. by ValYou Products® Private Limited
Marketed by OM SREE ENTERPRISES
GMP TÜV INTERCERT SAAR INDIA QM 028 ISO 9001:2015 CERTIFIED COMPANY

ಕರ್ನಾಟಕದ ವಿಶ್ವಾಸಾರ್ಹ ನಂ.1 ನೋನಿ ಬ್ರಾಂಡ್
CUSTOMER CARE: +91 99866 00308
Available online @ www.amrithnoni.com



## ಪುಣ್ಯಸ್ಮರಣೆ



**ಶ್ರೀಮತಿ ಶಕುಂತಲ**

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ - ಎ. ಶಿವಾನಂದ ಮತ್ತು ಮಕ್ಕಳು, ಅಣಪೂರ್ ವಂಶಸ್ಥರು.
ಈಶ್ವರ್ ರೇಡಿಯೋ ಅಂಡ್ ಟಿ.ವಿ. ಅಶೋಕ ರಸ್ತೆ, ದಾವಣಗೆರೆ.
ಈಶ್ವರ್ ಡಿಜಿಟ್ರಾನಿಕ್ಸ್, ಹುಬ್ಬಳ್ಳಿ., ಈಶ್ವರ್ ಡಿಜಿಟ್ರಾನಿಕ್ಸ್, ಹಾವೇರಿ.
ಈಶ್ವರ್ ಡಿಜಿಟ್ರಾನಿಕ್ಸ್, ಚನ್ನಗಿರಿ.
ಈಶ್ವರ್ ಡಿಜಿಟ್ರಾನಿಕ್ಸ್, ರಾಣೇಬೆನ್ನೂರು.
ರಾಜ್ ಏಜೆನ್ಸೀಸ್, ಹದಡಿ ರಸ್ತೆ, ದಾವಣಗೆರೆ.
ರಾಜ್ ಏಜೆನ್ಸೀಸ್, ಬೆಳಗಾವಿ. ಹಾಗೂ ಸಿಬ್ಬಂದಿ ವರ್ಗ

# ಸಂವಿಧಾನದ ವ್ಯವಸ್ಥೆಯಲ್ಲಿ ಎಲ್ಲರಿಗೂ ನ್ಯಾಯ ಸಿಗಬೇಕು

## ವಿವಿಧ ಸಮುದಾಯಗಳು ಎಸ್ಟಿಗೆ ಸೇರಿಸಬೇಕೆಂದು ಹೋರಾಟ ಮಾಡುತ್ತಿರುವ ಬಗ್ಗೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಪ್ರತಿಕ್ರಿಯೆ



ಮಲೇಬೆನ್ನೂರು, ಫೆ.6- ಸಂವಿಧಾನಿಕ ಹಕ್ಕುಗಳನ್ನು ಕೇಳಲು ಎಲ್ಲರಿಗೂ ಹಕ್ಕಿದೆ. ಈ ಹಿಂದೆ ಎಲ್.ಜಿ.ಹಾವನೂರು ಅವರು ಹಿಂದುಳಿದ ವರ್ಗಗಳ ಸ್ಥಿತಿಗತಿ ಕುರಿತು ಅಧ್ಯಯನ ವರದಿ ಕೊಟ್ಟಾಗ ಆ ವರದಿಯನ್ನು ಸುಟ್ಟು ಹಾಕಿರುವವರು ಈಗ ಮೀಸಲಾತಿ ಕೇಳುತ್ತಿದ್ದಾರೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಶನಿವಾರ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಸಂವಿಧಾನದ ವ್ಯವಸ್ಥೆಯಲ್ಲಿ ಎಲ್ಲರಿಗೂ ನ್ಯಾಯ ಸಿಗಬೇಕು. ಈ ನಿಟ್ಟಿನಲ್ಲಿ ಸರ್ಕಾರಗಳು ಇಚ್ಛಾ ಶಕ್ತಿಯನ್ನು ಪ್ರದರ್ಶಿಸಲಿ ಎಂದರು.

ವಿವಿಧ ಸಮುದಾಯಗಳು ಎಸ್ಟಿಗೆ ಸೇರಿಸಬೇಕೆಂದು ಹೋರಾಟ ಮಾಡುತ್ತಿರುವ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶ್ರೀಗಳು, ಈಗ ನಾವೇ ಹೊಟ್ಟೆ ತುಂಬಾ ಊಟ ಇಲ್ಲವೆಂದು ಹಸಿದು ಕುಳಿತ್ತಿದ್ದೇವೆ. ಬೇರೆಯವರನ್ನು ಎಸ್ಟಿಗೆ ಸೇರಿಸುವುದಾದರೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಕೊಟ್ಟು, ಅವರು ಎಸ್ಟಿಗೆ ಸೇರಲು ಅರ್ಹರಿದ್ದರೆ ಸೇರಿಸಲಿ ಎಂದು ಹೇಳಿದರು.

2001ರ ಜನಸಂಖ್ಯೆ ಆಧರಿಸಿ, ಕುಲದೀಪ್ ಸಿಂಗ್ ನೀಡಿದ ವರದಿಯನ್ನು ಕೇಂದ್ರ ಸರ್ಕಾರ ಪುರಸ್ಕರಿಸಿ, 2006ರಲ್ಲಿ ಎಸ್ಟಿಗೆ ಶೇ.7.5 ರ ಮೀಸಲಾತಿ ಪ್ರಮಾಣದಲ್ಲಿ 15 ವಿಧಾನಸಭೆ ಮತ್ತು 2 ಲೋಕಸಭಾ ಕ್ಷೇತ್ರಗಳನ್ನು ಎಸ್ಟಿಗೆ ಮೀಸಲಿರಿಸಿದೆ. ಅದೇ ರೀತಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಶೇ.24.1ಕ್ಕೆ ಹೆಚ್ಚಳ ಮಾಡುವ ಮೂಲಕ ಎಸ್ಟಿ ಸಮುದಾಯಕ್ಕೆ ಆರ್ಥಿಕ ಮೀಸಲಾತಿಯಲ್ಲಿ ನ್ಯಾಯ ಕಲ್ಪಿಸಿಕೊಟ್ಟರು. ಆದರೆ, ಇದೇ ಮಾನದಂಡ ಆಧರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಶೇ.3 ರಿಂದ ಶೇ.7.5ಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಮಾತ್ರ 20 ವರ್ಷಗಳಿಂದಲೂ ಬಾಕಿ ಉಳಿದಿದೆ.

ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದ ಸಂದರ್ಭದಲ್ಲಿ ಮೀಸಲಾತಿ ಹೆಚ್ಚಳಕ್ಕಾಗಿ ಒತ್ತಾಯಿಸಿ, ನಾವು ರಾಜನಹಳ್ಳಿ ಮಠದಿಂದ ಬೆಂಗಳೂರುವರೆಗೆ ಪಾದಯಾತ್ರೆ ಮಾಡಿದಾಗ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗ ರಚಿಸಿತ್ತು.

ಕಳೆದ ವರ್ಷದ ಫೆ. 8, 9 ರಂದು ನಡೆದ 2ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಭಾಗವಹಿಸಿದ್ದ ಸಿಎಂ ಯಡಿಯೂರಪ್ಪ ಅವರು, ಆಯೋಗದ ವರದಿ ಬಂದ ತಕ್ಷಣ ಮೀಸಲಾತಿ ಹೆಚ್ಚಳ ಮಾಡುವುದಾಗಿ ಹೇಳಿದ್ದರು. ಆಯೋಗವು 2020ರ ಜುಲೈ 2 ರಂದು ಸರ್ಕಾರಕ್ಕೆ ಅಧ್ಯಯನ ವರದಿ ನೀಡಿದೆ. ಈ ಕುರಿತು ನಾವು ಮತ್ತು ನಮ್ಮ ಸಮಾಜದ ಸಚಿವರು, ಶಾಸಕರು, ಸಂಸದರು ಪಕ್ಷಾತೀತವಾಗಿ ಸಿಎಂ ಭೇಟಿ ಮಾಡಿ, ಮನವಿ ಮಾಡಿದರೂ ಇದುವರೆಗೂ ಹೆಚ್ಚಳ ಮಾಡಿಲ್ಲ.

ಇದೇ ದಿನಾಂಕ 8 ಮತ್ತು 9 ರಂದು ಜರುಗುವ 3ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಎಸ್ಟಿ ಮೀಸಲಾತಿ ಹೆಚ್ಚಳ ಮಾಡುವ ತೀರ್ಮಾನ ಪ್ರಕಟಿಸುತ್ತಾರೆಂಬ ವಿಶ್ವಾಸದಲ್ಲಿ ನಾವಿದ್ದೇವೆ. ಒಂದು ವೇಳೆ ಮತ್ತೆ ಮೂಗಿಗೆ ತುಪ್ಪಾ ಸವರುವ ಕೆಲಸ ಮಾಡಿದರೆ, ಸಮಾಜದವರ ಸಮ್ಮುಖದಲ್ಲಿ ನಮ್ಮ ಮುಂದಿನ ತೀರ್ಮಾನವನ್ನು ಪ್ರಕಟಿಸುತ್ತೇವೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಸರ್ಕಾರಕ್ಕೆ ಮತ್ತೊಮ್ಮೆ ಎಚ್ಚರಿಕೆ ನೀಡಿದರು.

**ವಾಲ್ಮೀಕಿ ರತ್ನ ಪ್ರಶಸ್ತಿಗೆ ನಟ ಸುದೀಪ್ ಆಯ್ಕೆ :** ವಾಲ್ಮೀಕಿ ಗುರುಪೀಠದಿಂದ ಕಲೆ, ಸಾಹಿತ್ಯ, ಸಂಸ್ಕೃತಿಯಲ್ಲಿ ವಿಶೇಷ ಸಾಧನೆ ಮಾಡಿರುವವರಿಗೆ 'ವಾಲ್ಮೀಕಿ ರತ್ನ' ಪ್ರಶಸ್ತಿ ನೀಡಲು ನಿರ್ಧರಿಸಿ, ಈ ವರ್ಷ ಅಭಿನಯ ಚಕ್ರವರ್ತಿ ನಟ ಕಿಚ್ಚ ಸುದೀಪ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಆಯ್ಕೆ ಸಮಿತಿಯ ಡಾ. ಎ.ಬಿ. ರಾಮಚಂದ್ರಪ್ಪ ತಿಳಿಸಿದರು. ಇದೇ ದಿನಾಂಕ 9 ರಂದು ಕಿಚ್ಚ ಸುದೀಪ್ ಅವರಿಗೆ 1 ಲಕ್ಷ ರೂ. ಗೌರವ ಧನ ಹಾಗೂ ವಾಲ್ಮೀಕಿಯ ಬೆಳ್ಳಿ ವಿಗ್ರಹ, ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

**50 ಸಾವಿರ ಆಸನ :** ವಾಲ್ಮೀಕಿ ಜಾತ್ರೆಗೆ 60x80 ಅಳತೆಯ ಸುಸಜ್ಜಿತ ವೇದಿಕೆ ನಿರ್ಮಿಸಿದ್ದು, 300x450 ಅಳತೆಯ ಮಹಾಮಂಟಪದಲ್ಲಿ 50 ಸಾವಿರ ಜನ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಲಾಗಿದೆ ಎಂದು ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್ ತಿಳಿಸಿದರು. 15 ಎಲ್‌ಇಡಿ ಟಿವಿ ಪರದೆಗಳನ್ನು ಹಾಕಲಾಗುವುದು. 50 ಊಟದ ಕೌಂಟರ್‌ಗಳನ್ನು ತೆರೆಯಲಾಗಿದ್ದು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿ.ಪಂ. ಮಾಜಿ ಅಧ್ಯಕ್ಷ ಡಾ. ವೈ. ರಾಮಪ್ಪ ಮಾತನಾಡಿದರು.


ಮಠದ ಆಡಳತಾಧಿಕಾರಿ ಟಿ.ಓಬಳಪ್ಪ, ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ಜಗಳೂರಿನ ಡಿ.ದೇವೇಂದ್ರಪ್ಪ, ರಾಜ್ಯ ಸರ್ಕಾರಿ ಎಸ್ಟಿ ನೌಕರರ ಸಂಘದ ಅಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ, ಉಪಾಧ್ಯಕ್ಷ ಕೆ. ನಾಗರಾಜ್, ಜಿಲ್ಲಾಧ್ಯಕ್ಷ ಶ್ರೀನಿವಾಸ್ ನಾಯಕ, ಮಠದ ಧರ್ಮದರ್ಶಿ ಶಾಂತ ಸುರಪುರ, ಕೆ.ಬಿ.ಮಂಜುನಾಥ್, ಜಂಭಣ್ಣ ನಾಯಕ, ಮುಖಂಡರಾದ ತಿಮ್ಮೇನಹಳ್ಳಿ ಚಂದ್ರಪ್ಪ, ಮಂಗೇನಹಳ್ಳಿ ಲೋಹಿತ್, ಪಾಳೇಗಾರ್ ನಾಗರಾಜ್, ಹರ್ತಿಕೋಟೆ ವೀರೇಂದ್ರಸಿಂಹ, ಶಿಕ್ಷಕರಾದ ಭಾನುವಳ್ಳಿ ಮಾರುತಿ, ಜಿ.ಆರ್.ನಾಗರಾಜ್, ಪತ್ರಕರ್ತ ಜಿಗಳಿ ಪ್ರಕಾಶ್, ಹೂವಿನಮಡು ಚನ್ನಬಸಪ್ಪ, ಕೆಟಿಜೆ ನಗರ ಲಕ್ಷ್ಮಣ, ದೇವರಬೆಳಕೆರೆ ಮಹೇಶ್ವರಪ್ಪ, ಶ್ರೀಮತಿ ವಿಜಯಶ್ರೀ ಮಹೇಂದ್ರಕುಮಾರ್, ವಕೀಲ ಸುಭಾಷ್ ಚಂದ್ರಬೋಸ್, ಎ.ಕೆ. ನಾಗೇಂದ್ರಪ್ಪ, ಸಣ್ಣ ತಮ್ಮಪ್ಪ ಬಾರ್ಕಿ, ಜಿಗಳಿ ಆನಂದಪ್ಪ, ಇಂಜಿನಿಯರ್ ಬಿ.ಜಿ. ಶಿವರುದ್ರಪ್ಪ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ಹಿರಿಯ ಚಿತ್ರಕಲಾವಿದ ಎ. ಮಹಾಲಿಂಗಪ್ಪ ಅವರಿಗೆ ಸನ್ಮಾನ



ದಾವಣಗೆರೆ, ಫೆ.4 - ನಗರದ ಹಿರಿಯ ಚಿತ್ರ ಕಲಾವಿದ ಎ.ಮಹಾಲಿಂಗಪ್ಪ ಅವರನ್ನು ಚಿತ್ರಕಲಾ ಪರಿಷತ್ ಆಶ್ರಯದಲ್ಲಿ ನಡೆದ ಸಮಾರಂಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ಸನ್ಮಾನಿಸಿ, ಗೌರವಿಸಿದರು. ಡಾ. ಎಂ.ಜಿ.ಈಶ್ವರಪ್ಪ, ಹೆಚ್.ಬಿ.ಮಂಜುನಾಥ್, ಪ್ರೊ. ಸಿ.ಹೆಚ್.ಮುರುಗೇಂದ್ರಪ್ಪ, ಡಾ.ರವೀಂದ್ರ ಕಮ್ಮಾರ, ಕರಿಯಪ್ಪ ಹೆಂಚಿನಮನಿ, ಸಾಲಿಗ್ರಾಮ ಗಣೇಶ್ ಶೆಣೈ ಮುಂತಾದವರು ಉಪಸ್ಥಿತರಿದ್ದರು.

## ರಾಮ ಮಂದಿರಕ್ಕೆ ಇಂದ್ರಪ್ಪ ಗೌಡ್ರು ಲಕ್ಷ ರೂ.



ದಾವಣಗೆರೆ, ಫೆ. 6 - ಶ್ರೀನಿತ್ಯ ಚೇತನಾ ಚಿಟ್ಸ್ ಪ್ರೈ. ಲಿಮಿಟೆಡ್ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಶ್ರೀ ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್ ಮಾಲೀಕರೂ, ಬಿಜೆಪಿ ಮುಖಂಡರೂ ಆದ ಇಂದ್ರಪ್ಪ ಗೌಡ್ರು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಮಂದಿರ ನಿರ್ಮಾಣಕ್ಕೆ ಒಂದು ಲಕ್ಷದ ಒಂದು ಸಾವಿರದ ಒಂದು ರೂಪಾಯಿಗಳನ್ನು ದಾವಣಗೆರೆ ಪ್ರವಾಸಿ ಮಂದಿರದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್ ಅವರ ಸಮ್ಮುಖದಲ್ಲಿ ಆರ್.ಎಸ್.ಎಸ್. ಮುಖಂಡರಾದ ರಮೇಶ್ ಇವರಿಗೆ ನೀಡಿದರು.

ಈ ಸಂದರ್ಭದಲ್ಲಿ ಜಿ.ಪಂ.ಸದಸ್ಯರಾದ ಬಿ.ದುರ್ಗದ ಲಿಂಗರಾಜ್, ಅಜ್ಜಣ್ಣ, ಎಪಿಎಂಸಿ, ಯತಿನ್‌ಗೌಡ ಮತ್ತಿತರರು ಉಪಸ್ಥಿತರಿದ್ದರು.

# ಜಗಳೂರು: 6 ಗ್ರಾ.ಪಂ.ಗೆ ಅವಿರೋಧ ಆಯ್ಕೆ

ಜಗಳೂರು, ಫೆ6 - ತಾಲ್ಲೂಕಿನ ಅಣಬೂರು, ತೋರಣಗಟ್ಟೆ, ಬಸವನಕೋಟೆ, ಕೆಚ್ಚೇನಹಳ್ಳಿ, ಪಲ್ಲಾಗಟ್ಟೆ, ಹಿರೇಮಲ್ಲನಹೊಳೆ ಸೇರಿದಂತೆ 6 ಗ್ರಾಮಪಂಚಾಯಿತಿಗಳಲ್ಲಿ ಶನಿವಾರ ನಡೆದ ಗ್ರಾ.ಪಂಅಧ್ಯಕ್ಷ ಉಪಾಧ್ಯಕ್ಷ ಹುದ್ದೆಗಳಿಗೆ ನಡೆದ ಚುನಾವಣೆಗಳ ಫಲಿತಾಂಶದ ವಿವರ.

ಅಧ್ಯಕ್ಷರ ಸ್ಥಾನಗಳು ಅವಿರೋಧವಾಗಿ ಆಯ್ಕೆಯಾದರೆ ಹಿರೇಮಲ್ಲನಹೊಳೆ,ತೋರಣಗಟ್ಟೆ ಗ್ರಾ.ಪಂಗಳಲ್ಲಿ ಮಾತ್ರ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆದಿದ್ದು ಹೊರತು ಪಡಿಸಿ ಉಳಿದಂತೆ ಉಪಾಧ್ಯಕ್ಷ ಸ್ಥಾನಗಳಿಗೆ ಪಕ್ಷಾತೀತವಾಗಿ ಅವಿರೋಧ ಆಯ್ಕೆಯಾಗಿವೆ.

ತಾಲ್ಲೂಕಿನ ಅಣಬೂರು ಗ್ರಾಮಪಂಚಾಯಿತಿ ಎಸ್ ಸಿ ಮಹಿಳೆ ಮೀಸಲು ಅಧ್ಯಕ್ಷೆ ಸ್ಥಾನಕ್ಕೆ ಮೀನಾಕ್ಷಿಬಾಯಿ ಹಾಗೂ ಅನುಸೂಚಿತ ಪಂಗಡ ಮೀಸಲು ಉಪಾಧ್ಯಕ್ಷೆ ಸ್ಥಾನಕ್ಕೆ ಸುನಿತಾ ಹೆಚ್. ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಸಿಡಿಪಿಓ ಬಿರೇಂದ್ರ ಅವರು ಘೋಷಿಸಿದರು.

ತೋರಣಗಟ್ಟೆ ಗ್ರಾ.ಪಂ ನ ಎಸ್ ಸಿ ಮಹಿಳೆ ಮೀಸಲು ಅಧ್ಯಕ್ಷ ಸ್ಥಾನಕ್ಕೆ ಲಿಂಗಣ್ಣನಹಳ್ಳಿ ಚೌಡಮ್ಮ ಬಸವರಾಜಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದು. ಎಸ್ ಟಿ ಮೀಸಲು ಉಪಾಧ್ಯಕ್ಷ ಸ್ಥಾನಕ್ಕೆ ಪಾಂಡುರಂಗಪ್ಪ ಮತ್ತು ಮಂಗಳಮ್ಮ ಅವರು ನಾಮಪತ್ರ ಸಲ್ಲಿಸಿದ್ದರು. ಒಟ್ಟು 17 ಗ್ರಾ.ಪಂ ಸದಸ್ಯರಲ್ಲಿ ಪಾಂಡುರಂಗಪ್ಪ ಅವರು 12 ಮತಗಳ ಬೆಂಬಲ ಪಡೆದು 7 ಮತಗಳ ಅಂತರದ ಗೆಲುವು ಸಾಧಿಸಿದರು. ಮಂಗಳಮ್ಮ 5 ಮತಗಳನ್ನು ಪಡೆದು ಪರಾಭವಗೊಂಡರು. ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಎಪಿಎಂಸಿ ಕಾರ್ಯದರ್ಶಿ ಯೋಗರಾಜ್ ಘೋಷಿಸಿದರು.

ಬಸವನಕೋಟೆ ಗ್ರಾ.ಪಂ ಎಸ್ ಟಿ ಮೀಸಲು ಅಧ್ಯಕ್ಷ ಸ್ಥಾನಕ್ಕೆ ರೇಖಾ ಕೊಟ್ರೇಶ್ ಹಾಗೂ ಸಾಮಾನ್ಯ ಮಹಿಳೆ ಮೀಸಲು ಉಪಾಧ್ಯಕ್ಷ ಸ್ಥಾನಕ್ಕೆ ಮರಿಯಮ್ಮ ಅವಿರೋಧವಾಗಿ ಆಯ್ಕೆಯಾದರು. ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ತೋಟಗಾರಿಕೆ ಇಲಾಖೆ ಎಡಿಸಿ ವೆಂಕಟೇಶ್ ಮೂರ್ತಿ ಘೋಷಿಸಿದರು.

ಕೆಚ್ಚೇನಹಳ್ಳಿ ಗ್ರಾ.ಪಂ ಎಸ್ ಸಿ ಮಹಿಳೆ ಮೀಸಲು ಅಧ್ಯಕ್ಷೆಯಾಗಿ ನಾಗಮ್ಮ ಉಪಾಧ್ಯಕ್ಷರಾಗಿ ನರೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್ ಘೋಷಿಸಿದರು.

ಪಲ್ಲಾಗಟ್ಟೆ ಗ್ರಾ.ಪಂ ಎಸ್ ಟಿ ಮಹಿಳೆ ಮೀಸಲು ಅಧ್ಯಕ್ಷ ಸ್ಥಾನಕ್ಕೆ ಗಾಯಿತ್ರಿ ಹನುಮಂತಪ್ಪ, ಎಸ್ ಟಿ ಮಹಿಳೆ ಉಪಾಧ್ಯಕ್ಷ ಸ್ಥಾನಕ್ಕೆ ಮಂಜಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು ಘೋಷಿಸಿದರು.

ಹಿರೇಮಲ್ಲನಹೊಳೆ ಗ್ರಾ.ಪಂ ಎಸ್ ಟಿ ಮಹಿಳೆ ಮೀಸಲು ಅಧ್ಯಕ್ಷ ಸ್ಥಾನಕ್ಕೆ ಚಿಕ್ಕಮಲ್ಲನಹೊಳೆ ಗೊಲ್ಲರಹಟ್ಟಿ ಗ್ರಾಮದ ಶಿವರುದ್ರಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಮೀಸಲು ಉಪಾಧ್ಯಕ್ಷ ಸ್ಥಾನಕ್ಕೆ ಅನೂಪ್ ಮತ್ತು ರಜಿಯಾ ಅವರು ನಾಮಪತ್ರ ಸಲ್ಲಿಸಿದ್ದರು. ಒಟ್ಟು 20 ಮತಗಳಲ್ಲಿ ಅನೂಪ್ 12 ಮತಗಳನ್ನು ಪಡೆದು ಜಯ ಸಾಧಿಸಿದರು. ರಜಿಯಾ 7 ಮತಗಳನ್ನು ಪಡೆದು ಪರಾಜಿತ ಗೊಂಡರು. 1 ಕುಲಗೆಟ್ಟ ಮತವಾಗಿ ಸೇರಲ್ಪಟ್ಟಿತು. ಎಂದು ಚುನಾವಣೆ ಅಧಿಕಾರಿಯಾಗಿ ಬಿಇಓ ವೆಂಕಟೇಶ್ ಕಾರ್ಯನಿರ್ವಹಿಸಿ ನಂತರ ಘೋಷಿಸಿದರು.

# ಜನಪ್ರತಿನಿಧಿಗಳಿಗೆ ಸಂಗೀತ, ಸಾಹಿತ್ಯದ ತರಬೇತಿ ಅಗತ್ಯ

## ಸಾಣೇಹಳ್ಳಿ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದನೆ



ದಾವಣಗೆರೆ, ಫೆ.6- ಗ್ರಾಮ ಪಂಚಾಯ್ತಿಯಿಂದ ಲೋಕಸಭೆ ವರೆಗಿನ ಜನಪ್ರತಿನಿಧಿಗಳಿಗೆ ಸಂಗೀತ, ಸಾಹಿತ್ಯ ಕಲೆಯ ತರಬೇತಿಯ ಅಗತ್ಯವಿದೆ ಎಂದು ಸಾಣೇಹಳ್ಳಿ ಶ್ರೀಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ನಗರದ ಮಾಗನೂರು ಬಸಪ್ಪ ಸಭಾಂಗಣದಲ್ಲಿ ಶನಿವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಅಖಿಲ ಕರ್ನಾಟಕ ಗಾನಯೋಗಿ ಸಂಗೀತ ಪರಿಷತ್ ಜಿಲ್ಲಾ ಘಟಕದ ಉದ್ಘಾಟನೆ ಹಾಗೂ ಪದಗ್ರಹಣ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜನಪ್ರತಿನಿಧಿಗಳಿಗೆ ಸಂಗೀತ, ಸಾಹಿತ್ಯ, ಕಲೆಯ ತರಬೇತಿ ನೀಡಿದಾಗ ಅವರಲ್ಲಿರುವ ಅವಗುಣಗಳು ಕಡಿಮೆಯಾಗಿ, ಸದ್ಗುಣಗಳು ಹೆಚ್ಚಾಗುತ್ತವೆ. ಇದು ಸಮಾಜ ಮುಖಿಯಾಗಿ ಕೆಲಸ ಮಾಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಇಂದು ಯಾವುದೇ ಸಂಸ್ಕಾರ ಇಲ್ಲದೆ, ಕೇವಲ ಹಣ, ಜಾತಿ ಮತ್ತಿತರೆ ಕಾರಣಗಳಿಂದಾಗಿ ರಾಜಕೀಯಕ್ಕೆ ಬಂದವರ ವರ್ತನೆ ಯಾವ ರೀತಿ ಇರುತ್ತದೆ ಎಂಬುದು ಎಲ್ಲರಿಗೂ ತಿಳಿದಿದೆ. ಅಧಿಕಾರಿಗಳ ಜೊತೆ, ಜನಪ್ರತಿನಿಧಿಗಳ ಜೊತೆ ಹೇಗೆ ವರ್ತಿಸಬೇಕೆಂಬ ಕನಿಷ್ಟ ಅರಿವೂ ಅವರಿಗೆ ಇರುವುದಿಲ್ಲ. ಇದಕ್ಕೆ ಕಾರಣ ಅವರಲ್ಲಿ ಸಾಂಸ್ಕೃತಿಕ ನೆಲೆಗಟ್ಟು ಇಲ್ಲದೇ ಇರುವುದು ಎಂದು ಅಭಿಪ್ರಾಯಿಸಿದರು.

ಸಂಗೀತ ಕಲಿತವರು ಅದನ್ನು ಸದ್ವಿನಿಯೋಗ ಪಡಿಸಿಕೊಳ್ಳಬೇಕು. ಸಂಗೀತದಿಂದಲೇ ಕೆಲವರು ಕೋಟಿ ಕೋಟಿ ರೂ. ಸಂಪಾದನೆ ಮಾಡುತ್ತಿದ್ದಾರೆ. ನಾಟಕೋತ್ಸವಗಳಿಗೆ ಪ್ರತಿಷ್ಠಿತ ಸಂಗೀತಗಾರರನ್ನು ಆಹ್ವಾನಿಸಲು ಸಂಪರ್ಕಿಸಿದಾಗ ಕೆಲವರು 20 ರಿಂದ 40 ಲಕ್ಷ ರೂ. ಸಂಭಾವನೆ ಕೇಳುತ್ತಾರೆ. ಅವರೆಲ್ಲಾ ಅರಮನೆಯ ಸಂಗೀತಗಾರರು. ಆದರೆ ನಾವು ಬಯಸುವುದು ಬಯಲಿಗೆ ಬಂದು ಹಾಡುವ ಬಯಲು ಮನೆಯ ಸಂಗೀತಕಾರರನ್ನು ಎಂದು ಹೇಳಿದರು.

ಅವರು ಹಾಡುತ್ತಲೇ ಖ್ಯಾತರಾಗಿದ್ದಾರೆ. ಸಂಗೀತ ಕೆಲವೇ ವ್ಯಕ್ತಿಗಳಿಗೆ ಮಾತ್ರ ಮೀಸಲಾಗಿಲ್ಲ. ಸಾಧನೆ ಮಾಡಿದ ಎಲ್ಲರಿಗೂ ಕೈ ವಶವಾಗುತ್ತದೆ. ಮನಸ್ಸು ಮಾಡಿದ ಎಲ್ಲರೂ ಶ್ರೇಷ್ಠ ಸಂಗೀತಕಾರರಾಗಲು ಸಾಧ್ಯವಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಹೆಚ್ಚು ಅಂಕ ಗಳಿಸಲೆಂದು ಆಟ, ಸಂಗೀತ, ನೃತ್ಯ, ನಾಟಕದಂತಹ ಕಲೆಗಳನ್ನು ಪರಿಚಯಿಸದೆ, ಕೇವಲ ಟ್ಯೂಷನ್‌ಗೆ ಸೀಮಿತಗೊಳಿಸುತ್ತಾರೆ. ಇದು ಅನೇಕ ರೀತಿಯ ಅವಾಂತರಗಳಿಗೆ ಕಾರಣವಾಗುತ್ತದೆ. ಮಕ್ಕಳಿಗೆ ಅಂತರ್ ಬೋಧನೆಯೂ ಬೇಕಿದೆ. ಅದಕ್ಕಾಗಿ ಪೋಷಕರು ತಾವೂ ಉತ್ತಮ ಸಂಸ್ಕಾರ ಪಡೆದುಕೊಳ್ಳುವ ಜೊತೆಗೆ ಮಕ್ಕಳಿಗೆ ಬಾಲ್ಯದಲ್ಲಿಯೇ ಸಂಸ್ಕಾರ ನೀಡಬೇಕು ಎಂದರು.

ರಂಗಭೂಮಿಗೂ ಸಂಗೀತಕ್ಕೂ ವಿಶೇಷ ಸಂಬಂಧವಿದೆ ಎಂದು ವಿಶ್ಲೇಷಿಸಿದ ಶ್ರೀಗಳು, ನಾಟಕದಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಅಭಿನಯ, ಮಾತುಗಾರಿಕೆ ಸೇರಿದಂತೆ ಎಲ್ಲಾ ಕಲೆಗಳು ಸಂಘಟಿತವಾಗುತ್ತವೆ. ಇವೆಲ್ಲವೂ ಸೇರಿದಾಗ ಓರ್ವ ಶ್ರೇಷ್ಠ ನಟನಾಗಲು ಸಾಧ್ಯ ಎಂದರು.

ಪ್ರತಿ ವ್ಯಕ್ತಿಯೂ ಉತ್ತಮ ನಟ. ಜೀವನದಲ್ಲಿ ನಟನೆಯೂ ಬೇಕು. ಆದರೆ ಅದು ಬದುಕಿನ ಸಹಜ ನಟನೆಯಾಗಿರಬೇಕು. ಕೃತಕತೆ, ಮೋಸ, ವಂಚನೆ ಆ ನಟನೆಯಲ್ಲಿ ಇರಬಾರದು. ಅದು ಮನೋಲ್ಲಾಸ ನೀಡಬೇಕು. ಮನೋವಿಕಾರಕ್ಕೆ ಕಾರಣವಾಗುವ ನಟನೆ ಅಗತ್ಯವಿಲ್ಲ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಸರ್ವಮಂಗಳ ಶಂಕರ್ ಅವರು, ಸಂಗೀತದಿಂದ ಆತ್ಮ ತೃಪ್ತಿ, ನೆಮ್ಮದಿ, ಮಾನಸಿಕ ಸ್ಥೈರ್ಯ ಲಭ್ಯವಾಗುತ್ತದೆ. ಸಂಗೀತ ಹಾಡುವವರಿಗೆ ಹೃದಯಾಘಾತದ ಸಂಭವ ಕಡಿಮೆ ಎಂದರು.

ಸಾಮವೇದ ಕಾಲದಿಂದ ಇಲ್ಲಿಯವರೆಗೆ ಸಂಗೀತ ಬೆಳೆದ ದಾರಿ ವಿವರಿಸಿದ ಅವರು, ಹಿಂದೂಸ್ಥಾನ ಸಂಗೀತ ಹಾಗೂ ಕರ್ನಾಟಕ ಸಂಗೀತ ಇಂದು ಬೃಹತ್ ಆಲದ ಮರದಂತೆ ಬೆಳೆದು ಪರಿಪೂರ್ಣ ಸುಮಧುರ ಸಂಗೀತ ನೀಡುತ್ತಿವೆ ಎಂದರು.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸಂಗೀತ ಶಿಕ್ಷಕ ಶಿವಬಸವ ಸ್ವಾಮಿ ಚರಂತಿಮಠ ಪಂ. ಪುಟ್ಟರಾಜ ಗವಾಯಿಗಳವರಿಗೆ ನುಡಿ ನಮನ ಸಲ್ಲಿಸಿದರು.

ದಾವಣಗೆರೆಯ ಅಖಿಲ ಕರ್ನಾಟಕ ಗಾನಯೋಗಿ ಸಂಗೀತ ಪರಿಷತ್ ಅಧ್ಯಕ್ಷೆ ಪಂಕಜಾಕ್ಷಿ ಎಂ.ಬಕ್ಕೇಶ್ ಅಧ್ಯಕ್ಷತೆ ವಹಿಸಿದ್ದರು. ಚನ್ನವೀರಶಾಸ್ತ್ರಿ ಹಿರೇಮಠ, ಎ.ಹೆಚ್. ಶಿವಮೂರ್ತಿಸ್ವಾಮಿ, ಎಂ.ಬಿ. ನಾಗರಾಜ ಕಾಕನೂರು, ಬಿ.ವಾಮದೇವಪ್ಪ, ಸಣ್ಣಪ್ಪ ಸಿ.ಹೆದ್ನೆ ಇತರರು ಉಪಸ್ಥಿತರಿದ್ದರು.

ಪ್ರಾಸ್ತಾವಿಕವಾಗಿ ಎಂ.ಜಿ. ಶಶಿಕಲಾ ಮೂರ್ತಿ ಮಾತನಾಡಿದರು. ವೀರೇಶ್ವರ ಪುಣ್ಯಾಶ್ರಮದ ಮಕ್ಕಳು ಪ್ರಾರ್ಥಿಸಿದರು. ನಾಗರಾಜ ಸಿರಿಗೆರೆ ಕಾರ್ಯಕ್ರಮ ನಿರೂಪಿಸಿದರು. ಬಸವರಾಜ ಹನುಮಲಿ ವಂದಿಸಿದರು.

### ಮಾರ್ಗ ಬಿಟ್ಟು ಹೋಗುವ ಮಠಾಧೀಶರು

**ಬೇರೆ ಬೇರೆ ಕಾರಣಗಳಿಗಾಗಿ ಮಾರ್ಗದರ್ಶನ ಮಾಡಬೇಕಾದವರು ಮಾರ್ಗ ಬಿಟ್ಟು ಹೋಗುತ್ತಿದ್ದಾರೆ ಎಂದು ಸಾಣೇಹಳ್ಳಿಯ ಡಾ.ಪಂಡಿತಾರಾಧ್ಯ ಸ್ವಾಮೀಜಿ ಹೇಳಿದರು.**

**ಮಠಗಳು, ಸ್ವಾಮೀಜಿಗಳು ಶಿಷ್ಯರನ್ನು ಸನ್ಮಾರ್ಗದಲ್ಲಿ ಕರೆದೊಯ್ಯಬೇಕು. ಜಾತಿಯ ಮನೋಭಾವನೆ ಕಿತ್ತು ಹಾಕಿ, ಜ್ಯೋತಿ ಸ್ವರೂಪರಾಗಿ ಬಾಳಬೇಕು. ಆದರೆ ಇಂದು ಏನೇನೋ ಕಾರಣಗಳಿಂದಾಗಿ ತಮ್ಮ ತನ ಕಳೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.**

## ಹರಿಹರದಲ್ಲಿ ಇಂದು ದಾಸರ ಪದಗಳ ಸ್ಪರ್ಧೆ

ಹರಿಹರ, ಫೆ.3- ಪುರಂದರ ದಾಸರ ಆರಾಧನೆ ಪ್ರಯುಕ್ತ ಫೆ. 7 ರಂದು ದಾಸರ ಪದಗಳ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಶ್ರೀ ಚೈತನ್ಯ ಸಂಗೀತ ಮತ್ತು ನೃತ್ಯ ಕಲಾಕೇಂದ್ರ, ಶ್ರೀ ಜೀಜಾಮಾತಾ ಕಾಲೋನಿ, ಹರಿಹರ, ಮೊ: 9663242243, 8073181096 ಸಂಪರ್ಕಿಸುವುದು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 06.02.2021ರಂದು ನಿಧನರಾದ ವಕೀಲರೂ ಹಾಗೂ ನಮ್ಮ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳೂ ಆಗಿದ್ದ

**ಶ್ರೀ ಬೇತೂರು ಬಸವರಾಜಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಆಡಳಿತ ಮಂಡಳಿಯವರು, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗ

**ಶ್ರೀ ಮುರುಘರಾಜೇಂದ್ರ ವಿದ್ಯಾಸಂಸ್ಥೆ (ರಿ.)**

ಶಿಬಾರದ ಹತ್ತಿರ, ಕೊಂಡಜ್ಜಿ ರಸ್ತೆ, ದಾವಣಗೆರೆ.


## ಜಗಳೂರು : 10 ರಂದು ಪ.ಪಂ. ಆಯವ್ಯಯ ಸಭೆ

ದಾವಣಗೆರೆ, ಫೆ.06- ಜಗಳೂರು ಪಟ್ಟಣ ಪಂಚಾಯಿತಿ ಅಧ್ಯಕ್ಷ ಆರ್.ತಿಪ್ಪೇಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಫೆ.10 ರಂದು ಬೆಳಿಗ್ಗೆ 11 ಗಂಟೆಗೆ ಪಟ್ಟಣ ಪಂಚಾಯಿತಿಯ ಕೌನ್ಸಿಲ್ ಸಭಾಂಗಣದಲ್ಲಿ ಬಜೆಟ್ ಪೂರ್ವ ಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ನಾಗರಿಕರನ್ನು ಒಳಗೊಂಡಂತೆ ಸಾರ್ವಜನಿಕರ ಚರ್ಚಾ ಸಭೆ ಏರ್ಪಡಿಸಲಾಗಿದೆ ಎಂದು ಪ.ಪಂ. ಮುಖ್ಯಾಧಿಕಾರಿ ರಾಜು. ಡಿ.ಬಣಕಾರ್ ತಿಳಿಸಿದ್ದಾರೆ.




ಶ್ರೀ ಕೆ.ಎಂ. ಅರುಣ್, ಮೆಕ್ಯಾನಿಕಲ್ ಇಂಜಿನಿಯರ್
ಶ್ಯಾಬನೂರು (ಮೆಳ್ಳೇಕಟ್ಟೆ)

## ಕೈಲಾಸ ಸಮಾರಾಧನೆ ಆಹ್ವಾನ

॥ ಶ್ರೀ ಬಾತಿ ಸಿದ್ದೇಶ್ವರ ಪ್ರಸನ್ನ ॥ ॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

ದಾವಣಗೆರೆ ತಾಲ್ಲೂಕು ಶ್ಯಾಬನೂರು ವಾಸಿ,

**ಶ್ರೀ ಹಳ್ಳಿಗೌಡ್ರು ರಾಮಚಂದ್ರಪ್ಪ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು.

ದಿನಾಂಕ 31.01.2021ನೇ ಭಾನುವಾರ ಬೆಳಿಗ್ಗೆ 8.30 ಕ್ಕೆ

ನನ್ನ ಮಗಳಾದ ಶ್ರೀಮತಿ ಹೆಚ್.ಆರ್. ಗೀತಾ ಮಹೇಶ್ವರಪ್ಪ ಕಾಳವ್ವಳರ ಇವರ ಜೇಷ್ಠ ಪುತ್ರ

**ಶ್ರೀ ಕೆ.ಎಂ. ಅರುಣ್** ಮೆಕ್ಯಾನಿಕಲ್ ಇಂಜಿನಿಯರ್

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 08.02.2021ನೇ ಸೋಮವಾರ ಬೆಳಿಗ್ಗೆ 10.30 ಕ್ಕೆ

ಶ್ಯಾಮನೂರು ಗ್ರಾಮದ ಶ್ರೀ ಹಳ್ಳಿಗೌಡ್ರು ರಾಮಚಂದ್ರಪ್ಪನವರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,

✦ ಶ್ರೀ ಹಳ್ಳಿಗೌಡ್ರು ಹೆಚ್.ಆರ್. ಲಿಂಗರಾಜ್, ಜಿಲ್ಲಾಧ್ಯಕ್ಷರು, ಭಾರತೀಯ ರೈತ ಒಕ್ಕೂಟ, ಶ್ಯಾಮನೂರು. ಮತ್ತು ಮಕ್ಕಳು ✦ ಶ್ರೀಮತಿ ಹೆಚ್.ಆರ್. ಗೀತಾ ಮಹೇಶ್ವರಪ್ಪ ✦ ಶ್ರೀಮತಿ ಪೂಜಾ ಕೆ.ಎಂ. ಅರುಣ್ ✦ ಶ್ರೀಮತಿ ಆಶಾ, ಶ್ರೀ ಕಲ್ಲೇಶ್ ಹಾಗೂ ಚಿ॥ ಕೆ.ಎಂ. ಕಿರಣ್ ✦ ಹಳ್ಳಿಗೌಡ್ರ ವಂಶಸ್ಥರು, ಶ್ಯಾಬನೂರು ✦ ಕಾಳವ್ವಳರ ವಂಶಸ್ಥರು, ಮೆಳ್ಳೇಕಟ್ಟೆ ✦ ರಾಮಗೊಂಡನಹಳ್ಳಿ ವಂಶಸ್ಥರು, ಬಾಡ ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



ಶಿರಮಗೊಂಡನಹಳ್ಳಿಯ

## ಕೆ.ಬಿ. ಉದಯಕುಮಾರ್ ನಿಧನ



ದಾವಣಗೆರೆ ತಾ. ಶಿರಮಗೊಂಡನಹಳ್ಳಿ ಗ್ರಾಮದ ವಾಸಿ ದಿ॥ ಕೊಟ್ಯಾಳ್ (ಕರಿಯಪ್ಪರ) ಭೀಮಪ್ಪನವರ ಮಗ,

**ಕೆ.ಬಿ. ಉದಯಕುಮಾರ್**

ಅವರು ದಿನಾಂಕ 06.02.2021ರ ಶನಿವಾರ ರಾತ್ರಿ 7.00ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 50 ವರ್ಷ ವಯಸ್ಸಾಗಿತ್ತು.

ಪತ್ನಿ, ಮೂವರು ಪುತ್ರಿಯರು, ಇಬ್ಬರು ಸಹೋದರರು, ಆರು ಜನ ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.02.2021ರ ಭಾನುವಾರ ಮಧ್ಯಾಹ್ನ 12.30 ಕ್ಕೆ ಶಿರಮಗೊಂಡನಹಳ್ಳಿಯಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ : 9844373648


## ಕಾಂಕ್ರೀಟ್ ರಸ್ತೆಗೆ ಶಾಸಕರ ಚಾಲನೆ





ರಾಣೇಬೆನ್ನೂರು, ಫೆ.6- ತಾಲ್ಲೂಕಿನ ಬಸಲೀಕಟ್ಟಿ, ಪದ್ಮಾವತಿಪುರ ತಾಂಡಾ, ನಂದಿಹಳ್ಳಿ ಹಾಗೂ ಬೇಲೂರು ಗ್ರಾಮಗಳ ಪರಿಶಿಷ್ಟ ಜಾತಿಯವರ ಓಣಿಗಳಿಗೆ ಸಂಪರ್ಕ ಕಲ್ಪಿಸುವ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಅರುಣಕುಮಾರ ಪೂಜಾರ ಚಾಲನೆ ನೀಡಿದರು. ನಂತರ ಮಾತನಾಡಿದ ಶಾಸಕರು ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳಿಗೆ ಜನರು ಸಹಕಾರ ನೀಡುವಂತೆ ಮನವಿ ಮಾಡಿದರು. ಒಂದು ಕೋಟಿಗೂ ಅಧಿಕ ವೆಚ್ಚದ ಈ ಕಾಮಗಾರಿಯನ್ನು ಗುಣಮಟ್ಟ ಮತ್ತು ನಿಗದಿತ ಅವಧಿಯೊಳಗೆ ಪೂರೈಸುವಂತೆ ಗುತ್ತಿಗೆದಾರರಿಗೆ ಕಟ್ಟಪ್ಪಣೆ ಮಾಡಿದರು.

ತಾ.ಪಂ. ಅಧ್ಯಕ್ಷೆ ಗೀತಾ ಲಮಾಣಿ, ಗ್ರಾ.ಪಂ. ಅಧ್ಯಕ್ಷ ಪರಮೇಶ ಲಮಾಣಿ ಹಾಗೂ ಸದಸ್ಯರು, ನಗರಸಭೆ ಸದಸ್ಯ ಪ್ರಕಾಶ ಪೂಜಾರ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಾದ ಆರ್. ಮಂಜುನಾಥ, ರಾಜು ಹರಮಗಟ್ಟಿ, ಚೇತನಕುಮಾರ, ಗುತ್ತಿಗೆದಾರ ಸಂತೋಷ ಮುಡದ್ಯಾವಣ್ಣನವರ ಇನ್ನಿತರರಿದ್ದರು.

## ದಾವಣಗೆರೆ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯಾಗಿ ಪ್ರಿಯಾಂಕ



ದಾವಣಗೆರೆ, ಫೆ.6 - ದಾವಣಗೆರೆ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯಾಗಿ ಡಿ. ಪ್ರಿಯಾಂಕ ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಹಿಂದಿನ ಹಣಕಾಸು ಅಧಿಕಾರಿ ಪ್ರೊ.ಗೋಪಾಲ ಎಂ. ಅಡವಿರಾವ್, ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ಹಲಸೆ, ಕುಲಸಚಿವ ಪ್ರೊ.ಬಸವರಾಜ ಬಣಕಾರ, ಪರೀಕ್ಷಾಂಗ ಕುಲಸಚಿವರಾದ ಪ್ರೊ.ಎಚ್.ಎಸ್. ಅನಿತಾ ಅವರು ನೂತನ ಹಣಕಾಸು ಅಧಿಕಾರಿಯನ್ನು ಸ್ವಾಗತಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಧಿಕಾರ ವಹಿಸಿಕೊಂಡ ನಂತರ ನಡೆದ ಸರಳ ಕಾರ್ಯಕ್ರಮದಲ್ಲಿ ಪ್ರಿಯಾಂಕ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಯಾಗಿ, ಕಲಿತ ಸಂಸ್ಥೆಯಲ್ಲಿ ಅಧಿಕಾರಿಯಾಗಿ, ಕಲಿಸಿದ ಶಿಕ್ಷಕರ ಜೊತೆಗೂಡಿ ಕೆಲಸ ಮಾಡುವ ಭಾಗ್ಯ ಸಿಕ್ಕಿದೆ. ವಿಶ್ವವಿದ್ಯಾನಿಲಯಕ್ಕೆ ಗೌರವ ತರುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಇದೊಂದು ಅಪೂರ್ವ ಕ್ಷಣ. ಇಂಥ ಅವಕಾಶ ಎಷ್ಟು ಜನರಿಗೆ ಸಿಗುತ್ತೋ ಗೊತ್ತಿಲ್ಲ. ಆದರೆ ನಾನು ಅದನ್ನು ಪಡೆದ ಅದೃಷ್ಟವಂತೆ. ವಿಶ್ವವಿದ್ಯಾನಿಲಯದ ಬೆಳವಣಿಗೆಗಾಗಿ ವಿದ್ಯಾರ್ಥಿನಿಯಾಗಿ ಕಂಡಿದ್ದ ಕನಸನ್ನು ಸಾಧ್ಯವಾದಷ್ಟು ಮಟ್ಟಿಗೆ ಈಡೇರಿಸಲು ಪ್ರಯತ್ನಿಸುತ್ತೇನೆ. ಕಲಿತ ಸಂಸ್ಥೆ ಮತ್ತು ಕಲಿಸಿದ ಗುರುಗಳ ಧ್ಯೇಯಗಳಿಗೆ ಚ್ಯುತಿ ಬಾರದಂತೆ ಎಲ್ಲರಿಗೂ ಪ್ರೇರಣೆಯಾಗಿ, ಸ್ಫೂರ್ತಿಯಾಗಿ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರು.

ಕುಲಪತಿ ಪ್ರೊ.ಶರಣಪ್ಪ ಹಲಸೆ ಮಾತನಾಡಿ, ವಿಶ್ವವಿದ್ಯಾನಿಲಯವು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳಲು ಆಡಳಿತ ಯಂತ್ರದ ಪಾತ್ರ ಬಹು ಮುಖ್ಯ. ಇದಕ್ಕೆ ಎಲ್ಲರ ಸಹಕಾರ ಅಗತ್ಯ. ನೂತನ ಹಣಕಾಸು ಅಧಿಕಾರಿಯಾಗಿರುವ ಪ್ರಿಯಾಂಕ ಅವರು ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ವಿಶ್ವಾಸವಿದೆ ಎಂದರು.

ಈ ಸಂದರ್ಭದಲ್ಲಿ ಕುಲಸಚಿವ ಪ್ರೊ.ಬಸವರಾಜ ಬಣಕಾರ, ಪರೀಕ್ಷಾಂಗ ಕುಲಸಚಿವೆ ಪ್ರೊ.ಎಚ್.ಎಸ್. ಅನಿತಾ, ಹಿಂದಿನ ಹಣಕಾಸು ಅಧಿಕಾರಿ ಪ್ರೊ. ಗೋಪಾಲ ಎಂ.ಅಡವಿರಾವ್, ಸಿಂಡಿಕೇಟ್ ಸದಸ್ಯರು, ವಿವಿಧ ನಿಕಾಯಗಳ ಡೀನ್‌ಗಳು ಉಪಸ್ಥಿತರಿದ್ದರು.

# ಕೃಷಿ ತಿದ್ದುಪಡಿ ಕಾಯ್ದೆ ವಾಪಸ್‌ಗೆ ಆಗ್ರಹದ ಕೂಗು

## ರಾಜ್ಯ-ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದ ರೈತ ಸಂಘಟನೆಗಳು

ದಾವಣಗೆರೆ, ಫೆ.6- ಜಿಲ್ಲೆಯಲ್ಲಿ ರೈತ ಸಂಘಟನೆಗಳು ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿ ತಡೆ ಚಳವಳಿ ನಡೆಸಿ, ಕೃಷಿ ತಿದ್ದುಪಡಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಸರ್ಕಾರಕ್ಕೆ ಆಗ್ರಹದ ಕೂಗು ಹಾಕಿದರು.

ತಾಲ್ಲೂಕಿನ ಹೆಚ್. ಕಲಪನಹಳ್ಳಿ ಬಳಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಂಜುನಾಥ ಬಣ), ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ (ಕೋಡಿಹಳ್ಳಿ ಚಂದ್ರಶೇಖರ್ ಬಣ), ಅಖಿಲ ಭಾರತ ರೈತ ಹೋರಾಟ ಸಂಘರ್ಷ ಸಮಿತಿ ಜಿಲ್ಲಾ ಘಟಕ, ಎಐಕೆಎಸ್ ಸಂಘಟನೆ, ಎಐಡಿಎಸ್‌ಓ ಸಂಘಟನೆ, ಎಐಕೆಕೆಎಂಎಸ್, ಆಮ್ ಆದ್ಮಿ ಪಾರ್ಟಿ, ಕಾರ್ಮಿಕ, ವಿದ್ಯಾರ್ಥಿ ಸಂಘಟನೆಗಳು ಸೇರಿದಂತೆ ಎಡಪಂಥೀಯ ಸಂಘಟನೆಗಳು ಸೇರಿದಂತೆ ಸುಮಾರು 14 ವಿವಿಧ ಸಂಘಟನೆಗಳು ಜಂಟಿಯಾಗಿ ರಾಷ್ಟ್ರೀಯ ಹೆದ್ದಾರಿ ತಡೆದು, ಪ್ರತಿಭಟನಾ ಧರಣಿ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ತಾಲ್ಲೂಕಿನ ನೀರ್ಥಡಿ ಬಳಿಯೂ ರೈತ ಸಂಘಟನೆಯಿಂದ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಲಾಗಿದೆ.

ದುಡಿಯುವ ಕೈಗಳನ್ನು ಕೈ ಎತ್ತುವಂತೆ ಮಾಡಬೇಡಿ. ಮಾರಕವಾಗಿರುವ ಎಪಿಎಂಸಿ ಕಾಯ್ದೆ, ವಿದ್ಯುಚ್ಛಕ್ತಿ ಕಾಯ್ದೆ, ಕೃಷಿ ಕಾಯ್ದೆಗಳ ತಿದ್ದುಪಡಿ ವಿರುದ್ಧ ಕೆಲ ದಿನಗಳಿಂದ ದೆಹಲಿಯಲ್ಲಿ ನಡೆಸುತ್ತಿರುವ ರೈತರ ಹೋರಾಟವನ್ನು ಹತ್ತಿಕ್ಕಲು ಮುಂದಾಗಿರುವುದು ಎಷ್ಟು ಸರಿ. ನೀವು ಜನನಾಯಕರೇ ಎಂದು ಅಮಿತ್ ಷಾ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರತಿಭಟನಾ ನಿರತ ರೈತರು ಪ್ರಶ್ನಿಸಿದರಲ್ಲದೇ, ರೈತರ ಸಂಕಷ್ಟಕ್ಕೆ ಸ್ಪಂದಿಸಲು ಆಗದಿದ್ದರೆ ರಾಜೀನಾಮೆ ಕೊಡಿ. ರೈತರನ್ನು ಕೆಣಕಬೇಡಿ ಎಂದು ಕಿಡಿಕಾರಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಕೇಂದ್ರ ಸರ್ಕಾರ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೆ ತರಬೇಕು. ರೈತರು ಬೆಳೆದ ಬೆಳೆಗಳಿಗೆ ಅವರೇ ಬೆಲೆ ನಿಗದಿ ಮಾಡುವ ಕಾಯ್ದೆ ಜಾರಿಗೆ ತರಬೇಕು. ಈ ಕಾಯ್ದೆಯನ್ನು ಉಲ್ಲಂಘಿಸಿದರೆ ಆರು ತಿಂಗಳು ಜೈಲು, ದಂಡ ಮತ್ತು ಲೈಸನ್ಸ್ ರದ್ದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರೈತ ಮುಖಂಡ ರವಿಕುಮಾರ ಬಲ್ಲೂರು ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರೈತ ಕಾಯ್ದೆಗಳನ್ನು ಶಿಫಾರಸ್ಸು ಮಾಡಿದ ಪಂಡಿತರು ಮತ್ತು ಕೇಂದ್ರ, ರಾಜ್ಯ ಕೃಷಿ ಮಂತ್ರಿಗಳು ರೈತರೊಂದಿಗೆ ಚರ್ಚೆಗೆ ಬರಬೇಕು. ಹಾದಿ-ಬೀದಿಯಲ್ಲಿ ಚರ್ಚೆ ಬೇಡ, ನೀವುಗಳು ಯಾರು ಕೃಷಿ ಕಾಯ್ದೆಗಳನ್ನು ಬೆಂಬಲಿಸುತ್ತಿದ್ದೀರಿ ಅವರ ಜಮೀನಿನಲ್ಲೇ ಚರ್ಚೆ ಮಾಡಬೇಕು. ನಾವುಗಳು ನೀವು ಹೇಳಿದ ಸ್ಥಳಕ್ಕೆ ಬರುತ್ತೇವೆ. ಆಗ, ಈ ಕಾಯ್ದೆಗಳಿಂದ ಏನೇನು ಅನುಕೂಲ ಆಗಲಿದೆ ಎಂದು ನಮಗೆ ಮನದಟ್ಟು ಮಾಡಲಿ ಎಂದು ಸವಾಲು ಹಾಕಿದರು.

ಹೆದ್ದಾರಿ ಚಳವಳಿಯಲ್ಲಿ ರೈತ ಮುಖಂಡರಾದ ಹೊನ್ನೂರು ಮುನಿಯಪ್ಪ, ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಶೇಖರ ನಾಯ್ಕ, ಗುಮ್ಮನೂರು ಬಸವರಾಜ್, ಕೆಂಚಮ್ಮನಹಳ್ಳಿ ಹನುಮಂತ, ನೀರ್ಥಡಿ ತಿಪ್ಪೇಶ್, ಹುಚ್ಚವ್ವನಹಳ್ಳಿ ಪ್ರಕಾಶ್, ಹುಚ್ಚವ್ವನಹಳ್ಳಿ ಗಣೇಶ್, ಕಾರ್ಮಿಕ ಮುಖಂಡರಾದ ಹೆಚ್.ಜಿ. ಉಮೇಶ್, ವಿವಿಧ ಸಂಘಟನೆಗಳ ಮುಖಂಡರಾದ ರೈತ ಕೃಷಿ ಕಾರ್ಮಿಕ ಸಂಘಟನೆ ರಾಜ್ಯಾಧ್ಯಕ್ಷ ಡಾ. ಸುನೀತ್ ಕುಮಾರ್, ಅಪರ್ಣಾ ಬಿ.ಆರ್. ಶಶಿಧರ್, ಮಂಜುನಾಥ ಕೈದಾಳೆ, ಅಣಬೇರು ತಿಪ್ಪೇಸ್ವಾಮಿ, ಸತೀಶ್ ಅರವಿಂದ್, ಭಾರತಿ, ಪರಶುರಾಮ್, ಸೌಮ್ಯ, ನಾಗಜ್ಯೋತಿ, ಪೂಜಾ, ಲೋಕೇಶ್ ನೀರ್ಥಡಿ, ಬೀರಲಿಂಗಪ್ಪ ನೀರ್ಥಡಿ, ಜನಶಕ್ತಿ ಸತೀಶ್ ಅರವಿಂದ್ ಇತರರು ಭಾಗವಹಿಸಿದ್ದರು.



### ಮಾನವೀಯತೆ ಮರೆದ ಡಿವೈಎಸ್ಪಿ ತಾಮ್ರಧ್ವಜ

ಬಸ್‌ನಲ್ಲಿ ಭರಮಸಾಗರದಿಂದ ದಾವಣಗೆರೆಯ ಆಸ್ಪತ್ರೆಗೆ ಮಾನಸ ಎಂಬ ಮಹಿಳೆಯು ಮಗಳಿಗೆ ಚಿಕಿತ್ಸೆ ಕೊಡಿ ಸಲು ತೆರಳುತ್ತಿದ್ದಾಗ, ಹೆಚ್. ಕಲಪನಹಳ್ಳಿ ಬಳಿ ಹೆದ್ದಾರಿ ಚಳವಳಿ ಸಂದರ್ಭದಲ್ಲಿ ವಾಹನಗಳ ಸಂಚಾರ ಸ್ಥಗಿತಕೊಂಡಿದ್ದರಿಂದ ಆ ಮಹಿಳೆಯ ಮಗಳ ತುರ್ತು ಚಿಕಿತ್ಸೆಗೆ ಮನವಿ ಮಾಡಿದಾಗ, ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ಅವರು ಬೇರೆ ವಾಹನದ ವ್ಯವಸ್ಥೆ ಕಲ್ಪಿಸಿ ಮಾನವೀಯತೆ ಮೆರೆದರು.

### ಗಂಟೆಗಳ ಕಾಲ ರಸ್ತೆ ತಡೆ

**ಸುಮಾರು ಒಂದು ಗಂಟೆಗಳ ಕಾಲ ರಸ್ತೆ ತಡೆಯಿಂದಾಗಿ ಎರಡೂ ಬದಿಯ ರಸ್ತೆಗಳಲ್ಲಿ ವಾಹನಗಳ ಸಂಚಾರ ಸ್ಥಗಿತಗೊಂಡು, ವಾಹನಗಳ ಸಾಲು ಸುಮಾರು 2 ಕಿ.ಮಿ. ದೂರದವರೆಗೂ ಇತ್ತು. ದೂರದ ಊರುಗಳಿಗೆ ತೆರಳಬೇಕಾದ ವಾಹನಗಳ ಸವಾರರು, ಬಸ್ ನ ಪ್ರಯಾಣಿಕರು ಹೈರಾಣಾದರು. ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ಜನರು ಇಳಿದು ಸಮೀಪದ ತಮ್ಮ ಊರುಗಳಿಗೆ ಕಾಲ್ನಡಿಗೆಯಲ್ಲಿ ತೆರಳಿದರು. ದಾವಣಗೆರೆಗೆ ಟಿಕೆಟ್ ಪಡೆದು ಬಸ್ ಇಳಿದಿದ್ದ ಮತ್ತೆ ಕೆಲ ಪ್ರಯಾಣಿಕರು ಪುನಃ ಬಸ್‌ನಲ್ಲಿ ಪ್ರಯಾಣಿಸಲು ಹರಸಾಹಸ ಪಟ್ಟರು. ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಪ್ರತಿಭಟನೆ ಕೈ ಬಿಡುವಂತೆ ಪೊಲೀಸರು ಹೇಳಿದ ವೇಳೆ ಪೊಲೀಸರು ಮತ್ತು ಪ್ರತಿಭಟನಾನಿರತರ ನಡುವೆ ಕೆಲಕಾಲ ವಾಗ್ವಾದ ನಡೆಯಿತು. ನಂತರ ಪೊಲೀಸರ ಮನವೊಲಿಕೆಗೆ ಪ್ರತಿಭಟನಾಕಾರರು ಸ್ಪಂದಿಸಿ ಮೂರು ತಾಸಿನ ಪ್ರತಿಭಟನೆಯನ್ನು ಒಂದೇ ಗಂಟೆಗೆ ಸೀಮಿತಗೊಳಿಸಿದರು. ಹೋರಾಟ ಕೈ ಬಿಡುತ್ತಿದ್ದಂತೆ ವಾಹನಗಳ ಸುಗಮ ಸಂಚಾರಕ್ಕೆ ಮತ್ತು ರಸ್ತೆ ಮೇಲಿದ್ದ ಸಾರ್ವಜನಿಕರನ್ನು ಸುರಕ್ಷಿತವಾಗಿ ರಸ್ತೆ ದಾಟಿಸಲು ಪೊಲೀಸರು ಕಾರ್ಯಪ್ರವೃತ್ತರಾದರು.**

## ನಗರದಲ್ಲಿ ಇಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕರೂರು ಇಂಡಸ್ಟ್ರಿಯಲ್ ಏರಿಯಾ, ಜಿಲ್ಲಾಧಿಕಾರಿಗಳ ಕಛೇರಿ, ಜಿ.ಎಮ್.ಐ.ಟಿ ಹಿಂಭಾಗ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಮತ್ತು ಇಂಡಸ್ಟ್ರಿಯಲ್ ಏರಿಯ ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯನಗರ, ಎಸ್.ಎ. ರವೀಂದ್ರನಾಥ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶ ಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

## ಜಗಳೂರು : ರೈತ ಸಂಘಟನೆಯಿಂದ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ



ಜಗಳೂರು, ಫೆ.6 - ರೈತವಿರೋಧಿ ಕೃಷಿ ಕಾಯ್ದೆ ವಿರೋಧಿಸಿ ತಾಲ್ಲೂಕಿನ ದೊಣ್ಣೆಹಳ್ಳಿ ರಾಷ್ಟ್ರೀಯ ಹೆದ್ದಾರಿ ಬಳಿ ಕರ್ನಾಟಕ ರಾಜ್ಯ ರೈತ ಸಂಘ (ಹುಚ್ಚವ್ವನಹಳ್ಳಿ ಮಂಜುನಾಥ್) ದ ಪದಾಧಿಕಾರಿಗಳು ರಾಜ್ಯ ಹೆದ್ದಾರಿ 50 ಹಾಗೂ ಸೊಕ್ಕೆ ಹೋಬಳಿ ಚಿಕ್ಕಬಂಟನಹಳ್ಳಿ ಬಳಿ ಚಳ್ಳಕೆರೆ ಅರಭಾವಿ ರಾಜ್ಯ ಹೆದ್ದಾರಿ ಬಳಿ ಪ್ರತಿಭಟನೆ ನಡೆಸಿ ನಂತರ ತಹಶೀಲ್ದಾರ್ ಡಾ.ನಾಗವೇಣಿ ಅವರಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರ ರೈತ ವಿರೋಧಿ ಮೂರು ವಿದ್ಯುತಚ್ಛಕ್ತಿ, ಗುತ್ತಿಗೆ ಬೇಸಾಯ, ಹಾಗೂ ಎಪಿಎಂಸಿ ಕಾಯ್ದೆಗಳನ್ನು ಕೂಡಲೆ ಹಿಂಪಡೆಯ ಬೇಕು ಎಂದು ಒತ್ತಾಯಿಸಿದರು.

ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಘೋಷಿತ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿಸುವವರ ಪರವಾನಿಗೆ ರದ್ದುಪಡಿಸಬೇಕು ಅಲ್ಲದೆ ಬಂಡವಾಳಶಾಹಿಗಳ ಕೈಗೊಂಬೆಯಾಗಿ ಜಾರಿಗೆ ಖಾಸಗೀಕರಣದ ಹುನ್ನಾರ ಕೈಬಿಡಬೇಕು. ರೈತರ ಪರವಾಗಿ ಎಂದು ಹೇಳುವ ಸರ್ಕಾರಗಳು ರೈತರಿಗೆ ಮಾರಕವಾಗಿರುವ ಕಾಯ್ದೆಗಳನ್ನು ಜಾರಿಗೆ ತರಲು ಹೊರಟಿರುವುದು ಖಂಡನೀಯ ಎಂದರು.

ಈ ಸಂದರ್ಭದಲ್ಲಿ ರೈತ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಚಿರಂಜೀವಿ, ಪದಾಧಿಕಾರಿಗಳಾದ ಗೌಡಗೊಂಡನಹಳ್ಳಿ ಸತೀಶ್, ಶರಣಪ್ಪ, ಕೆಂಚಪ್ಪ, ರಾಜು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಸಿಪಿಐ ಡಿ.ದುರುಗಪ್ಪ ಹಾಗೂ ಪಿಎಸ್ ಐ ಸಂತೋಷ್ ಭಾಗೋಜಿ ಪ್ರತಿಭಟನೆಗೆ ರಕ್ಷಣೆ ಒದಗಿಸಿದರು.

## ಲಸಿಕಾ ಅಭಿಯಾನ ಚುರುಕುಗೊಳಿಸಲು ರಾಜ್ಯಗಳಿಗೆ ಸೂಚನೆ

ನವದೆಹಲಿ, ಫೆ. 6 -ಕೊರೊನಾ ಲಸಿಕೆ ಅಭಿಯಾನವನ್ನು ಚುರುಕುಗೊಳಿಸುವಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದ್ದು, ಫೆಬ್ರವರಿ 20ರ ಒಳಗೆ ಎಲ್ಲಾ ಆರೋಗ್ಯಕಾರ್ಯಕರ್ತರಿಗೆ ಕನಿಷ್ಠ ಮೊದಲ ಸುತ್ತಿನ ಲಸಿಕೆ ದೊರೆಯುವಂತಾಗಬೇಕು ಎಂದು ಹೇಳಿದೆ.

ಜನವರಿ 16ರಿಂದ ಲಸಿಕಾ ಅಭಿಯಾನ ಆರಂಭಿಸಲಾಗಿತ್ತು. ಫೆಬ್ರವರಿ 13ರಿಂದ ಎರಡನೇ ಸುತ್ತಿನ ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ಸಿಗಲಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

## 24ರಂದು ಹರಿಹರದಲ್ಲಿ ಉಚಿತ ಸಾಮೂಹಿಕ ಕಲ್ಯಾಣ ಮಹೋತ್ಸವ

ದಾವಣಗೆರೆ, ಜ. 27- ಹರಿಹರದ ಕರುನಾಡ ಕದಂಬ ರಕ್ಷಣಾ ವೇದಿಕೆಯಿಂದ ಸರ್ವಧರ್ಮೀಯರ ಉಚಿತ ಸಾಮೂಹಿಕ ಕಲ್ಯಾಣ ಮಹೋತ್ಸವವನ್ನು ಇದೇ ದಿನಾಂಕ 24ರ ಬುಧವಾರ ಹರಿಹರದ ಗಾಂಧಿ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರುನಾಡ ಕದಂಬ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಹೆಚ್.ಸುಧಾಕರ್ ಹೇಳಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ದಿನಾಂಕ 15 ರೊಳಗೆ ಹೆಸರು ನೋಂದಾಯಿಸುವಂತೆ ಸುಧಾಕರ್ ಕೋರಿದ್ದಾರೆ. ಹರಿಹರ ಟೈಮ್ಸ್ ಪತ್ರಿಕೆ ಸಹಯೋಗದಲ್ಲಿ ಸುವರ್ಣ ಕರ್ನಾಟಕ ಸುದ್ದಿ ವಾಹಿನಿಯನ್ನೂ ಇದೇ ಸಂದರ್ಭದಲ್ಲಿ ಅನಾವರಣಗೊಳಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ಹೆಚ್.ಕೆ. ಕೊಟ್ರಪ್ಪ, ಸುರೇಶ್ ಮಂಡಕ್ಕಿ ಹರಪನಹಳ್ಳಿ, ರಾಜೀವ್, ಶ್ರೀಧರ್, ಸಾಗರ್ ಮೆಹರ್ವಾಡೆ, ಬಸವರಾಜ್, ಹೆರಬಾಳು ಬಸವರಾಜ್, ಶಿವರಾಜ್ ಹಾಗೂ ಇತರರು ಉಪಸ್ಥಿತರಿದ್ದರು.



## ಹರಿಹರ ಪೌರಸೇವಾ ಸಂಘಕ್ಕೆ ಆಯ್ಕೆ

ಹರಿಹರ, ಫೆ.6- ಕರ್ನಾಟಕ ರಾಜ್ಯ ಪೌರಸೇವಾ ಸಂಘದ ಜಿಲ್ಲಾ ಅಧ್ಯಕ್ಷ ಎಂ. ಗುರುನಾಥರವರ ಅಧ್ಯಕ್ಷತೆಯಲ್ಲಿ ನಡೆದ ಹರಿಹರ ಶಾಖೆಯ ಚುನಾವಣೆಯಲ್ಲಿ ಪಿ.ಹೆಚ್. ಸದಾಶಿವ, ಖಜಾಂಚಿ ಎ. ನಸ್ರುಲ್ಲಾ, ಪಿ ವಸಂತ್, ರಮೇಶ, ಹುಚ್ಚೆಂಗಪ್ಪ. ಅಜ್ಜಪ್ಪ.ಪಿ.ಹೆಚ್, ರಾಮಕೃಷ್ಣ ಹಾಗೂ ಇತರರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂಧರ್ಭದಲ್ಲಿ ಹರಿಹರ ನಗರಸಭೆಯ ಪೌರಾಕಾರ್ಮಿಕರು ಹಾಗೂ ಶಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನಗರದಲ್ಲಿಂದು 'ಅಧಿಷ್ಠಾನ' ಕೃತಿ ಲೋಕಾರ್ಪಣೆ, ಕವಿಗೋಷ್ಠಿ

ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ತಾಲ್ಲೂಕು ಘಟಕದ ಆಶ್ರಯದಲ್ಲಿ ಕನ್ನಡ ಜಾಗೃತಿ ಕೇಂದ್ರ, ಸ್ಫೂರ್ತಿ ಪ್ರಕಾಶನ ತೆಲಗಿ, ಭಾವಸಿರಿ ಪ್ರಕಾಶನ ಅಣಬೇರು ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ರೋಟರಿ ಬಾಲಭವನದಲ್ಲಿ 'ಅಧಿಷ್ಠಾನ' ಕೃತಿ ಲೋಕಾರ್ಪಣೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಜಿ.ಹೆಚ್. ರಾಜಶೇಖರ್ ಗುಂಡಗಟ್ಟಿ ವಹಿಸುವರು. ಎಸ್. ಮಲ್ಲಿಕಾರ್ಜುನಪ್ಪ ಪ್ರಾಸ್ತಾವಿಕ ನುಡಿ ನಡೆಸಿಕೊಡುವರು. ಡಾ. ಕೊಟ್ರೇಶ್ ಉತ್ತಂಗಿ ಜ್ಯೋತಿ ಬೆಳಗಿಸುವರು. ಹೆಚ್. ಮಲ್ಲಿಕಾರ್ಜುನ್ ಕೃತಿ ಲೋಕಾರ್ಪಣೆ ಮಾಡುವರು. ಕೆ. ಸಿದ್ದಪ್ಪನವರು ಕೃತಿಯ ಅಂತರಂಗದ ನುಡಿಗಳನ್ನಾಡುವರು.ಕಾರ್ಯಕ್ರಮದಲ್ಲಿ ಜಿ.ಎಸ್. ಶರಣಯ್ಯ ಉಪಸ್ಥಿತರಿರುವರು.

ಮಧ್ಯಾಹ್ನ 1 ಗಂಟೆಗೆ ನಡೆಯುವ ಕವಿಗೋಷ್ಠಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಜಯಮ್ಮನೀಲಗುಂದ ವಹಿಸುವರು. ಮಹಾಂತೇಶ್ ಬಿ. ನಿಟ್ಟೂರು ಆಶಯ ನುಡಿಗಳನ್ನಾಡುವರು.

# ಸರ್ಕಾರಿ ಸವಲತ್ತು ಸದ್ಬಳಕೆ ಮಾಡಿಕೊಳ್ಳಿ

## ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ದುರ್ಯೋಧನ ಎಂ. ಐಹೊಳೆ



ದಾವಣಗೆರೆ, ಫೆ.6- ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷರೂ, ರಾಯಬಾಗ್ ಶಾಸಕರೂ ಆದ ದುರ್ಯೋಧನ ಎಂ.ಐಹೊಳೆ ಅವರು ಶನಿವಾರ ನಗರದಲ್ಲಿನ ನಿಗಮದ ಜಿಲ್ಲಾ ಕಚೇರಿಗೆ ಭೇಟಿ ನೀಡಿ ವಿವಿಧ ಯೋಜನೆಗಳಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಿಗಮದ ವತಿಯಿಂದ ಸವಲತ್ತುಗಳನ್ನು ಪಡೆದ ಫಲಾನುಭವಿಗಳು ಸದ್ಬಳಕೆ ಮಾಡಿಕೊಂಡು, ಆರ್ಥಿಕ ಮಟ್ಟ ಸುಧಾರಿಸಿಕೊಳ್ಳುವಂತೆ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಜೀವನದಲ್ಲಿ ಪ್ರಗತಿ ಹೊಂದುವಂತೆ ಕರೆ ನೀಡಿದರು.

ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಇಲ್ಲಿಯವರೆಗೆ 1.50 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಶೇ.80ರಷ್ಟು ಅನುದಾನ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ. ರಮೇಶ್, ನಿಗಮದಡಿ 105 ಜನರಿಗೆ ಕೊಳವೆ ಬಾವಿ ಕೊರೆಸುವ ಗುರಿ ಹೊಂದಲಾಗಿದ್ದು, 86 ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ. ಉಳಿದವರಿಗೆ ಶೀಘ್ರವೇ ಸೌಲಭ್ಯ ವಿತರಿಸಲಾಗುವುದು ಎಂದು ಹೇಳಿದರು.

ಲಿಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರೂ, ಮಾಯಕೊಂಡ ಶಾಸಕರೂ ಆದ ಪ್ರೊ.ಲಿಂಗಣ್ಣ ಮಾತನಾಡಿ, ಸಮಾಜಕ್ಕೆ ಬರುವ ಸವಲತ್ತುಗಳನ್ನು ನೀಡಿ, ಸಮಾಜವನ್ನು ಮೇಲೆತ್ತುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದಾಗಿ ಹೇಳಿದರು.

ಕೊರೊನಾ ಹಿನ್ನೆಲೆಯಲ್ಲಿ ನಿಗಮಗಳಿಗೆ ಅನುದಾನ ಕಡಿಮೆಯಾಗಿದೆ. ಮುಂದಿನ ವರ್ಷ ಹೆಚ್ಚು ಅನುದಾನ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡಿದ್ದೇವೆ. ಪ್ರಾಯಶಃ ಈ ಬಾರಿಯ ಬಜೆಟ್ ನಲ್ಲಿ ಹೆಚ್ಚಿನ ಅನುದಾನ ನೀಡುವ ಭರವಸೆ ಇದೆ ಎಂದು ಹೇಳಿದರು.

ಈಗಾಗಲೇ ಬೆಂಗಳೂರು, ತುಮಕೂರು, ಚಿತ್ರದುರ್ಗ, ಹುಬ್ಬಳ್ಳಿ ಮುಂತಾದ ಜಿಲ್ಲೆಗಳ ಪ್ರವಾಸ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ನಿಗಮದ ಕೆಲಸ ಕಾರ್ಯಗಳನ್ನು ಪರಿಶೀಲಿಸಿ, ಪ್ರಗತಿಗೆ ಶ್ರಮಿಸುವುದಾಗಿ ಹೇಳಿದರು.

ಐಎಸ್.ಬಿ. ಯೋಜನೆಯಡಿ ಹರಿಹರ ತಾಲ್ಲೂಕು ಮಿಟ್ಲಕಟ್ಟೆ ಗ್ರಾಮದ ಸುಮಲತಾ ಅವರಿಗೆ 1 ಲಕ್ಷ ರೂ., ಹೊನ್ನಾಳಿ ತಾಲ್ಲೂಕು ಐನೂರು ಗ್ರಾಮದ ಮಂಜಮ್ಮ ಅವರಿಗೆ 1 ಲಕ್ಷ ರೂ., ಎಂ.ಸಿ.ಎಫ್. ಪ್ರೇರಣಾ ಯೋಜನೆಯಡಿ ಮಾಯಕೊಂಡ ಕ್ಷೇತ್ರದ ಡಾ.ಬಿ.ಆರ್. ಅಂಬೇಡ್ಕರ್ ಮಹಿಳಾ ಸ್ವ ಸಹಾಯ ಸಂಘಕ್ಕೆ 1.25 ಲಕ್ಷ ರೂ. ಹಾಗೂ ಸಮೃದ್ಧಿ ಯೋಜನೆಯಡಿ ಹರಪನಹಳ್ಳಿ ತಾಲ್ಲೂಕು ಚಿಕ್ಕಕಬ್ಬಳ್ಳಿ ಗ್ರಾಮದ ನೇತ್ರಾವತಿ ಅವರಿಗೆ 50 ಸಾವಿರ ರೂ.ಗಳ ಸಹಾಯಧನದ ಚೆಕ್ ವಿತರಿಸಲಾಯಿತು.

ಹರಿಹರ ತಾಲ್ಲೂಕು ಗುತ್ತೂರು ಗ್ರಾಮದ ಮೈಲಾರಪ್ಪ ಎಂಬುವವರು ನಿಗಮದ ಸಮೃದ್ಧಿ ಯೋಜನೆಯಡಿ 10 ಲಕ್ಷ ರೂ.ಗಳ ಸಹಾಯ ಧನ ಪಡೆದು ಚೆರಿ ಟಯರ್ಸ್ ಘಟಕ ಸ್ಥಾಪಿಸಿದ್ದು, ಅಧ್ಯಕ್ಷರು ಘಟಕಕ್ಕೆ ಭೇಟಿ ನೀಡಿ ವೀಕ್ಷಿಸಿದರು.

ನಿಗಮದ ಉಪ ಪ್ರಧಾನ ವ್ಯವಸ್ಥಾಪಕ ಮಂಜುನಾಥ್, ಸಫಾಯಿ ಕರ್ಮಚಾರಿಗಳ ಸಂಘದ ಜಿಲ್ಲಾಧ್ಯಕ್ಷ ಹುಲಿಗೇಶ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಶ್ರೀ ವಾಲ್ಮೀಕಿ ಸಾಂಸ್ಕೃತಿಕ ಸಭಾ ಭವನ**
ನಾಯಕ ವಿದ್ಯಾರ್ಥಿ ನಿಲಯದ ಆವರಣದ 1ನೇ ಮಹಡಿ, ಕೆಇಬಿ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.
**ಮದುವೆ - ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ಇದೆ**
500 ಕುರ್ಚಿಗಳನ್ನೊಂದಿರುವ ಸಭಾ ಭವನ, 250 ಕುರ್ಚಿಗಳಿರುವ ಊಟದ ಹಾಲ್, ಉಳಿದುಕೊಳ್ಳಲು 9 ರೂಂಗಳು, ಅಡುಗೆ ಪಾತ್ರೆ, ಸಾಮಾನುಗಳು ಎಲ್ಲಾ ಸೇರಿ ಕೇವಲ ರೂ. 15,000 ಗಳಿಗೆ ಮದುವೆ ಮತ್ತು ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
**ಬಿ. ವೀರಣ್ಣ**, ಅಧ್ಯಕ್ಷರು, **ನಾಯಕ ವಿದ್ಯಾರ್ಥಿ ನಿಲಯ,**
ಪಿ.ಜೆ. ಬಡಾವಣೆ, ದಾವಣಗೆರೆ. 80951 71787

**ಸಾಯಿ ಇನ್ ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ಸ್**
(ಕರ್ನಾಟಕ ಸರ್ಕಾರ ಮತ್ತು ಪ್ಯಾರಾಮೆಡಿಕಲ್ ಬೋರ್ಡ್‌ನಿಂದ ಮಾನ್ಯತೆ ಪಡೆದಿದೆ)
ಸರ್ಕಾರಿ ಆಸ್ಪತ್ರೆ ರಸ್ತೆ, ಹೂವಿನಹಡಗಲಿ-583219 ಬಳ್ಳಾರಿ ಜಿ।।
2020-21 ನೇ ಸಾಲಿನ ಪ್ಯಾರಾಮೆಡಿಕಲ್ ಪ್ರವೇಶಕ್ಕೆ 15.02.2021 ಕೊನೆಯ ದಿನಾಂಕ

| ಕ್ರ.ಸಂ | ಕೋರ್ಸ್‌ಗಳು | ವಿದ್ಯಾರ್ಹತೆ | ಅವಧಿ |
|---|---|---|---|
| 01 | ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ (DMLT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |
| 02 | ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ (DMIT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |
| 03 | ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ & ಅನಸ್ತೇಶೀಯಾ ಟೆಕ್ನಾಲಜಿ (DOT & AT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |

ಉದ್ಯೋಗಾವಕಾಶಗಳು :- ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆರೋಗ್ಯ ಕೇಂದ್ರಗಳು, ಜಿಲ್ಲಾ ಆಸ್ಪತ್ರೆ, ನಗರಸಭೆ ಹಾಗೂ ಮಹಾನಗರ ಪಾಲಿಕೆಗಳಲ್ಲಿ, ಖಾಸಗಿ ಆಸ್ಪತ್ರೆಗಳಲ್ಲಿ, ಮೆಡಿಕಲ್ ಕಾಲೇಜ್‌ಗಳಲ್ಲಿ, ಸರ್ಕಾರದ ಸಂಸ್ಥೆ (ಎನ್.ಜಿ.ಓ) ಗಳಲ್ಲಿ, ದೇಶ-ವಿದೇಶಗಳಲ್ಲಿ
ಮಾಹಿತಿಗಾಗಿ :- ಡಾ।। ನಾಗನಗೌಡ.ಡಿ MBBS, D Ortho DNB
Mob : 91138 03006, 95512 30777, 95512 31777

**ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ಕಿ.ವಿ) ದಾವಣಗೆರೆ**

**OS : 307/2020**

ವಾದಿ : ಗೋವಿಂದನಾಯ್ಕ ಬಿನ್ ಲೇ ಕೃಷ್ಣನಾಯ್ಕ, ಹೊಸಹಳ್ಳಿ ಗ್ರಾಮ, ಆನಗೋಡು ಹೋಬಳಿ, ದಾವಣಗೆರೆ ತಾಲ್ಲೂಕು

ವಿರುದ್ಧ

ಪ್ರತಿವಾದಿ : 1 ಗಂಗಿಬಾಯಿ ಕೋಂ ಲೇ ಕೃಷ್ಣನಾಯ್ಕ, ವಯಸ್ಸು ವರ್ಷ 2. ನೇತ್ರಾವತಿ ಕೋಂ ಮಹೇಶ್ ಎಲ್. ವಯಸ್ಸು ವರ್ಷ 3. ವಿಜಯ್ ಕುಮಾರ್ ಬಿನ್ ಕೋಂ ಲೇ ಕೃಷ್ಣನಾಯ್ಕ ವಯಸ್ಸು ವರ್ಷ 4. ಇಂದ್ರಮ್ಮ ಕೆ. ಕೋಂ ಕೃಷ್ಣನಾಯ್ಕ ವಯಸ್ಸು ವರ್ಷ 5. ಗಣೇಶ್ ಹೆಚ್.ಕೆ. ಬಿನ್ ಲೇ ಕೃಷ್ಣನಾಯ್ಕ ವಯಸ್ಸು ವರ್ಷ 6. ರಾಮಚಂದ್ರನಾಯ್ಕ ಹೆಚ್ ಬಿನ್ ಹೀರಾನಾಯ್ಕ ವಯಸ್ಸು ವರ್ಷ ಎಲ್ಲರ ವಾಸ: ಹೊಸಹಳ್ಳಿ ಗ್ರಾಮ, ಆನಗೋಡು ಹೋಬಳಿ, ದಾವಣಗೆರೆ ತಾಲ್ಲೂಕು

ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿಯವರಿಗೆ ನೀಡಲಾದ ನೋಟಿಸ್

ಈ ಮೇಲ್ಕಂಡ ಕೇಸಿನಲ್ಲಿ ವಾದಿ, ಪ್ರತಿವಾದಿಯ ವಿರುದ್ಧ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ಪ್ರತಿವಾದಿಯಾದ ನಿಮಗೆ ನ್ಯಾಯಾಲಯದಿಂದ ನೋಂದಾಯಿತ ಅಂಚೆ ಮೂಲಕ ನೋಟೀಸ್ ಕಳಿಸಿದಾಗ್ಯೂ ಸದರಿ ನೋಟೀಸ್ ನಿರಾಕರಿಸಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ತಾವು ದಿನಾಂಕ 18.3.2021 ರಂದು ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 5.2.2021 ರಂದು ಕೊಡಲ್ಪಟ್ಟಿದೆ.

ಸಹಿ/-
ವಾದಿ ಪರ ವಕೀಲರು
ದಿನಾಂಕ 5.2.2021

ನ್ಯಾಯಾಲಯದ ಅಪ್ಪಣೆ ಮೇರೆಗೆ
(ಶಿರಸ್ತೇ ದಾರರು )
ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ (ಕಿ.ವಿ) ದಾವಣಗೆರೆ.

**ಸಾರ್ವಜನಿಕ ಪ್ರಕಟಣೆ**

**ಶ್ರೀಕಾಂತ್ ಸಿ. ಪ್ರೊ।। ಕಂಚನ್ ಜ್ಯುವೆಲ್ಲರ್ಸ್**
ನವಲೆ ಬಿಲ್ಡಿಂಗ್, ಶೋಭ ಟಾಕೀಸ್ ರಸ್ತೆ, ಶಿವಮೊಗ್ಗ ಸರ್ಕಲ್, ಹರಿಹರ.

ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಇನ್ನು ಮುಂದೆ ಈ ವ್ಯವಹಾರವನ್ನು ದಿನಾಂಕ:31.12.2020ಕ್ಕೆ ಮುಕ್ತಾಯ ಮಾಡಿರುತ್ತೇವೆ. ಯಾವುದೇ ವ್ಯವಹಾರಗಳೂ ಬಾಕಿ ಇದ್ದಲ್ಲಿ ಈ ಕೆಳಕಂಡ ಮೊಬೈಲ್ ನಂಬರ್‌ಗೆ ಸಂಪರ್ಕಿಸಿ.

**ಕಂಚನ್ ಜ್ಯುವೆಲ್ಲರ್ಸ್ ಪರವಾಗಿ**
**ಮಾಲೀಕರು : ಶ್ರೀಕಾಂತ್ ಸಿ., ಮೊ. : 97396 55887**

**ಸಾರ್ವಜನಿಕ ಪ್ರಕಟಣೆ**

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು, ಎಸ್.ಎ. ರವೀಂದ್ರನಾಥ್ ಬಡಾವಣೆ, ಶಿರಮಗೊಂಡನಹಳ್ಳಿ ಗ್ರಾಮದ ಸರ್ವೆ ನಂಬರ್ 57ರ ಜಮೀನಿನಲ್ಲಿ ವಿಂಗಡಿಸಿರುವ ಸೈಟುಗಳ ಪೈಕಿ ಡೋ.ನಂ. 415/146, ಖಾತೆ ನಂ. 415ರ ಅಳತೆ 40x60ರ ಪೈಕಿ ಅಳತೆ 60x20 ಅಡಿಯುಳ್ಳ ನಿವೇಶನವನ್ನು ಶ್ರೀಮತಿ ಗೀತಾ ಗುರುರಾಜಾಚಾರ್ ಕೋಂ. ಬಿ. ಗುರುರಾಜಾಚಾರ್ ಎಂಬುವವರು ಶ್ರೀ ರಾಜಪ್ಪ ಎಂಬುವವರಿಂದ ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿಯ ನೋಂದಾವಣೆ ಪತ್ರ ಸಂಖ್ಯೆ 2910/1989-90 ಮೂಲಕ ಖರೀದಿಸಿದ್ದು, ಸದರಿ ಕ್ರಯಪತ್ರದ ಮೂಲ ಪತ್ರವು ಕಳೆದು ಹೋಗಿರುತ್ತದೆ ಎಂದು ದೂರು ನೀಡಿರುತ್ತಾರೆ. ಇದೀಗ ಸದರಿ ಸೊತ್ತನ್ನು ಖರೀದಿಸಲು ಶ್ರೀ ಟಿ. ವೆಂಕಟೇಶ್ ಬಿನ್ ಲೇಟ್ ತಿಮ್ಮಣ್ಣ ಇವರು ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಸಾಲ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಸೊತ್ತಿನ ಮೇಲೆ ಯಾವುದಾದರೂ ವ್ಯಕ್ತಿಗಳಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ, ಹೋಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ತಮ್ಮ ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆ ಪತ್ರಗಳೊಂದಿಗೆ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು (7) ದಿನಗಳೊಳಗಾಗಿ ಸಲ್ಲಿಸಬಹುದು.

ಸಹಿ/- ಶಾಮನೂರು ಪ್ರಕಾಶ್, ವಕೀಲರು,
2159/2, 4ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ.
ಫೋ. : 94495 12232
ದಾವಣಗೆರೆ.
ದಿನಾಂಕ : 05.02.2021

**ಸಾರ್ವಜನಿಕ ಪ್ರಕಟಣೆ**

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ಸಿಟಿ, ಕೊಂಡಜ್ಜಿ ರಸ್ತೆಯ ಉತ್ತರಕ್ಕಿರುವ ಅಶೋಕನಗರದಲ್ಲಿರುವ ಸೈಟುಗಳ ಪೈಕಿ ಸೈಟ್ ನಂ. 31, ಅಳತೆ 30+28/2x42 ಅಡಿ, 1218 ಚದರಡಿ (9.143+8.533/2x12.800=113.1264 ಚದರಮೀಟರ್) ನಿವೇಶನದಲ್ಲಿ ಮನೆ ಕಟ್ಟಲು ಶ್ರೀ ಶಿವಾಚಾರಿ ಬಿನ್ ಮಾನಾಚಾರಿ ಇವರು ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಸಾಲ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಸೊತ್ತಿನ ಮೇಲೆ ಯಾವುದಾದರೂ ವ್ಯಕ್ತಿಗಳಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ, ಹೋಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ತಮ್ಮ ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆ ಪತ್ರಗಳೊಂದಿಗೆ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು (7) ದಿನಗಳೊಳಗಾಗಿ ಸಲ್ಲಿಸಬಹುದು.

ಸಹಿ/- ಶಾಮನೂರು ಪ್ರಕಾಶ್, ವಕೀಲರು,
ದಾವಣಗೆರೆ. 2159/2, 4ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್,
ದಿನಾಂಕ : 05.02.2021 ದಾವಣಗೆರೆ. ಮೊ. : 94495 12232

# ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಛೇರಿ : ನಂ. 496/66, ಸಂಕೋಳ್ ಪ್ಲಾಜಾ, 2ನೇ ಮಹಡಿ, ನಾಗನೂರು ರಸ್ತೆ, ಶಾಮನೂರು, ದಾವಣಗೆರೆ – 577 004.**

**ಫೋನ್ : 08192-223913, 233632.** **ಇಮೇಲ್** : rodvg@kgbk.in

## ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಗಳಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಕಂಡ ಹರಾಜಿನ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ಈ ಕೆಳಕಂಡ ದಿನಾಂಕ ಹಾಗೂ ಸಮಯದಂದು ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಬೆಳ್ಳೂಡಿ, ಹರಿಹರ ತಾ|| ಫೋನ್: 08192-280548, ಮೊ.: 88926 63029**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಷಣ್ಮುಖಪ್ಪ ಬಿನ್ ಯಲ್ಲಪ್ಪ, ಬನ್ನಿಕೋಡು | 55315301039713 | 20,557–00 |
| 2 | ಶ್ರೀಮತಿ ಕರಿಬಸಮ್ಮ ಹೆಚ್. ಕೋಂ.ಹನುಮಂತಪ್ಪ, ಬನ್ನಿಕೋಡು | 55315302036018 | 7,649–00 |
| 3 | ಶ್ರೀ ಹನುಮಂತಪ್ಪ ಕೆ. ಬಿನ್ ಕಾಶಚಾರಿ, ಬನ್ನಿಕೋಡು | 55315302049518 | 79,094–00 |

**ಬೆಳ್ಳೂಡಿ ಶಾಖೆಯ ಚಿನ್ನಾಭರಣ ಹರಾಜಿನ ದಿನಾಂಕ : 18-02-2021 ಬೆಳಗ್ಗೆ 11.00 ಗಂಟೆಗೆ**

**ಶಾಖೆ: ಹರಪನಹಳ್ಳಿ, ಫೋನ್: 08398-280260, ಮೊ.: 96321 84698**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಮಹಬೂಬ್‌ಸಾಬ್ ಬಿನ್ ಲೇಟ್ ಹಸೇನ್, ಹರಪನಹಳ್ಳಿ. | 62815301160116 | 18,026–00 |
| 2 | ಶ್ರೀ ಮಂಜುನಾಥ್ ಹೆಚ್. ಬಿನ್ ಭರಮಪ್ಪ ಹೆಚ್. ತಿಪ್ಪನಾಯಕನಹಳ್ಳಿ. | 62815301068517 | 14,238–00 |
| 3 | ಶ್ರೀ ಕೆ. ಹನುಮಂತಪ್ಪ ಬಿನ್ ಭೀಮಪ್ಪ, ಬಾಗಳಿ | 62815301131917 | 9,507–00 |
| 4 | ಶ್ರೀ ಮಂಜುನಾಥ್ ಕೆ. ಬಿನ್ ನಾಗಪ್ಪ ಕೆ., ಹರಪನಹಳ್ಳಿ. | 62815301001418 | 11,836–00 |
| 5 | ಶ್ರೀ ಅಂಬ್ಲಿ ಬಸವಲಿಂಗಪ್ಪ ಬಿನ್ ಗೂಳೆಪ್ಪ, ಕೂಲಹಳ್ಳಿ | 62815302068117 | 1,24,374–00 |
| 6 | ಶ್ರೀ ಮಂಜುನಾಥ್ ಕಡೇಮನಿ ಬಿನ್ ಲೇಟ್ ಹನುಮಪ್ಪ, ತಿಪ್ಪನಾಯಕನಹಳ್ಳಿ | 62815302063318 | 28,776–00 |
| 7 | ಶ್ರೀ ಬಸಪ್ಪ ಹೊಳಲು ಬಿನ್ ನಿಂಗಪ್ಪ, ದಡಿಗಾರನಹಳ್ಳಿ | 62815302073818 | 26,093–00 |
| 8 | ಮೆಲ್ವಾಡಿ ಯಂಕಮ್ಮ ಬಿನ್ ರಾಮಪ್ಪ, ಯಲ್ಲಾಪುರ | 62815302094318 | 70,748–00 |
| 9 | ಶ್ರೀಮತಿ ರಾಧಾ ಕೆ. ಕೋಂ. ಚಂದ್ರಪ್ಪ, ಯಲ್ಲಾಪುರ | 62815302121918 | 52,610–00 |
| 10 | ಶ್ರೀಮತಿ ಬಸಮ್ಮ ಕೋಂ. ಹನುಮಂತಪ್ಪ, ಬಂಡ್ರಿ ತಾಂಡಾ | 62815302122318 | 45,128–00 |
| 11 | ಶ್ರೀ ವಡ್ಡರ ಗೋಣೆಪ್ಪ ಬಿನ್ ದ್ಯಾಮಪ್ಪ, ಕೂಲಹಳ್ಳಿ | 62815302134818 | 29,736–00 |
| 12 | ಶ್ರೀ ವಡ್ಡರ ಗೋಣೆಪ್ಪ ಬಿನ್ ದ್ಯಾಮಪ್ಪ, ಕೂಲಹಳಿ | 62815302136318 | 15,473–00 |
| 13 | ಶ್ರೀ ಬುಡೇನ್ ಸಾಬ್ ಬಿನ್ ಮಹಬೂಬ್ ಸಾಬ್, ಹರಪನಹಳ್ಳಿ. | 62815302140118 | 82,197–00 |
| 14 | ಶ್ರೀ ಕೃಷ್ಣಪ್ಪ ಟಿ. ಬಿನ್ ಹನುಮಂತಪ್ಪ, ತಿಪ್ಪನಾಯಕನಹಳ್ಳಿ | 62815302140618 | 49,173–00 |

**ಹರಪನಹಳ್ಳಿ ಶಾಖೆಯ ಚಿನ್ನಾಭರಣ ಹರಾಜಿನ ದಿನಾಂಕ : 19-02-2021 ಬೆಳಗ್ಗೆ 11.00 ಗಂಟೆಗೆ**

**ಶಾಖೆ: ದೇವಿಗೆರೆ. ಜಗಳೂರು ತಾ|| ಫೋನ್: 08196-287467, ಮೊ.: 90080 96693**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಮಂಜುನಾಥ್ ಎಂ.ಎಸ್. ಬಿನ್ ಶಿವಕುಮಾರಪ್ಪ, ಜೆ.ಸಿ.ಆರ್. ಬಡಾವಣೆ | 59315301010112 | 53,348–00 |
| 2 | ಶ್ರೀ ಪರಮೇಶ ನಾಯ್ಕ ಬಿನ್ ನರಸಿಂಗ್ ನಾಯ್ಕ, ಗೋಕುಲಹಟ್ಟಿ | 59315301020813 | 1,92,225–00 |
| 3 | ಶ್ರೀಮತಿ ರತ್ನಮ್ಮ ಕೋಂ. ಹನುಮಂತಪ್ಪ, ವ್ಯಾಸಗೊಂಡನಹಳ್ಳಿ | 59315301012914 | 19,705–00 |
| 4 | ಶ್ರೀಮತಿ ಸಾಕಮ್ಮ ಅಲಿಯಾಸ್ ಸಾಕುಬಾಯಿ ಕೋಂ. ಯಂಕಾನಾಯ್ಕ, ಕೊರಟಿಕೆರೆ | 59315301012114 | 1,42,692–00 |
| 5 | ಶ್ರೀ ನಾಗೇಂದ್ರಪ್ಪ ಬಿನ್ ದಾಸಪ್ಪ, ಸಾಗಲಗಟ್ಟೆ | 59315301005716 | 46,819–00 |
| 6 | ಶ್ರೀ ಗಂಗಪ್ಪ ಜಿ.ಬಿ. ಬಿನ್ ಬಸವನಗೌಡ, ಚಿಕ್ಕ ಅರಕೆರೆ | 59315301022917 | 2,21,894–00 |

**ಶಾಖೆ: ಹಿರೇಮೇಗಳಗೆರೆ. ಹರಪನಹಳ್ಳಿ ತಾ|| ಫೋನ್: 08398-260162, ಮೊ.: 80880 10740**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಮಂಜ್ಯಾನಾಯ್ಕ ಬಿನ್ ಹರಿಯಾನಾಯ್ಕ, ಬೇವಿನಹಳ್ಳಿ ತಾಂಡ | 64415301066712 | 1,19,067–00 |
| 2 | ಶ್ರೀ ಹನುಮನಹಳ್ಳಿ ರಾಜಪ್ಪ ಬಿನ್ ತಿಂದಪ್ಪ, ವಡ್ಡಿನಹಳ್ಳಿ | 64415301002014 | 21,300–00 |
| 3 | ಶ್ರೀ ಹನುಮನಹಳ್ಳಿ ರಾಜಪ್ಪ ಬಿನ್ ತಿಂದಪ್ಪ, ವಡ್ಡಿನಹಳ್ಳಿ | 64415301008814 | 37,639–00 |
| 4 | ಶ್ರೀ ಪರಶುರಾಮ ಬಿನ್ ಹಳ್ಳೇರ ಹಾಲಪ್ಪ, ಆನೆಬಸಾಪುರ | 64415301016514 | 27,028–00 |
| 5 | ಶ್ರೀಮತಿ ಮಡಿವಾಳರ ರೇಣುಕಮ್ಮ ಕೋಂ. ಮಂಜಪ್ಪ, ಆನೆಬಸಾಪುರ | 64415301051014 | 73,741–00 |
| 6 | ಶ್ರೀ ದೊಡ್ಡಮನೆ ಮಂಜುನಾಥ ಬಿನ್ ನಿಂಗಪ್ಪ, ವಡ್ಡಿನಹಳ್ಳಿ | 64415301070214 | 1,54,501–00 |
| 7 | ಶ್ರೀ ಕೊಟ್ರೇಶ್ ಅಂಗಡಿ ಬಿನ್ ಬಸಪ್ಪ ಅಂಗಡಿ, ಹಿರೇಮೇಗಳಗೆರೆ | 64415301072614 | 18,316–00 |
| 8 | ಶ್ರೀ ಡಿ. ಬಸವರಾಜ ಬಿನ್ ದಂಡ್ಯಪ್ಪ, ಹಿರೇಮೇಗಳಗೆರೆ | 64415301000515 | 82,815–00 |
| 9 | ಶ್ರೀಮತಿ ಮಡಿವಾರ ಕೆಂಚಮ್ಮ ಕೋಂ. ಭರಮಪ್ಪ, ಹಿರೇಮೇಗಳಗೆರೆ | 64415301011015 | 85,046–00 |
| 10 | ಶ್ರೀ ಯಂಕಾನಾಯ್ಕ ಬಿನ್ ಗಂಗ್ಯಾನಾಯ್ಕ, ಕಾಳೇನಾಯಕನತಾಂಡ | 64415301011315 | 34,734–00 |
| 11 | ಶ್ರೀ ಹೆಚ್. ನಾಗರಾಜ ಬಿನ್ ಹನುಮಂತಪ್ಪ, ಹಿರೇಮೇಗಳಗೆರೆ | 64415301027215 | 11,981–00 |
| 12 | ಶ್ರೀಮತಿ ಬಸಮ್ಮ ಕೋಂ. ಮಲ್ಲಿಕಾರ್ಜುನ, ಪೋತಲಕಟ್ಟೆ | 64415302026612 | 2,28,389–00 |
| 13 | ಶ್ರೀ ದೊಡ್ಡಮನೆ ಮಂಜುನಾಥ ಬಿನ್ ನಿಂಗಪ್ಪ, ವಡ್ಡಿನಹಳ್ಳಿ | 64415302068014 | 1,37,225–00 |
| 14 | ಶ್ರೀ ಡಿ. ಬಸವರಾಜ ಬಿನ್ ದಂಡ್ಯಪ್ಪ, ಹಿರೇಮೇಗಳಗೆರೆ | 64415302039415 | 1,08,639–00 |
| 15 | ಶ್ರೀ ಯಂಕಾನಾಯ್ಕ ಬಿನ್ ಗಂಗ್ಯಾನಾಯ್ಕ, ಕಾಳೇನಾಯಕನತಾಂಡ | 64415302105315 | 70,311–00 |
| 16 | ಶ್ರೀ ಹಾಲೇಶ್ ಬಿನ್ ನಿಂಗಪ್ಪ, ಹಿರೇಮೇಗಳಗೆರೆ | 64415302005117 | 18,705–00 |
| 17 | ಶ್ರೀ ಹೊಟ್ಟಿನಹಳ್ಳಿ ರುದ್ರಪ್ಪ ಬಿನ್ ಯಲ್ಲಪ್ಪ, ಹಿರೇಮೇಗಳಗೆರೆ | 64415302020117 | 11,826–00 |
| 18 | ಶ್ರೀಮತಿ ಲಕ್ಕಳ್ಳಿ ಗೌರಮ್ಮ ಕೋಂ. ಶೇಖರಪ್ಪ, ಹಿರೇಮೇಗಳಗೆರೆ | 64415302021417 | 21,712–00 |
| 19 | ಶ್ರೀ ಬಿದರಕೆರೆ ರೇವಣಪ್ಪ ಬಿನ್ ಭರಮಪ್ಪ, ಹಿರೇಮೇಗಳಗೆರೆ | 64415302041917 | 33,161–00 |
| 20 | ಶ್ರೀ ಹೊಟ್ಟಿನಹಳ್ಳಿ ರುದ್ರಪ್ಪ ಬಿನ್ ಯಲ್ಲಪ್ಪ, ಹಿರೇಮೇಗಳಗೆರೆ | 64415302020918 | 30,800–00 |
| 21 | ಶ್ರೀ ನರೇಶ್ ಕೆ.ಎನ್. ಬಿನ್ ನಾಗೇಂದ್ರಪ್ಪ, ಹಿರೇಮೇಗಳಗೆರೆ | 64415302037318 | 37,800–00 |
| 22 | ಶ್ರೀ ಎಲ್. ಚಂದ್ರಪ್ಪ ಬಿನ್ ಹನುಮಂತಪ್ಪ, ಹಿರೇಮೇಗಳಗೆರೆ | 64415302041218 | 51,000–00 |

**ಶಾಖೆ: ದೇವರಾಜ ಅರಸ್ ಬಡಾವಣೆ, ದಾವಣಗೆರೆ. ಫೋನ್: 08192-237184, ಮೊ.: 99726 01336.**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ನಾಗರಾತ್ನಮ್ಮ ಕೋಂ. ವೀರಪ್ಪ, ತರಳಬಾಳು ಬಡಾವಣೆ, ದಾವಣಗೆರೆ | 86915302031418 | 2,79,257–00 |
| 2 | ಶ್ರೀ ಹರೀಶ್ ಎ. ಬಿನ್ ಮಹೇಶ್ವರಪ್ಪ, ಗೋಣಿವಾಡ | 86915302029918 | 61,979–00 |

**ಶಾಖೆ: ಲಿಂಗಾಪುರ, ಹೊನ್ನಾಳಿ ತಾ||, ಫೋನ್: 08188-294670, ಮೊ.: 96322 70790.**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಧರ್ಮಪ್ಪ ಬಿನ್ ಚಿನ್ನಪ್ಪ, ಲಿಂಗಾಪುರ. | 94015302007919 | 17,947–00 |

**ದೇವಿಗೆರೆ, ಹಿರೇಮೇಗಳಗೆರೆ, ದೇವರಾಜ ಅರಸ್ ಬಡಾವಣೆ, ಲಿಂಗಾಪುರ ಶಾಖೆಗಳ ಚಿನ್ನಾಭರಣ ಹರಾಜಿನ ದಿನಾಂಕ : 23-02-2021 ಬೆಳಗ್ಗೆ 11.00 ಗಂಟೆಗೆ**

**ಶಾಖೆ: ಅತ್ತಿಗೆರೆ, ದಾವಣಗೆರೆ ತಾ||, ಫೋನ್: 08192-267267, ಮೊ.: 83283 32612.**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಶಿವಣ್ಣ ಬಿನ್ ರುದ್ರಪ್ಪ, ಕಾಶೀಪುರ ಗ್ರಾಮ | 52615302027817 | 15,234–00 |
| 2 | ಶ್ರೀ ಜಯಪ್ಪ ಎಂ.ಡಿ. ಬಿನ್ ದುರುಗಪ್ಪ, ರಾಮಗೊಂಡನಹಳ್ಳಿ | 52615302031517 | 21,342–00 |
| 3 | ಶ್ರೀಮತಿ ಗೌರಮ್ಮ ಕೋಂ. ಲೇಟ್ ಬಸಪ್ಪ, ಅತ್ತಿಗೆರೆ | 52615302067017 | 25,236–00 |
| 4 | ಶ್ರೀ ಕುಮಾರಸ್ವಾಮಿ ಎಂ.ಎಸ್. ಬಿನ್ ಎಂ.ಸಿ. ಶೇಖರಯ್ಯ, ಗೋಪನಾಳ್ | 52615302078917 | 72,689–00 |
| 5 | ಶ್ರೀ ಶಶಿಕುಮಾರ್ ಎಂ.ಎನ್. ಬಿನ್ ಲೇಟ್ ನಂದಿಬಸಪ್ಪ,ಎಂ.ಹೆಚ್.,ಅತ್ತಿಗೆರೆ. | 52615302092217 | 1,00,114–00 |
| 6 | ಶ್ರೀ ಲಿಂಗರಾಜ್ ಬಿನ್ ರಾಮಪ್ಪ, ಅತ್ತಿಗೆರೆ | 52615302029418 | 21,538–00 |
| 7 | ಶ್ರೀ ಹುಲಿಕಟ್ಟೆ ಮುನಿಯಪ್ಪ ಬಿನ್ ನಾರಪ್ಪ, ಗೋಪನಾಳ್ | 52615302036618 | 64,653–00 |
| 8 | ಶ್ರೀ ಹುಲಿಕಟ್ಟೆ ಮುನಿಯಪ್ಪ ಬಿನ್ ನಾರಪ್ಪ, ಗೋಪನಾಳ್ | 52615302036718 | 1,01,554–00 |
| 9 | ಶ್ರೀ ನಂದಿಬಸಯ್ಯ ಎನ್.ಆರ್. ಬಿನ್ ರೇವಣಸಿದ್ದಯ್ಯ, ಅತ್ತಿಗೆರೆ. | 52615302061418 | 42,827–00 |
| 10 | ಶ್ರೀ ನಂದಿಬಸಯ್ಯ ಎನ್.ಆರ್. ಬಿನ್ ರೇವಣಸಿದ್ದಯ್ಯ, ಅತ್ತಿಗೆರೆ. | 52615302061518 | 87,722–00 |
| 11 | ಶ್ರೀ ಬಂಗಾರಸ್ವಾಮಿ ಟಿ. ಬಿನ್ ಡಿ.ತಿಪ್ಪೇರುದ್ರಪ್ಪ, ಅತ್ತಿಗೆರೆ | 52615302089018 | 16,589–00 |
| 12 | ಶ್ರೀ ಷಡಾಕ್ಷರಪ್ಪ ಬಿನ್ ಹನುಮಂತಪ್ಪ, ಮಲ್ಲೇನಹಳ್ಳಿ | 52615302100318 | 28,105–00 |

**ಶಾಖೆ: ಹಲವಾಗಲು, ಹರಪನಹಳ್ಳಿ ತಾ||, ಫೋನ್: 08398-272024, ಮೊ.: 99459 54670**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ಶಾಂತವ್ವ ಕೋಂ. ಪರಶುರಾಮಪ್ಪ, ನಿಟ್ಟೂರು. | 62015302047816 | 9,703–00 |
| 2 | ಶ್ರೀ ಸೋಮಲಿಂಗಪ್ಪ ಬಿನ್ ಹನುಮಂತಪ್ಪ, ನಿಟ್ಟೂರು. | 62015302027417 | 26,489–00 |
| 3 | ಶ್ರೀ ಚನ್ನಬಸಪ್ಪ ಜಿ. ಬಿನ್ ಮಹದೇವಪ್ಪ, ಅರಸನಹಾಳ್ | 62015302005018 | 45,332–00 |
| 4 | ಶ್ರೀ ಸಂತೋಷ್‌ಕುಮಾರ್ ಬಿನ್ ಲಕ್ಷ್ಮಪ್ಪ, ಕುಂಚೂರು | 62015302009818 | 32,512–00 |
| 5 | ಶ್ರೀಮತಿ ಸುನೀತ ಸಿ. ಕೋಂ. ಸಿದ್ದಪ್ಪ, ಕುಂಚೂರು | 62015302042218 | 10,543–00 |
| 6 | ಶ್ರೀ ಕೆ. ವಿಶ್ವನಾಥ್ ಬಿನ್ ಕುಬೇರಪ್ಪ, ಹಲವಾಗಲು | 62015302042318 | 97,548–00 |
| 7 | ಶ್ರೀ ಕೊಟ್ರೇಶ್ ನಾಯ್ಕ ಬಿನ್ ಧರ್ಮನಾಯ್ಕ, ಕೆ.ಕೆ.ತಾಂಡ | 62015302060718 | 1,09,756–00 |
| 8 | ಶ್ರೀ ಸಂತೋಷ್ ಬಿನ್ ನಿಂಗಪ್ಪ, ಹಲವಾಗಲು | 62015302060818 | 21,248–00 |
| 9 | ಶ್ರೀಮತಿ ದ್ಯಾಮವ್ವ ಕೋಂ. ಚನ್ನಬಸಪ್ಪ, ಅರಸನಹಾಳ್ | 62015302064718 | 26,746–00 |
| 10 | ಶ್ರೀ ತಿರುಪತಿ ಎ. ಬಿನ್ ಚನ್ನಬಸಪ್ಪ, ಯರಬಾಳು | 62015302072418 | 3,935–00 |
| 11 | ಶ್ರೀ ತಿರುಕನಾಯ್ಕ ಬಿನ್ ಉಮ್ಲಾನಾಯ್ಕ, ಕೆ.ಕೆ.ತಾಂಡ | 62015302073918 | 17,066–00 |
| 12 | ಶ್ರೀ ಮಂಜುನಾಥ್ ಅಲಗಿಲವಾಡ ಬಿನ್ ದುರುಗಪ್ಪ, ಹಲವಾಗಲು | 62015302080818 | 13,252–00 |
| 13 | ಶ್ರೀ ಕೆ. ಮಲ್ಲಪ್ಪ ಬಿನ್ ಬಸಪ್ಪ, ಹಲವಾಗಲು | 62015302082018 | 10,073–00 |
| 14 | ಶ್ರೀಮತಿ ಚಂದ್ರಮ್ಮ ಕೋಂ. ನಾಗೇಂದ್ರಪ್ಪ, ಹಲವಾಗಲು | 62015302083918 | 18,761–00 |
| 15 | ಶ್ರೀ ಪ್ರಭಾಕರ್ ಬಿನ್ ರಾಮಕೃಷ್ಣಪ್ಪ, ಹಲವಾಗಲು | 62015302088418 | 14,286–00 |
| 16 | ಶ್ರೀಮತಿ ಸುಮಿತ್ರ ಬಿನ್ ಮಲ್ಲೇಶ್, ಹಲವಾಗಲು | 62015302092718 | 8,747–00 |
| 17 | ಶ್ರೀಮತಿ ಸಂಗೀತ ಹೆಚ್. ಕೋಂ. ಶೇಖರನಾಯ್ಕ, ಕೆ.ಕೆ.ತಾಂಡ | 62015302092818 | 13,660–00 |
| 18 | ಶ್ರೀಮತಿ ಕೆ. ಹೊನ್ನವ್ವ ಕೋಂ. ಅಂಜಿನಪ್ಪ, ಹಲವಾಗಲು | 62015302097418 | 8,656–00 |
| 19 | ಶ್ರೀ ಸಣ್ಣದುರುಗಪ್ಪ ಬಿನ್ ಹನುಮಂತಪ್ಪ, | 62015302005019 | 24,306–00 |
| 20 | ಶ್ರೀ ಕಾಳ್ಯನಾಯ್ಕ ಬಿನ್ ರೂಪ್ಲಾನಾಯ್ಕ, | 62015302008719 | 9,759–00 |
| 21 | ಶ್ರೀ ಬಸವರಾಜ ಜಿ. ಬಿನ್ ಹನುಮಂತಪ್ಪ, ಅರಸನಹಾಳ್ | 62015301023818 | 69,759–00 |

**ಅತ್ತಿಗೆರೆ, ಹಲವಾಗಲು ಶಾಖೆಗಳ ಚಿನ್ನಾಭರಣ ಹರಾಜಿನ ದಿನಾಂಕ : 24-02-2021 ಬೆಳಗ್ಗೆ 11.00 ಗಂಟೆಗೆ**

ಸ್ಥಳ : ದಾವಣಗೆರೆ
ದಿನಾಂಕ : 06-02-2021

ಸಹಿ/– ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ, ದಾವಣಗೆರೆ.

# ಹರಪನಹಳ್ಳಿ: 8 ಗ್ರಾ.ಪಂ.ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹರಪನಹಳ್ಳಿ, ಫೆ.6 - ತಾಲ್ಲೂಕಿನ ನಿಟ್ಟೂರು, ತೆಲಿಗಿ, ಅಣಜಿಗೆರೆ, ಕೂಲಹಳ್ಳಿ, ಲಕ್ಷ್ಮಿಪುರ, ಚಿಗಟೇರಿ, ಶಿಂಗ್ರಿಹಳ್ಳಿ, ಉಚ್ಚಂಗಿದುರ್ಗ ಗ್ರಾಪಂಗೆ ಶನಿವಾರ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಿತು.

ತೆಲಿಗಿ ಗ್ರಾಪಂಗೆ ಅಧ್ಯಕ್ಷರಾಗಿ ಜಿ.ಹಾಲೇಶಪ್ಪ, ಉಪಾಧ್ಯಕ್ಷರಾಗಿ ಎಸ್.ಬಿ.ರೇಖಾ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಆರ್. ಜಯಸಿಂಹ ಘೋಷಣೆ ಮಾಡಿದ್ದಾರೆ.

ಆಯ್ಕೆ ನಡೆಯುತ್ತಿದ್ದಂತೆ ಅಭಿಮಾನಿಗಳು, ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಕೆ. ಯೋಗೀಶ್, ಟಿ.ಉಮಕಾಂತ್, ಜಿ.ಬಿ.ಟಿ. ಮಹೇಶ್, ಪಿ.ಬಸವರಾಜ, ತೆಲಿಗಿ ಸುರೇಶ್, ಈಶ್ವರಪ್ಪ, ರಾಘವೇಂದ್ರ, ಕೆ.ಗಣೇಶಪ್ಪ, ಪಿಡಿಒ ವೀರಣ್ಣ ಲಕ್ಕಣ್ಣವರ, ರವೀಂದ್ರ, ಕುಮಾರ್ ಸೇರಿದಂತೆ ಇತರರು ಇದ್ದರು.

ಲಕ್ಷ್ಮಿಪುರ ಗ್ರಾಪಂಗೆ ಅಧ್ಯಕ್ಷರಾಗಿ ಹನುಮಕ್ಕ, ಉಪಾಧ್ಯಕ್ಷರಾಗಿ ಎ.ಎನ್. ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಜಯರಾಜ್ ಘೋಷಣೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾಜಿ ಗ್ರಾಪಂ ಅಧ್ಯಕ್ಷ ಪಿ.ಟಿ.ಭರತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ.ಎಲ್.ಪೋಮ್ಯನಾಯ್ಕ, ಟಾಸ್ಕ್‌ಫೋರ್ಸ್ ಸಮಿತಿ ಅಧ್ಯಕ್ಷ ಶಶಿಧರ ಪೂಜಾರ, ಮುಖಂಡರಾದ ಉಮೇಶನಾಯ್ಕ, ರಾಮಣ್ಣ, ಮಂಜಪ್ಪ, ಕಿಮ್ಯನಾಯ್ಕ, ವೆಂಕಟೇಶ್‌ನಾಯ್ಕ, ಜಯಣ್ಣ, ದಾಸಣ್ಣ, ಶಿವಶಂಕರಯ್ಯ, ಜಯಣ್ಣ, ಸೇರಿದಂತೆ ಇತರರಿದ್ದರು.

ನಿಟ್ಟೂರು ಗ್ರಾಪಂಗೆ ಅಧ್ಯಕ್ಷರಾಗಿ ಚಲುವಾದಿ ನಾಗಮ್ಮ, ಉಪಾಧ್ಯಕ್ಷರಾಗಿ ಶಿಂಗ್ರಿಹಳ್ಳಿ ನಾಗರಾಜ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಾ.ಪಂ ಇ.ಓ.ಬಿ. ಎಲ್. ಈಶ್ವರ ಪ್ರಸಾದ್ ಘೋಷಣೆ ಮಾಡಿದ್ದಾರೆ.

ಅಣಜಿಗೆರೆ ಗ್ರಾಪಂಗೆ ಅಧ್ಯಕ್ಷರಾಗಿ ಶಿವಣ್ಣ, ಉಪಾಧ್ಯಕ್ಷರಾಗಿ ನೇತ್ರಾ ಬಿ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ಒಟ್ಟು 19 ಸದಸ್ಯರು ಹಾಜರಿದ್ದರು. ಎಂದು ಗೊತ್ತುಪಡಿಸಿದ ಚುನಾವಣಾಧಿಕಾರಿ ಬಿಇಓ ಎಸ್. ಎಂ.ವೀರಭದ್ರಯ್ಯ ಘೋಷಣೆ ಮಾಡಿದ್ದಾರೆ.

ಕೂಲಹಳ್ಳಿ ಗ್ರಾಪಂಗೆ ಅಧ್ಯಕ್ಷರಾಗಿ ಪೂಜಾರ ಕೊಟ್ರೇಶ್, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಗೊತ್ತುಪಡಿಸಿದ ಚುನಾವಣಾಧಿಕಾರಿ ಎಇಇ ಎಂ.ಲಿಂಗಪ್ಪ ಘೋಷಣೆ ಮಾಡಿದ್ದಾರೆ.

ಈ ವೇಳೆ ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶೀ ಆರ್. ಲೋಕೇಶ್, ಬಿಜೆಪಿ ಮುಖಂಡರಾದ ಎಂ.ಪಿ. ನಾಯ್ಕ ತಿಮ್ಮಣ್ಣ ಸೇರಿದಂತೆ ಇತರರು ಇದ್ದರು.

ಚಿಗಟೇರಿ ಗ್ರಾಪಂಗೆ ಅಧ್ಯಕ್ಷರಾಗಿ ಜಿನ್ ಶಾರದಮ್ಮ, ಉಪಾಧ್ಯಕ್ಷರಾಗಿ ಜಿ.ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಹಾಯಕ ಕೃಷಿ ನಿರ್ದೇಶಕ ಗೋಂದಿ ಮಂಜುನಾಥ ಘೋಷಣೆ ಮಾಡಿದ್ದಾರೆ.

ಶಿಂಗ್ರಿಹಳ್ಳಿ ಗ್ರಾಪಂಗೆ ಅಧ್ಯಕ್ಷರಾಗಿ ಶಾರದಬಾಯಿ, ಉಪಾಧ್ಯಕ್ಷರಾಗಿ ಎಸ್.ಎನ್ ಮಂಜುನಾಥ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಆನಂದ ಡೊಳ್ಳಿನ ಘೋಷಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ತಾ.ಪಂ ಸದಸ್ಯ ಟಿ.ನಾಗರಾಜ, ಬಿಜೆಪಿ ಮುಖಂಡರಾದ ಪಿ.ಟಿ. ಶಿವಾಜಿನಾಯ್ಕ. ಮರಿಯಪ್ಪ, ಮಲ್ಲೇಶ್, ಟಿ.ಶೇಖರಪ್ಪ, ಕೆ. ನಿಂಗಪ್ಪ. ಬಿ.ದೇವೇಂದ್ರಪ್ಪ. ಗಣೇಶನಾಯ್ಕ, ರಾಜನಾಯ್ಕ, ಹನುಮಂತನಾಯ್ಕ ಈ ಶೇಷಾದ್ರಿ, ಟಿ.ಪ್ರಕಾಶ್, ಡಿ.ಮಹಾಂತೇಶ್ ಸೇರಿದಂತೆ ಇತರರು ಇದ್ದರು.

ಉಚ್ಚಂಗಿದುರ್ಗ ಗ್ರಾಪಂಗೆ ಎನ್.ಎಸ್. ಮಮತಾ ಅಧ್ಯಕ್ಷರಾಗಿ, ಸೂರಪ್ಪ ಕಾಳಮ್ಮ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಗೊತ್ತುಪಡಿಸಿದ ಚುನಾವಣಾಧಿಕಾರಿ ಸಿಡಿಪಿಓ ಆರ್. ಮಂಜುನಾಥ್ ಘೋಷಣೆ ಮಾಡಿದ್ದಾರೆ.

# ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಪ್ರಸ್ತಾವನೆ

## ತೋಳಹುಣಸೆ ಬಳಿಯ ಎನ್.ಟಿ.ಸಿ. ಜಾಗದಲ್ಲಿ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆಗೆ ಏಕಗವಾಕ್ಷಿ ಸಭೆಯಲ್ಲಿ ತೀರ್ಮಾನ

**(1ನೇ ಪುಟದಿಂದ)** ತೋಳಹುಣಸೆಯಲ್ಲಿ ಈಗ ಮುಚ್ಚಿರುವ ಎಲ್ಲಮ್ಮ ಮಿಲ್‌ನ 138.14 ಎಕರೆ ಜಾಗ ಈಗ ಖಾಲಿ ಉಳಿದಿದೆ. ಈ ಜಾಗವು ರಾಷ್ಟ್ರೀಯ ಜವಳಿ ನಿಗಮದ ವಶದಲ್ಲಿದೆ. ಖಾಲಿ ಇರುವ ಈ ಜಾಗವನ್ನು ಬಳಸಿಕೊಂಡು ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸಲು ಅವಕಾಶವಿದೆ ಎಂದು ಹೇಳಿದರು.

ಇದಕ್ಕೆ ಸಮ್ಮತಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ರವಾನಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಮಂಜುನಾಥ ನಾಯ್ಕ, ದಾವಣಗೆರೆ ಈ ಹಿಂದೆ ಕರ್ನಾಟಕದ ಮ್ಯಾಂಚೆಸ್ಟರ್ ಎಂಬ ಹೆಗ್ಗಳಿಕೆ ಹೊಂದಿತ್ತು.

ತೋಳಹುಣಸೆಯಲ್ಲಿ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಯಾದರೆ ಆ ಹೆಗ್ಗಳಿಕೆ ಮತ್ತೆ ಮರಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಲ್ಲಮ್ಮ ಮಿಲ್‌ನ 138.14 ಎಕರೆ ಜಾಗ ಖಾಲಿ ಇದೆ. ಇದನ್ನು ರಾಷ್ಟ್ರೀಯ ಜವಳಿ ನಿಗಮ ನಿರ್ವಹಿಸುತ್ತಿದೆ. ಪ್ರತಿ ವರ್ಷ ಖಾಲಿ ಜಾಗವನ್ನು ಕಾಯಲಿಕ್ಕಾಗಿಯೇ 34-35 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ. ಹೀಗಾಗಿ ಈ ಜಾಗವನ್ನು ಉತ್ಪಾದನೆಗೆ ಬಳಸಿಕೊಂಡರೆ ವೆಚ್ಚ ಮಾಡುವುದು ತಪ್ಪಲಿದೆ ಎಂದರು. ಖಾಲಿ ಇರುವ ಎಲ್ಲಮ್ಮ ಮಿಲ್ ಜಾಗವನ್ನು ಬಳಸಿಕೊಳ್ಳುವ ಬಗ್ಗೆ ಲೋಕಸಭೆಯ ಸ್ಥಾಯಿ ಸಮಿತಿಯಲ್ಲೂ ಈ ಬಗ್ಗೆ ಚರ್ಚೆ ನಡೆಸಲಾಗಿತ್ತು. ಈ ಜಾಗವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಬಗ್ಗೆ ಗಂಭೀರವಾದ ಚರ್ಚೆಗಳು ನಡೆದಿವೆ ಎಂದವರು ಹೇಳಿದರು.

ಜವಳಿ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದಂತೆ ಈ ಹಿಂದೆಯೇ ಕೇಂದ್ರ ಸಚಿವರಾದ ಸ್ಮೃತಿ ಇರಾನಿ, ಪ್ರಹ್ಲಾದ್ ಜೋಷಿ ಹಾಗೂ ಸದಾನಂದ ಗೌಡ ಅವರ ಜೊತೆ ಉದ್ಯಮಿಗಳು ಚರ್ಚಿಸಿದ್ದೆವು.

ಜಿಲ್ಲಾ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಈ ಬಗ್ಗೆ ನಿರ್ಣಯ ತೆಗೆದುಕೊಂಡ ನಂತರವೇ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸಚಿವರು ತಿಳಿಸಿದ್ದರು. ಅದರಂತೆ ಏಕಗವಾಕ್ಷಿ ಸಭೆಯಲ್ಲಿ ಪ್ರಸ್ತಾವನೆ ಕಳಿಸಲು ಸಮ್ಮತಿಸುವುದರೊಂದಿಗೆ ಈ ದಿಸೆಯಲ್ಲಿ ಮೊದಲ ಹೆಜ್ಜೆ ಇಡಲಾಗಿದೆ ಎಂದು ಹೇಳಿದರು.

## ಏನಿದು ಮೆಗಾ ಟೆಕ್ಸ್‌ಟೈಲ್ ಪಾರ್ಕ್ ?

ದೇಶವನ್ನು ಜವಳಿ ವಲಯದ ಉತ್ಪಾದನಾ ಹಾಗೂ ರಫ್ತು ತಾಣವನ್ನಾಗಿ ಮಾಡಲು ಮತ್ತು ಜಾತಿಕ ರಫ್ತು ಬಲಿಷ್ಠ ದೇಶವನ್ನಾಗಿ ಮಾಡಲು ಕೇಂದ್ರ ಸರ್ಕಾರ ಏಳು ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ಗಳ ಸ್ಥಾಪನೆಗೆ ಉದ್ದೇಶಿಸಿದೆ.

ಕಳೆದ ಸೋಮವಾರ ಮಂಡಿಸಲಾದ ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ತಲಾ 1,000 ಎಕರೆ ಪ್ರದೇಶದಲ್ಲಿ ಪಾರ್ಕ್‌ಗಳನ್ನು ಮುಂದಿನ ಮೂರು ವರ್ಷಗಳಲ್ಲಿ ನಿರ್ಮಿಸಲಾಗುವುದು ಎಂದು ತಿಳಿಸಿದ್ದರು.

ಈ ಪಾರ್ಕ್‌ಗಳಲ್ಲಿ ವಿಶ್ವ ದರ್ಜೆಯ ಮೂಲಭೂತ ಸೌಲಭ್ಯ ಹಾಗೂ ಉತ್ಪಾದನೆಗೆ ಸಜ್ಜಾಗಿರುವಂತಹ ವ್ಯವಸ್ಥೆ ಕಲ್ಪಿಸಲಾಗುವುದು. ಇದರ ಜೊತೆಗೆ 10,683 ಕೋಟಿ ರೂ.ಗಳ ಉತ್ಪಾದನಾ ಆಧರಿತ ಉತ್ತೇಜನ ನೀಡಲಾಗುವುದು ಎಂದೂ ಸಹ ಕೇಂದ್ರ ಬಜೆಟ್‌ನಲ್ಲಿ ತಿಳಿಸಲಾಗಿದೆ.

ಪ್ರಸ್ತಾಪಿತ ಯೋಜನೆಯ ಪೂರ್ಣ ಹೆಸರು ಮೆಗಾ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ರೀಜನ್ ಅಂಡ್ ಅಪ್ಪೇರೆಲ್ ಪಾರ್ಕ್ (ಮಿತ್ರ) ಆಗಿದೆ. ಕೇಂದ್ರ ಸರ್ಕಾರ 2025-26ರ ವೇಳೆಗೆ ಭಾರತದ ಕೈಗಾರಿಕಾ ಗಾತ್ರವನ್ನು ದುಪ್ಪಟ್ಟುಗೊಳಿಸಿ 300 ಶತಕೋಟಿ ಡಾಲರ್‌ಗಳಿಗೆ ತಲುಪಿಸುವ ಗುರಿ ಹೊಂದಿದೆ. 'ಮಿತ್ರ' ಅದರ ಪ್ರಮುಖ ಭಾಗವಾಗಿದೆ.

ಈ ಪಾರ್ಕ್‌ಗಳಲ್ಲಿ ಅನಿರ್ಬಂಧಿತವಾದ ನೀರು ಹಾಗೂ ವಿದ್ಯುತ್ ಸೌಲಭ್ಯ, ಸಾಮಾನ್ಯ ಸೌಲಭ್ಯಗಳು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯದ ರೀತಿಯ ಸೌಲಭ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.

ಚೀನಾ, ವಿಯಟ್ನಾಂ ಹಾಗೂ ಇಥಿಯೋಪಿಯಾ ಸೇರಿದಂತೆ ಹಲವು ದೇಶಗಳಲ್ಲಿ ಈ ರೀತಿಯ ಪಾರ್ಕ್‌ಗಳಿವೆ. ಇಲ್ಲಿ ಜವಳಿ ವಲಯಕ್ಕೆ ಅಗತ್ಯವಾದ ಎಲ್ಲ ಸೌಲಭ್ಯಗಳು ಒಂದೇ ತಾಣದಲ್ಲಿ ಲಭ್ಯವಿವೆ.

ಕೇಂದ್ರ ಸರ್ಕಾರ ಈ ಹಿಂದೆ 2005ರಲ್ಲಿ 59 ಎಸ್.ಐ.ಟಿ.ಪಿ. ( ಸ್ಕೀಮ್ ಫಾರ್ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ಸ್) ಜವಳಿ ಪಾರ್ಕ್‌ಗಳಿಗೆ ಅನುಮತಿ ನೀಡಿತ್ತು. ಇವುಗಳಲ್ಲಿ 22 ಪೂರ್ಣಗೊಂಡಿವೆ. ಆದರೆ, ಇವುಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ ಮಿತ್ರ ಪಾರ್ಕ್‌ಗಳಿಗೆ ಮುಂದಾಗಲಾಗಿದೆ.

# ದೆಹಲಿ ರೈತ ಹೋರಾಟ ಬೆಂಬಲಿಸಿ ಹರಪನಹಳ್ಳಿಯಲ್ಲಿ ಪ್ರತಿಭಟನೆ



ಹರಪನಹಳ್ಳಿ, ಫೆ.6 - ದೆಹಲಿಯಲ್ಲಿ ಹೋರಾಟ ಮಾಡುತ್ತಿರುವ ರೈತರನ್ನು ಬೆಂಬಲಿಸಿ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿಯ ಪದಾಧಿಕಾರಿಗಳು ಪಟ್ಟಣದಲ್ಲಿ ಕೆಲ ಕಾಲ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಸಂಘಟನೆಯ ಮುಖಂಡ ಹೊಸಹಳ್ಳಿ ಮಲ್ಲೇಶ್ ಮಾತನಾಡಿ ಕೇಂದ್ರ ಜಾರಿ ಮಾಡಿರುವ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು. ರೈತರ ಹೋರಾಟವನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ವಿವಿಧ ಮಾರ್ಗಗಳನ್ನು ಅನುಸರಿಸುತ್ತಿರುವುದನ್ನು ವಿರೋಧಿಸಿ ಖಂಡಿಸುತ್ತೇವೆ. ನರೇಂದ್ರ ಮೋದಿ ಸರ್ಕಾರ ಅನ್ನದಾತರ ಹೋರಾಟವನ್ನು ಕೊನೆಗೊಳಿಸಲು ರಸ್ತೆಗಳಿಗೆ ಮೊಳೆ ಹೊಡೆದು ನಿರ್ಬಂಧ ವಿಧಿಸುತ್ತಿರುವುದು ನಾಚಿಕೆಗೇಡಿತನ. ರೈತ ಹೋರಾಟಗಾರರನ್ನು ಭೃಷ್ಟರು ಖಲಿಸ್ತಾನಿಗಳು ಎಂದು ಹೇಳಿಕೆ ನೀಡುತ್ತಿರುವ ರಾಜ್ಯ ಸರ್ಕಾರದ ಕೃಷಿ ಸಚಿವರನ್ನು ವಜಾಗೊಳಿಸಬೇಕು. ಕೃಷಿ ಕಾಯ್ದೆಗಳನ್ನು ಹಿಂಪಡೆಯುವವರೆಗೂ ಹೋರಾಟ ನಿರಂತರವಾಗಿರುತ್ತದೆ ಎಂದು ಆಗ್ರಹಿಸಿದರು.

ಮುಖಂಡರಾದ ಗುಡಿಹಳ್ಳಿ ಹಾಲೇಶ್, ಇದ್ಲಿ ರಾಮಪ್ಪ, ಸಂದೇರ ಪರಶುರಾಮ, ಆರ್.ಗೋಣೆಪ್ಪ, ಗೌರಿಹಳ್ಳಿ ಹನುಮಂತಪ್ಪ, ಶಫಿವುಲ್ ಕುಂಚೂರು, ಟಿ.ಬಸಪ್ಪ, ಬಿ.ಹನುಮಂತಪ್ಪ ಹಾಗೂ ಮತ್ತಿತರರಿದ್ದರು.

# ತಲೆಗೇರಿದ ಅಧಿಕಾರ ಮದ

**(1ನೇ ಪುಟದಿಂದ)** ಎಂದಿದ್ದಾರೆ.

ಸಚಿವರ ಉದ್ದೇಶ ರೈತರಿಗೆ ನೆರವಾಗುವುದೇ ಆಗಿರಬಹುದು. ಆದರೆ, ಕೆಲವರು ನೆರವು ಬೇಡ ಎನ್ನುವುದಾದರೆ ಅಂತ ಒಳ್ಳೆಯದನ್ನು ಮಾಡಿ ಪ್ರಯೋಜನವೇನು? ಎಂದವರು ಪ್ರಶ್ನಿಸಿದ್ದಾರೆ.

ಯಾರಾದರೂ ಬೆತ್ತಲಾಗಿರಬೇಕು ಎಂದು ಬಯಸುವುದಾದರೆ, ಬಲವಂತವಾಗಿ ಬಟ್ಟೆ ತೊಡಿಸುವುದರಿಂದ ಏನು ಪ್ರಯೋಜನ? ನೀವು ಕಷ್ಟಪಟ್ಟು ನಿಮ್ಮ ಪರಿಶ್ರಮಕ್ಕೆ ಫಲ ಪಡೆಯುತ್ತೀರಿ ಎಂದು ಭಾವಿಸುವುದಾದರೆ ಅದು ನಿಮ್ಮ ಭ್ರಮೆ. ಇಂದು ಅಧಿಕಾರ ಮದ ನಿಮ್ಮ ತಲೆಗೇರಿದೆ ಎಂದು ಶರ್ಮ ಹೇಳಿದ್ದಾರೆ.

ನೀವೇಕೆ ಜನಾದೇಶ ಕಳೆದುಕೊಳ್ಳುತ್ತೀರಿ? ನಮ್ಮ ಹಿತದಲ್ಲಿರದೇ ಇರುವ ಕಾಂಗ್ರೆಸ್ ಕಾಲದ ಎಲ್ಲ ಕೊಳಕುಗಳನ್ನು ಹೇರಿಕೊಳ್ಳುತ್ತಿದ್ದೇವೆ. ಕೊಡದಲ್ಲಿ ಒಂದೇ ಒಂದು ತೂತಾದರೂ ಇಡೀ ನೀರು ಹೋಗುತ್ತದೆ. ಅದೇ ರೀತಿ ಜನಾದೇಶವೂ ಹೋಗುತ್ತದೆ ಎಂದವರು ಎಚ್ಚರಿಸಿದ್ದಾರೆ.

ರಾಷ್ಟ್ರವಾದದ ಸಂಪೂರ್ಣ ಬಲ ಬಳಸಿ, ಇಲ್ಲವಾದರೆ ನೀವು ವಿಷಾದಿಸುವ ಪರಿಸ್ಥಿತಿ ಬರುತ್ತದೆ. ಸಾವಿರಾರು ರಾಷ್ಟ್ರವಾದಿಗಳು ಜೀವ ಮುಡಿಪಾಗಿಟ್ಟ ಕಾರಣಕ್ಕೇ ಈಗಿನ ರಾಷ್ಟ್ರವಾದಿ ಸರ್ಕಾರ ಅಧಿಕಾರಕ್ಕೆ ಬಂದಿದೆ ಎಂದೂ ಅವರು ಹೇಳಿದ್ದಾರೆ.

# ರಾಶಿ ಭವಿಷ್ಯ

**ದಿನಾಂಕ : 07.02.2021 ರಿಂದ 13.02.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೌಟುಂಬಿಕ ವಿಷಯಗಳು ಚಿಂತೆಗೀಡು ಮಾಡಲಿವೆ. ತುಸು ಸಮಾಧಾನದಿಂದ ವರ್ತಿಸಿ, ಬೇರೊಬ್ಬರೊಂದಿಗೆ ಮಾತನಾಡುವಾಗ ಎಚ್ಚರದಿಂದಿರುವುದು ಲೇಸು. ವಹಿಸಿಕೊಂಡ ಕೆಲಸ ಕಾರ್ಯಗಳಲ್ಲಿ ವಿಶೇಷ ಶ್ರಮವಹಿಸಿ, ಕೇವಲ ವೀರಾವೇಶದ ಮಾತುಗಳಿಂದ ಏನೂ ಪ್ರಯೋಜನವಿಲ್ಲ. ಪಾಲುದಾರಿಕೆ ವ್ಯವಹಾರದಲ್ಲಿ ಹೆಚ್ಚಿನ ಲಾಭ ನಿರೀಕ್ಷಿಸಬಹುದು. ಖಾಸಗಿ ಕಂಪನಿ ನೌಕರರ ಮೇಲೆ ವಿನಾಕಾರಣ ದೂರುಗಳು ಬರಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು, ಊಟೋಪಚಾರದಲ್ಲಿ ಜಾಗ್ರತೆ ವಹಿಸಿರಿ. ಲೇವಾದೇವಿ ವ್ಯವಹಾರ ಬೇಡಿ. ಸೋಮ-ಮಂಗಳ-ಗುರು ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಆತ್ಮೀಯ ವಿಚಾರಗಳನ್ನು ಬಂಧುಗಳಲ್ಲಿ ಹಂಚಿಕೊಳ್ಳುವುದರಿಂದ, ಉತ್ತಮ ಸಲಹೆಗಳು ಸಿಗಲಿವೆ. ಹಿರಿಯರ ಕೋಪದಿಂದಾಡುವ ಮಾತುಗಳಿಗೆ ಮೌನದಿಂದಿರುವುದು ಉತ್ತಮ. ಅತ್ಯಾತುರದಿಂದ ಮಾಡುವ ಕೆಲಸಗಳಿಂದ ಭಾರೀ ನಷ್ಟ, ಹಣಕಾಸು ವಿಷಯದಿಂದ ನಿಮಗೇ ಆಪತ್ತು ಬರಬಹುದು. ಮತ್ತೊಬ್ಬರಿಗೋಸ್ಕರ ವೃಥಾ ತಿರುಗಾಡುವುದರಿಂದ ಆರೋಗ್ಯದ ಮೇಲೆ ಅಡ್ಡಪರಿಣಾಮ, ಸಾಲಮಾಡಲೇ ಬೇಕಾದ ಪ್ರಸಂಗ ಬಂದಲ್ಲಿ, ಸಂಬಂಧಪಟ್ಟ ದಾಖಲೆಗಳನ್ನು ಎರಡೆರಡು ಬಾರಿ ಪರಿಶೀಲಿಸುವುದು ಉತ್ತಮ. ನಿರುದ್ಯೋಗಿ ಪದವೀಧರರಿಗೆ, ಸಾಧಾರಣ ವೇತನದ ನೌಕರಿ, ವೈಯಕ್ತಿಕ ಆರೋಗ್ಯ ಅಲಕ್ಷಿಸದೇ, ವೈದ್ಯರ ಸಲಹೆಯಂತೆ ನಡೆದುಕೊಳ್ಳಿ. ಬುಧ-ಶುಕ್ರ-ಶನಿ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ನವದಂಪತಿಗಳಲ್ಲಿ ಮೂಡಿದ್ದ ಭಿನ್ನಾಭಿಪ್ರಾಯ, ಹಿರಿಯರ ಮಧ್ಯಸ್ಥಿಕೆಯಿಂದ ಪರಿಹಾರ, ನಿಮ್ಮ ವೃತ್ತಿಯಲ್ಲಿ ಹೆಚ್ಚಿನ ಲಾಭ, ಕೃಷಿಕರಿಗಿದ್ದ ಆರ್ಥಿಕ ಸಮಸ್ಯೆ ಬಗೆಹರಿಯಲಿದೆ. ಹೊಸ ವ್ಯಾಪಾರ ಅಭಿವೃದ್ಧಿಗೊಳ್ಳಲು ಅನುಭವಿಗಳ ಸಲಹೆ ಪಡೆಯಿರಿ. ಆದಾಯದ ಮೂಲದಲ್ಲಿ ಕೊರತೆಯಿಂದ ಅಗತ್ಯಕ್ಕೆ ತಕ್ಕಷ್ಟು ಖರ್ಚು ಮಾಡುವುದು ಲೇಸು. ಮಡದಿಯ ಆರೋಗ್ಯದಲ್ಲಿ ತುಸು ಏರುಪೇರು, ಸಾಕು ಪ್ರಾಣಿಗಳಿಂದ ಅಪಾಯವಾಗದಂತೆ ಎಚ್ಚರವಹಿಸಿರಿ. ಚಿಲ್ಲರೆ ಹಾಗೂ ವ್ಯಾಪಾರಿಗಳಿಗೆ ವಹಿವಾಟು ಚೆನ್ನಾಗಿಯೇ ನಡೆದರೂ, ಲಾಭಾಂಶ ಮಾತ್ರ ಸಾಧಾರಣ. ಬ್ಯಾಂಕ್ ನೌಕರರು ತಮ್ಮದಲ್ಲದ ತಪ್ಪಿಗೆ ತಲೆದಂಡ ತೆರಬೇಕಾದೀತು. ಮಹಿಳೆಯರಿಗೆ ಉತ್ತಮ ದಿನಗಳು. ಭಾನು-ಮಂಗಳ-ಶುಕ್ರ ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಮಹಿಳಾ ರಾಜಕಾರಣಿಗಳಿಗೆ ಉತ್ತಮ ಸ್ಥಾನ-ಮಾನಗಳು, ಆದರೆ ಹಿಂಬಾಲಕರ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ, ಹಣ-ಕಾಸು ಸಂಸ್ಥೆಗಳಿಂದ ಸಾಕಷ್ಟು ನೆರವು ದೊರೆಯಲಿದೆ.ಕೈಗಾರಿಕೋದ್ಯಮಿಗಳಿಗೆ ಕಾರ್ಮಿಕರ ಕೊರತೆ ಒಂದು ಸಮಸ್ಯೆಯಾಗಿ ಪರಿಣಿಮಿಸಲಿದೆ. ಆಸ್ತಿ ಖರೀದಿ ವಿಚಾರದಲ್ಲಿ ವಿಳಂಬ ಬೇಡ. ಆದರೆ, ದಾಖಲೆಗಳನ್ನು ಮರುಪರಿಶೀಲನೆಗೆ ಒಳಪಡಿಸುವುದು ಲೇಸು. ಆದಾಯದ ಮೂಲದಲ್ಲಿ ಹೆಚ್ಚಳ ಕಂಡುಬರಲಿದೆ. ನಿಂತುಹೋಗಿದ್ದ ಅವಿವಾಹಿತರ ಮದುವೆ ಮಾತುಕತೆ ಮತ್ತೆ ಮುನ್ನೆಲೆಗೆ ಬರಲಿದೆ.ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸ, ವಾರಾಂತ್ಯದಲ್ಲಿ ಶುಭವಾರ್ತೆ ಕೇಳಿಬರಲಿದೆ. ಸೋಮ-ಬುಧ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ರಾಜಕೀಯ ಧುರೀಣರಿಗೆ ರಾಜೀ-ಪಂಚಾಯ್ತಿ ಅನಿವಾರ್ಯ, ಹೊಸ ವ್ಯಕ್ತಿಗಳ ಪರಿಚಯದಿಂದ, ನಿಮ್ಮ ಕಾರ್ಯಗಳು ಸುಸೂತ್ರವಾಗಲಿವೆ. ಬಹಳ ಕಾಲದಿಂದ ಬಾಧಿಸುತ್ತಿದ್ದ ಅನಾರೋಗ್ಯ ಸಮಸ್ಯೆಗೆ ಪರಿಹಾರ ಸಿಗಲಿದೆ. ಬಂಧುಗಳ ವೈಯಕ್ತಿಕ ವಿಚಾರದಲ್ಲಿ, ನಿಮ್ಮ ಪ್ರವೇಶಬೇಡ. ಯಾವ ವ್ಯವಹಾರದಲ್ಲಿ ನೀವು ನಂಬಿಕೆ ಕಳೆದುಕೊಂಡಿದ್ದಿರೋ, ಅದೇ ವ್ಯವಹಾರದಲ್ಲಿ ಹೆಚ್ಚಿನ ಲಾಭಾಂಶ, ಆಸ್ತಿಗೆ ಸಂಬಂಧಿಸಿದ ಕೋರ್ಟ್-ಕಛೇರಿ ವ್ಯಾಜ್ಯಗಳನ್ನು ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ಚಿನಿವಾರ ಪೇಟೆಯಲ್ಲಿ ಸಾಕಷ್ಟು ಚೇತರಿಕೆ, ವಾಹನಗಳನ್ನು ಚಾಲಿಸುವಾಗ ತುಸು ಎಚ್ಚರದಿಂದಿರಿ.ಅನಾವಶ್ಯಕವಾಗಿ, ಸಾಲಬೇಡ, ಕುಲದೇವತಾರಾಧನೆ ಮಾಡಿರಿ. ಭಾನು-ಸೋಮ-ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನಿಮ್ಮ ಆಲಸ್ಯದಿಂದಾಗಿ ಉತ್ತಮ ಅವಕಾಶಗಳು ಕೈ ತಪ್ಪಲಿವೆ, ಕೊಟ್ಟ ಸಾಲಗಳು ಕಂತಿನ ಮೇಲೆ ಕೈಸೇರಲಿದೆ. ಅತಿಯಾದ ಕೆಲಸ-ಕಾರ್ಯಗಳ ಒತ್ತಡದಿಂದಾಗಿ, ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ಅದಕ್ಕೆ ಬೇಕಾದ ಸೂಕ್ತ ವೈದ್ಯಕೀಯ ಸಲಹೆಯನ್ನು ತಡಮಾಡದೇ ಪಡೆಯಿರಿ. ಮಗನು ಖರೀದಿಸಲಿರುವ ಆಸ್ತಿಗೆ ಬಂಧು-ಬಳಗ ಎಲ್ಲರೂ ನೆರವು ನೀಡುವರು. ಸಂಗಾತಿಯು ಕೊಡಬಹುದಾದ ಸಲಹೆ-ಸೂಚನೆಗಳು. ಕೆಲವೊಮ್ಮೆ ನಿಮ್ಮ ಉಪಯೋಗಕ್ಕೆ ಬರಲಿವೆ. ಅವಿವೇಕದ ನಿರ್ಣಯಗಳು, ಅನಾಹುಕ್ಕೆ ಕಾರಣವಾದೀತು. ಹಿರಿಯರೊಂದಿಗೆ ಯಾವುದೇ ಕಾರಣಕ್ಕೂ ಮನಸ್ತಾಪ ಮಾಡಿಕೊಳ್ಳಬೇಡಿ. ಮಹಿಳೆಯರೊಂದಿಗೆ ಹಣಕಾಸಿನ ವ್ಯವಹಾರ ಬೇಡ. ಮಂಗಳ-ಗುರು-ಶುಕ್ರ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಔಷಧಿ ಕ್ಷೇತ್ರದಲ್ಲಿ ಭಾರೀ ಪ್ರಗತಿ ಕಂಡು, ವಿಜ್ಞಾನಿಗಳ ಸಂಶೋಧನೆಯನ್ನು ಇಡೀ ಪ್ರಪಂಚವೇ ಹೊಗಳಲಿದೆ. ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಲೇಸು. ಚಾಡಿಮಾತುಗಳನ್ನು ಕೇಳಿ ಹಿರಿಯರೊಂದಿಗೆ ವಾಗ್ವಾದಕ್ಕಿಳಿಯಬೇಡಿ. ನಿರುದ್ಯೋಗಿ ಪದವೀಧರರಿಗೆ ಸಾಧಾರಣ ವೇತನದ ನೌಕರಿ ದೊರೆಯಲಿದೆ, ಬಹುಕಾಲದಿಂದ ಸಂತಾನ ನಿರೀಕ್ಷೆಯಲ್ಲಿದ್ದವರಿಗೆ ಈ ವಾರ ಶುಭ ಸಮಾಚಾರ ಕೇಳಿಬರಲಿದೆ. ಸುಗಂಧದ್ರವ್ಯ ಮಾರಾಟಗಾರರಿಗೆ ಹೆಚ್ಚಿನ ವಹಿವಾಟು ನಡೆದರೂ, ಹೆಚ್ಚಿನ ಮಟ್ಟದ ಲಾಭ ನಿರೀಕ್ಷಿಸುವಂತಿಲ್ಲ. ಹೈನುಗಾರಿಕೋದ್ಯಮದಲ್ಲಿ ಉತ್ತಮ ಎನ್ನಬಹುದಾದ ಲಾಭವನ್ನು ನಿರೀಕ್ಷಿಸಬಹುದು.ಮನೋವೈದ್ಯರಿಗೆ ಬೇಡಿಕೆ ಹೆಚ್ಚಲಿದೆ. ಸೋಮ-ಶುಕ್ರ-ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಅನಿರೀಕ್ಷಿತವಾಗಿ ಎದುರಾಗಬಹುದಾದ ಸಮಸ್ಯೆಗಳು, ಸ್ನೇಹಿತರಿಂದ ಬಗೆಹರಿಯುವವು. ಸಮಾಜ ಸೇವೆಯಿಂದ ಸನ್ಮಾನ ಸಮಾರಂಭಗಳು ನಡೆಯಲಿವೆ. ಮಕ್ಕಳ ನಡಾವಳಿಯಲ್ಲಿ ವ್ಯತ್ಯಾಸ, ಮನಸ್ಸಿಗೆ ಬೇಸರ ತರಲಿದೆ. ಹಣ-ಕಾಸಿನ ಹರಿವು ಕಳೆದ ವಾರದಂತೆಯೇ ಇರಲಿದೆ. ದಾಯಾದಿಗಳೊಂದಿಗಿದ್ದ ನ್ಯಾಯಾಲಯದ ವ್ಯಾಜ್ಯವು ನಿಮ್ಮಂತೆ ಆಗುವ ಎಲ್ಲಾ ಲಕ್ಷಣಗಳಿವೆ, ಯಾವುದೇ ಕಾರಣಕ್ಕೂ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ. ನೆರೆ-ಹೊರೆಯವರು ನೀವು ಮಾಡಿದ ಉಪಕಾರವನ್ನು ಸ್ಮರಿಸುವರು, ವಿದ್ಯಾರ್ಥಿಗಳ ಶ್ರಮಕ್ಕೆ ತಕ್ಕಂತೆ ಫಲಿತಾಂಶ, ಧ್ಯಾನ-ಯೋಗಾಭ್ಯಾಸ ಮಾಡುವುದು ಉತ್ತಮ. ವಾರದ ಮಧ್ಯದಲ್ಲಿ ಆರ್ಥಿಕ ಚೇತರಿಕೆ ಭಾನು-ಮಂಗಳ-ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಬೆನ್ನುಮೂಳೆಯಲ್ಲಿ ಸಮಸ್ಯೆ, ಕ್ರೀಡಾಸಕ್ತರಿಗೆ, ಗುರು ಮತ್ತು ಗುರಿ ಎರಡೂ ಇಲ್ಲದಿದ್ದಲ್ಲಿ ಏನೂ ಪ್ರಯೋಜನವಿಲ್ಲ. ನ್ಯಾಯವಾದಿಗಳು ನ್ಯಾಯಕ್ಕೋಸ್ಕರ ಮರು ದಾವೆ ಹೂಡಿ, ಯಶಸ್ವಿಯಾಗುವರು. ಆದಾಯದ ಮೂಲದಲ್ಲಿ ಹೆಚ್ಚಳ, ನಿಮ್ಮ ಎಲ್ಲಾ ಕಾರ್ಯಗಳಿಗೆ ಸಂಗಾತಿಯ ನೆರವು, ದುರ್ವ್ಯಸನಗಳನ್ನು ಬಿಡುವುದು ಉತ್ತಮ. ಸಾಧ್ಯವಾಗದಿದ್ದಲ್ಲಿ ಭಾರೀ ತೊಂದರೆ ಎದುರಿಸಬೇಕಾದೀತು. ಸಂವಹನ ಕ್ಷೇತ್ರದ ಉದ್ಯೋಗದಲ್ಲಿ ಅಭಿವೃದ್ಧಿ, ವಿದ್ಯಾರ್ಥಿಗಳು, ತಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡಲ್ಲಿ ಮಾತ್ರ ಉತ್ತಮ ಅವಕಾಶಗಳನ್ನು ಪಡೆಯುವರು. ರಕ್ಷಣಾ ಇಲಾಖೆಯಲ್ಲಿರುವವರಿಗೆ ಬಿಡುವಿಲ್ಲದ ಕೆಲಸ, ಮಹಿಳೆಯರಿಗೆ ಉತ್ತಮ ದಿನಗಳು. ಗೋ ಸೇವೆಯನ್ನು ವಿಶೇಷವಾಗಿ ಮಾಡುವುದು ಉತ್ತಮ. ಭಾನು-ಸೋಮ-ಗುರು ಶುಭ ದಿನಗಳು,

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ನಿಮ್ಮ ವೈಯುಕ್ತಿಕ ವಿಚಾರಗಳನ್ನು ಗುಟ್ಟಾಗಿಟ್ಟುಕೊಳ್ಳದೇ ಹೋದಲ್ಲಿ ಅವಮಾನ ಕಟ್ಟಿಟ್ಟಬುತ್ತಿ, ಈ ಹಿಂದೆ ಮಾಡಿದ್ದ ಸಾಲಗಳು ಕ್ರಮೇಣ ತೀರಲಿದ್ದು, ಮನಸ್ಸಿಗೆ ನೆಮ್ಮದಿ ಮೂಡಲಿದೆ, ಬುದ್ಧಿವಂತಿಕೆಯಿಂದಲೇ ಎಲ್ಲವನ್ನೂ ಸಾಧಿಸುವ ನಿಮ್ಮ ಜಾಣ್ಮೆಯನ್ನು ಎಲ್ಲರೂ ಮೆಚ್ಚುವರು. ಬಹುಕಾಲದಿಂದಲೂ ನಿರೀಕ್ಷೆಯಲ್ಲಿದ್ದ ನಿಮ್ಮ ಇಷ್ಟಾರ್ಥವೊಂದು ಈಡೇರುವ ಸಮಯ ಈ ವಾರ ಬರಲಿದೆ. ಎದುರಾಳಿಗಳ ಸಾಮರ್ಥ್ಯವರಿಯದೇ, ಪ್ರತಿತಂತ್ರವನ್ನು ಹೂಡಲು ಹೋಗಬೇಡಿ.ತೆಂಗು ಮತ್ತು ನಾರಿನ ಉದ್ಯಮದಲ್ಲಿ ಸಾಕಷ್ಟು ಪ್ರಗತಿ, ಪಾಲುದಾರರ ಸಮಯೋಚಿತ ಪ್ರಜ್ಞೆಯಿಂದ ವ್ಯವಹಾರದಲ್ಲಾಗ ಬಹುದಾಗಿದ್ದ ಭಾರೀ ನಷ್ಟವೊಂದು ತಪ್ಪಲಿದೆ. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಬೇಡ. ಮಹಿಳಾ ರಾಜಕಾರಣಿಗಳಿಗೆ ಉನ್ನತ ಸ್ಥಾನಮಾನ, ಅನ್ನದಾನ ಮಾಡಿರಿ. ಮಂಗಳ-ಗುರು-ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಕಳೆದು ಹೋಗಿದ್ದ ಅಮೂಲ್ಯವಾದ ವಸ್ತು ಬಹಳ ಕಾಲ ಹುಡುಕಿದ ನಂತರ ಸಿಗಲಿದೆ. ಸಾಲಗಳನ್ನು ಕಂತಿನ ಮೇಲೆ ತೀರಿಸಲು ಸದವಕಾಶವೊಂದು ದೊರೆಯಲಿದೆ, ವ್ಯವಹಾರದಲ್ಲಿ ಕಷ್ಟ ಅನುಭವಿಸುತ್ತಿರುವ ನಿಮಗೆ ಸ್ನೇಹಿತರ ಸಹಾಯದಿಂದ ದೂರವಾಗಲಿದೆ. ರಾಜಕಾರಣಿಗಳ ನೆರವಿನಿಂದ ಮಗಳಿಗೆ ನೌಕರಿ, ಕೃಷಿಕರಿಗೆ ಸರ್ಕಾರದಿಂದ ನೆರವು, ಕ್ರೀಡಾಪಟುಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಅವಕಾಶ ದೊರೆಯಲಿದೆ. ಆದಾಯದ ಮೂಲದಲ್ಲಿ ಕ್ರಮೇಣ ಹೆಚ್ಚಳ ಸಾಧ್ಯವಾದಾಗ ಪುಣ್ಯಕ್ಷೇತ್ರಗಳ ದರ್ಶನಮಾಡಿ. ಬುಧ-ಗುರು-ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ವಿನಾಕಾರಣ ವಾಗ್ವಾದ ಮಾಡಬೇಡಿ. ಆಡುವ ಮಾತಿನಲ್ಲಿ ಸ್ವಲ್ಪ ವ್ಯತ್ಯಾಸವಾದರೂ ನಿಮಗೇ ಅಪಮಾನವಾಗಬಹುದು. ಆದಾಯದ ಹರಿವು ಉತ್ತಮವಾಗಿರುವುದರಿಂದ, ಆರ್ಥಿಕ ಸಮಸ್ಯೆ ತಕ್ಕಮಟ್ಟಿಗೆ ಕಡಿಮೆಯಾಗಲಿದೆ. ನಿಮ್ಮ ಪ್ರತಿಯೊಂದು ವ್ಯವಹಾರವೂ ಕುಟುಂಬದ ಸದಸ್ಯರಿಗೆ ತಿಳಿದಿರುವುದು ಉತ್ತಮ. ನಿರೀಕ್ಷಿತ ಕಾರ್ಯಗಳಲ್ಲಿ ಸಾಕಷ್ಟು ಯಶಸ್ಸು, ಆಸ್ತಿಕೊಳ್ಳುವುದಕ್ಕೆ ಬೇಕಾದ ಹಣ-ಕಾಸಿನ ನೆರವು ದೊರೆಯಲಿದೆ. ತಪ್ಪುತಿಳುವಳಿಕೆಯಿಂದ ಉಂಟಾಗಿದ್ದ ಬಂಧು ದ್ವೇಷವು ದೂರವಾಗಲಿದೆ. ಗೃಹಾಲಂಕಾರಕ್ಕೆ ಬೇಕಾದ ವಸ್ತುಗಳ ಖರೀದಿ ಜೋರಾಗಿಯೇ ನಡೆಯಲಿದೆ. ಚಿಕ್ಕಮಕ್ಕಳ ಆರೋಗ್ಯದ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ. ನೆಗಡಿ-ಜ್ವರಗಳ ಬಾಧೆಯಿಂದ ನರಳುತ್ತಿರುವವರು ಎಚ್ಚರಿಕೆ ವಹಿಸುವುದು ಉತ್ತಮ. ಅಪರಿಚಿತರೊಂದಿಗೆ ಅತಿಯಾದ ಸಲಿಗೆ ಬೇಡ. ಭಾನು-ಸೋಮ-ಗುರು ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ 11-2-2021 ಗುರುವಾರ ಪುರಂದರದಾಸರ ಪುಣ್ಯತಿಥಿ, ವಾರ ಭವಿಷ್ಯ, ದಿನಾಂಕ 7-2-2021 ರಿಂದ ದಿನಾಂಕ 13-2-2021 ರ ವರೆಗೆ.**

# ಹಲುವಾಗಲು ; ಒಟ್ಟು ಸದಸ್ಯರಿಗಿಂತ ಒಂದು ಹೆಚ್ಚು ಮತ : 10ಕ್ಕೆ ಮರು ಮತದಾನ



ಹರಪನಹಳ್ಳಿ, ಫೆ.6. - ತಾಲ್ಲೂಕಿನ ಹಲುವಾಗಲು ಗ್ರಾಮ ಪಂಚಾಯ್ತಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಒಟ್ಟು ಸದಸ್ಯರಿಗಿಂತ ಒಂದು ಹೆಚ್ಚು ಮತ ಚಲಾಯಿಸಿದ ಘಟನೆ ಜರುಗಿದ್ದು ಸ್ಪರ್ಧಿಸಿದ್ದ ಅಭ್ಯರ್ಥಿಗಳು ಗೊಂದಲಕ್ಕೆ ತುತ್ತಾಗಿದ್ದಾರೆ. ಕೂಡಲೇ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿದ್ದಾರೆ.

ಶುಕ್ರವಾರ ಹಲುವಾಗಲು ಗ್ರಾಮ ಪಂಚಾಯ್ತಿಗೆ ನಡೆದ ಚುನಾವಣೆಗೆ ಒಟ್ಟು ಸ್ಥಾನಗಳು 26. ಆದರೆ ಚಲಾಯಿಸಿದ ಮತಗಳು 27. ಕೂಡಲೇ ಸ್ಪರ್ಧಿಸಿದ ಅಭ್ಯರ್ಥಿಗಳು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಅಷ್ಟರಲ್ಲೇ ಚುನಾವಣೆ ಅಧಿಕಾರಿ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದ್ದರು. ಎಚ್ಚೆತ್ತ ಚುನಾವಣಾಧಿಕಾರಿ ಕುಡಿಯುವ ನೀರು ಅಭಿಯಂತರ ಸಿದ್ದರಾಜು ಉಪಾಧ್ಯಕ್ಷರ ಆಯ್ಕೆಯನ್ನು ಸ್ಥಗಿತಗೊಳಿಸಿದರು ಎಂದು ಸದಸ್ಯರು ದೂರಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಕೋಳಿಕಾಲ ರುದ್ರಪ್ಪ ಹಾಗೂ ದ್ಯಾಮಜ್ಜ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಮಹಿಳೆಯರು ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿ ಗುಪ್ತ ಮತದಾನಕ್ಕೆ ಚೀಟಿ ನೀಡುವಾಗ ಯಾರೋ ಒಬ್ಬ ಸದಸ್ಯರಿಗೆ ಅಧ್ಯಕ್ಷ ಸ್ಥಾನಕ್ಕೆ ಎರಡು ಚೀಟಿಯನ್ನು ನೀಡಿದ್ದಾರೆ. ಎರಡೂ ಚೀಟಿ ಪಡೆದ ಸದಸ್ಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ರುದ್ರಪ್ಪ ಅವರಿಗೆ ಎರಡು ಮತ ಹಾಕಿದ್ದಾರೆ. ಚುನಾಣಾಧಿಕಾರಿ ಅಧ್ಯಕ್ಷ ಸ್ಥಾನದ ಮತಗಳನ್ನು ಎಣಿಕೆ ಮಾಡುವಾಗ ರುದ್ರಪ್ಪ ಅವರಿಗೆ 16 ಹಾಗೂ ದ್ಯಾಮಜ್ಜ ಅವರಿಗೆ 11 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದ್ದಾರೆ. ಇರುವ 26 ಸದಸ್ಯರಲ್ಲಿ ಒಟ್ಟು 27 ಮತಗಳು ಹೇಗೆ ಬಂದಿವೆ ಎಂದು ಇದಕ್ಕೆ ಬಿಜೆಪಿ ಬೆಂಬಲಿತ ಸದಸ್ಯರು ಆಕ್ಷೇಪಿಸಿ ಚುನಾವಣೆ ಪ್ರಕ್ರಿಯೆ ಸ್ಥಗಿತಗೊಳಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ.

ಆದರೆ ಕಾಂಗ್ರೆಸ ಬೆಂಬಲಿತ ಸದಸ್ಯರು ಪಟ್ಟುಬಿಡದೇ ಇಂದೇ ಚುನಾವಣೆ ಪ್ರಕ್ರಿಯೆಯನ್ನು ಮುಗಿಸಿ ಫಲಿತಾಂಶ ಘೋಷಿಸಬೇಕು ಎಂದು ಧರಣಿ ನಡೆಸಿದ್ದಾರೆ.

ಉ ಪ ವಿ ಭಾ ಗಾ ಧಿ ಕಾ ರಿ ಪ್ರಸನ್ನಕುಮಾರ್ ಹಾಗೂ ತಹಶೀಲ್ದಾರ್ ನಂದೀಶ್ ಸದಸ್ಯರನ್ನು ಒಲೈಸಿ ಚುನಾವಣೆ ಪ್ರಕ್ರಿಯೆ ಮುಗಿಸಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಬಿಜೆಪಿ ಬೆಂಬಲಿತ ಸದಸ್ಯರು ಮರು ಮತದಾನ ಮಾಡಿದರೆ ಮಾತ್ರ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತೇವೆ ಎಂದು ಅಲ್ಲಿಂದ ಹೊರ ನಡೆದರು. ಕಾಂಗ್ರೆಸ್ ಮುಖಂಡರು ಸಂಜೆ ವರೆಗೆ ಧರಣಿ ನಡೆಸಿದರೂ ಫಲಿತಾಂಶ ಪ್ರಕಟವಾಗಲಿಲ್ಲ.

ಅಧಿಕಾರಿಗಳು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಹಲವಾರು ಬಾರಿ ಮನವಿ ಮಾಡಿದರೂ ಬಿಜೆಪಿ ಬೆಂಬಲಿತ ಸದಸ್ಯರು ಹಾಜರಾಗಲಿಲ್ಲ. ಮರು ಮತದಾನಕ್ಕೆ ಇದೇ ಇದೇ ದಿನಾಂಕ ಫೆ.10 ರಂದು ದಿನಾಂಕ ನಿಗದಿ ಮಾಡಲಾಗಿದೆ.

ಪೊಲೀಸರು ಬಿಗಿ ಬಂದೋಬಸ್ತ್ ನಿಯೋಜಿಸಲಾಗಿತ್ತು. ಕಾಂಗ್ರೆಸ್ ಮುಖಂಡರಾದ ಪಿ.ಟಿ. ಭರತ್, ಶಶಿಧರ ಪೂಜಾರ, ಬೇಲೂರು ಅಂಜಪ್ಪ, ಗಣೇಶ್, ಬಿಜೆಪಿ ಮುಖಂಡರಾದ ಕಲ್ಲೇರ ಬಸವರಾಜ ಹಾಗೂ ಇತರರು ಹಾಜರಿದ್ದರು.

# ಹೊನ್ನಾಳಿ : ಪಂಚಾಯಿತಿಗೆ ರಂಗಪ್ಪ ಅಧ್ಯಕ್ಷ, ಪ್ರಮೀಳಾ ಉಪಾಧ್ಯಕ್ಷೆ




ಹೊನ್ನಾಳಿ, ಫೆ.6 - ತಾಲ್ಲೂಕಿನ ಅರಕೆರೆ ಗ್ರಾಪಂ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಎ. ಬಿ. ರಂಗಪ್ಪ ಹಾಗೂ ಉಪಾಧ್ಯಕ್ಷೆಯಾಗಿ ಕೆಎಸ್ ಪ್ರಮಿಳಾ ಶಂಕರ ಚಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇತರೆ ಯಾವುದೇ ಸದಸ್ಯರು ಚುನಾವಣೆಗೆ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖಾಧಿಕಾರಿ ದೊಡ್ಡಬಸವರಾಜ್ ಅವಿರೋಧ ಆಯ್ಕೆ ಯಾಗಿರುವುದಾಗಿ ಘೋಷಿಸಿದರು.

ಅರಕೆರೆ ಗ್ರಾಪಂ ಸದಸ್ಯರಾದ ಮಂಜುನಾಥ್ , ಮಹೇಂದ್ರಪ್ಪ, ವೆಂಕಟೇಶ್, ಆಶಾ ರಮೇಶ್, ಸವಿತಾ ನಾಗರಾಜ್, ಉಮಾದೇವಿ ತಿಮ್ಮೇಶ್, ಮುಖಂಡರಾದ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಡಿ.ಎಸ್. ಸುರೇಂದ್ರ, ತಾಲ್ಲೂಕು ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಸ್.ಜಿ. ಮಧುಗೌಡ, ಮಾಜಿ ಪ್ರಧಾನ ರಾಮಚಂದ್ರಪ್ಪ, ಅರಕೆರೆ ಗ್ರಾಪಂ ಮಾಜಿ ಅಧ್ಯಕ್ಷ ಎ.ಬಿ. ರಂಗನಾಥ್, ಎ.ಎಲ್. ಅಮಿತ್, ಲೋಹಿತ್, ಡಿ. ಬಸವರಾಜಪ್ಪ, ಧರ್ಮಪ್ಪ, ಬಸವರಾಜಪ್ಪ, ಎಂ. ಮಲ್ಲಿಕಾರ್ಜುನಗೌಡ ಹಾಗು ಇತರರು ಉಪಸ್ಥಿತರಿದ್ದರು.

## ಪದವಾಣಿ-18

ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**

1) ಕಾಟಕ್ಕೆ ಮಾಡುವ ಕೆಲಸ 4
3) ಆಧುನಿಕ ಗದ್ಯ ಸಾಹಿತ್ಯದ ಒಂದು ಪ್ರಕಾರ 3
5) ನೀರಿನಲ್ಲಿ ಹುಟ್ಟಿದ ತಾವರೆ ಕೊನೆಗೆ ದೀರ್ಘವಾಗಿದೆ 3
6) ಹೆಂಡತಿಯ ಗಂಡ 2
7) ಶಿಲ್ಕನ್ನು ನಿಲ್ಲಿಸಿಕೊಂಡಿರುವವನು ಕೊನೆಗೆ ದೀರ್ಘವಾಗಿದ್ದಾನೆ 4
8) ಇಡೀ ಜಗತ್ತಿಗೆ ಸಂಬಂಧಿಸಿದ ಎಂಬರ್ಥದ ಪದ ತಿರುಗಿದೆ 4
10) ಯುದ್ಧರಂಗದ ಸಮಾನಾರ್ಥಕ ಪದ 4
12) ದಾರದ ಸಹಾಯದಿಂದ ಗಾಳಿಯಲ್ಲಿ ಹಾರಿಸುವ ಕಾಗದದ ಪಟ ಅಸ್ತವ್ಯಸ್ತವಾಗಿದೆ. 4
13) ಎರಡಕ್ಷರದ ಮನ್ಮಥ 2
15) ಜಾನಪದ ಹಾಡುಗಳ ಒಂದು ಪ್ರಕಾರ 3
17) ಎರಡು ಪದಗಳ ಮಿಲನ, ಪದಸಂಧಿ 3
18) ಭಾವಪ್ರಧಾನವಾದ ಹಾಡು 4

**ಮೇಲಿನಿಂದ ಕೆಳಕ್ಕೆ :**

1) ಕಾಯ್ದೆಗೆ ವಿರುದ್ಧವಾದುದು 6
2) ನೆಲದ ಮೇಲೆ ಹಾಸಲು ಗರಿಗಳಿಂದ ಹೆಣೆದ ಹಾಸು 2
3) ಪ್ರಜೆಗಳ ಒಡೆಯ 4
4) ಕರುಣೆಯುಳ್ಳ ದಯಾಮಯಿ 2
5) ಗಂಡನ ಹೆಂಡತಿ 2
6) ಶೌರ್ಯವುಳ್ಳ ಶೂರ 4
8) ಕಲಾಕೃತಿಯನ್ನು ರಚಿಸಬಲ್ಲ ಕಲಾವಿದ 4
9) ಹಳ್ಳಿಗಾಡಿಗೆ ಸಂಬಂಧಿಸಿದ ಹಾಡು 6
11) ರಾಜಕುಮಾರ್ ರಾವಣನಾಗಿ, ಕಲ್ಯಾಣಕುಮಾರ್ ನಾರದನಾಗಿ ಅಭಿನಯಿಸಿದ ಹಳೆಯ ಚಿತ್ರ 4
13) ಉಪಹಾರ ಗೃಹದಲ್ಲಿ ತಿಂಡಿ ತೀರ್ಥ ಪೂರೈಸುವವನು 2
14) ಸ್ವಲ್ಪ ಎಂಬರ್ಥದ ಪದ 2
16) ಒಂದು ದಿವಸದ ಎಂಟನೇ ಒಂದು ಭಾಗ 2

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 17ರ ಉತ್ತರಗಳು :**

**ಎಡದಿಂದ ಬಲಕ್ಕೆ : 1) ದಾವಣಗೆರೆ 3) ವಿವಾಹ 5) ನೀರಧಿ 7) ಬೆನಕ 9) ಕುಜ 10) ಸುರ 11) ಕಾಸು 12) ಯಮ 13) ಚಟ 14) ಭ್ರಮೆ 15) ಗೋಸುಂಬೆ 17) ನಾರದಾ 19) ರಿಪೇರಿ 20) ಹರಪನಹಳ್ಳಿ.**

**ಮೇಲಿನಿಂದ ಕೆಳಕ್ಕೆ : 1) ದಾಳಿಂಬೆ 2) ರೆನೀ (ನೀರೆ) 3) ವಿಧಿ 4) ಹರಿಹರ 6) ರವಿಜ 8) ಕನಸು 9) ಕುಲುಮೆ 10) ಸುಮ 11) ಕಾಟ 12) ಯಮಗೋ (ಗೋಮಯ) 13) ಚನ್ನಗಿರಿ 14) ಭ್ರಮರ 16) ಬೆಳ್ಳುಳ್ಳಿ 17) ನಾರಿ 18) ದಾಹ.**

# ಹೆದ್ದಾರಿಯಲ್ಲಿ ಹೋಮ ಮಾಡಿ ಪ್ರತಿಭಟಿಸಿದ ರಾಣೇಬೆನ್ನೂರಿನ ರೈತರು



ರಾಣೇಬೆನ್ನೂರು, ಫೆ.6- ದೆಹಲಿಯಲ್ಲಿ ಎರಡು ತಿಂಗಳುಗಳಿಂದ ಚಳುವಳಿ ನಡೆಸುತ್ತಿರುವ ರೈತರಿಗೆ ಬೆಂಬಲ ವ್ಯಕ್ತಪಡಿಸಿ ತಾಲ್ಲೂಕಿನ ಮಾಕನೂರ ತಿರುವಿನ ಬಳಿ ರೈತರು ಹೆದ್ದಾರಿ ಬಂದ್ ಮಾಡಿ ಹೋಮ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು.

ರೈತ ವಿರೋಧಿ ಕೃಷಿ ತಿದ್ದುಪಡಿ ಮಸೂದೆಗಳನ್ನು ತಂದು ರೈತ ಕುಲವನ್ನೇ ನಾಶಮಾಡಿ ಕಾರ್ಪೊರೇಟ್ ಕಂಪನಿಗಳಿಗೆ, ದೊಡ್ಡ ದೊಡ್ಡ ಉದ್ಯಮಿಗಳಿಗೆ ಮಣೆ ಹಾಕುತ್ತಿರುವ ಕೇಂದ್ರ ಸರ್ಕಾರ ಕೂಡಲೇ ಮಸೂದೆಗಳನ್ನು ಶಾಶ್ವತವಾಗಿ ಹಿಂದೆ ಪಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕೇಂದ್ರದ ರೈತ ವಿರೋಧಿ ನೀತಿಯನ್ನು ಪ್ರತಿಯೊಬ್ಬ ಪ್ರಜೆಗಳು ಅರಿತಿದ್ದಾರೆ. ನಮ್ಮ ನ್ಯಾಯಯುತ ಬೇಡಿಕೆಗೆ ನಡೆದಿರುವ ಹೋರಾಟಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಬಲ ದೊರಕಿದೆ. ಮುಂಬರುವ ದಿನಗಳಲ್ಲಿ ಜನತೆ ತಕ್ಕ ಪಾಠ ಕಲಿಸಲು ಸಜ್ಜಾಗಿದ್ದು, ಈ ಅರಿವಿನೊಂದಿಗೆ ಆಡಳಿತ ನಡೆಸಿರಿ ಎಂದು ಹೇಳಲಾಯಿತು.

ಮಠಾಧೀಶರ ನಿಲುವು ರೈತಪರವಿರಲಿ..ಸ್ವಾಹಾ.
ಮೋದಿ ಅವರಿಗೆ ಮಸೂದೆ ಹಿಂಪಡೆಯುವ ಬುದ್ಧಿ ಬರಲಿ...ಸ್ವಾಹಾ.
ರೈತರ ಹೋರಾಟಕ್ಕೆ ಯಶಸ್ಸು ಸಿಗಲಿ...ಸ್ವಾಹಾ.
ಪೊಲೀಸರು ರೈತರೊಡನೆ ಸಹಕರಿಸಲಿ... ಸ್ವಾಹಾ.
ರೈತ ಕುಲ ನಾಶ ಮಾಡುವ ಕುತಂತ್ರಿಗಳಿಗೆ ಬುದ್ಧಿ ಬರಲಿ.. .ಸ್ವಾಹಾ.
ರೈತರು ಹೆದ್ದಾರಿ ಮಧ್ಯದಲ್ಲಿ ಹೋಮಕುಂಡ ರಚಿಸಿ ಅಗ್ನಿಗೆ ಎಣ್ಣೆ ಹಾಕುತ್ತಾ ಮೇಲಿನಂತೆ ಮಂತ್ರೋಚ್ಚಾರಣೆ ಮಾಡಿದ್ದು ವಿಶೇಷವಾಗಿತ್ತು.

ರವೀಂದ್ರಗೌಡ ಪಾಟೀಲ, ಈರಣ್ಣ ಹಲಗೇರಿ, ಎಂ. ರಾಜಶೇಖರ, ಎಚ್.ಎಸ್. ಪಾಟೀಲ, ನಾಗರಾಜ ಮಾಳಿಗೇರ, ಜಮಾಲ ಸಾಬ, ಬಿ.ಕೆ. ತೋಟಗಂಟಿ, ಕೆ.ಎಚ್. ಹದಡಿ, ಹನುಮಂತಪ್ಪ, ದಿಳ್ಳೆಪ್ಪ ಮತ್ತಿತರರು ಭಾಗವಹಿಸಿದ್ದರು. ತಹಶೀಲ್ದಾರ್ ಶಂಕರ್ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು. ರೈತರು ನಡುರಸ್ತೆಯಲ್ಲಿ ಹೋಮ ಮಾಡಿದರೂ ಸಹ ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಡಿವೈಎಸ್‌ಪಿ ಟಿ.ವಿ. ಸುರೇಶ, ಗ್ರಾಮೀಣ ವೃತ್ತ ನಿರೀಕ್ಷಕ ಎಸ್.ಪಿ. ಚೌಗಲೆ ಸೂಕ್ತ ಕ್ರಮ ಕೈಗೊಂಡಿದ್ದರು.

# ದಾವಣಗೆರೆಯಲ್ಲಿ ರಾಷ್ಟ್ರಕವಿ ಜಿ.ಎಸ್.ಎಸ್ ಹೆಜ್ಜೆ ಗುರುತುಗಳು

ಸಹ್ಯಾದ್ರಿಯ ಸಿರಿ ಸೊಬಗಿನ, ಶಿವ ಶರಣರ ನಾಡು ಶಿಕಾರಿಪುರದಲ್ಲಿ ಜನಿಸಿ, ಸಾಹಿತ್ಯ ಕ್ಷೇತ್ರದ ಧ್ರುವತಾರೆ ಯಾಗಿ, ಉತ್ಕೃಷ್ಟ ಕವಿಯಾಗಿ, ಪ್ರಬುದ್ಧ ವಿಮರ್ಶಕರಾಗಿ, ಸ್ನೇಹಜೀವಿಯಾಗಿ, ಶಿಷ್ಯ ವತ್ಸಲರಾಗಿ, ಮಾನವತಾವಾದಿಯಾಗಿ ಬಾಳಿದ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಕನ್ನಡ ಸಾಹಿತ್ಯ ಧೀಮಂತಿಕೆಯ ಅದಮ್ಯ ಚೇತನರಾಗಿದ್ದಾರೆ.

07-02-1926 ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ಜಿ.ಎಸ್.ಎಸ್ ಅನೇಕ ಕಷ್ಟನಿಷ್ಠೂರಗಳ ನಡುವೆಯೇ ಬೆಳೆದು ಹಂತ-ಹಂತವಾಗಿ ಮೇಲೇರಿದವರು. ತಂದೆ ಶಾಂತವೀರಪ್ಪ, ತಾಯಿ ವೀರಮ್ಮ, ಜಿಎಸ್ಎಸ್ ರವರ ತಂದೆ ಅಧ್ಯಾಪಕರಾಗಿದ್ದರಿಂದ ಅನೇಕ ಊರುಗಳಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿತ್ತು. ಜಿಎಸ್ಎಸ್ ರವರು 'ಪಂಪನ ಬನವಾಸಿ ಪ್ರಾಂತ್ಯ' ದವರಾಗಿದ್ದರೂ ಅವರ ಬಾಲ್ಯವೆಲ್ಲ ಮಲೆನಾಡಿನ ಸೆರಗಿನ ದಾವಣಗೆರೆಯಲ್ಲಿ ಕಳೆಯಿತು.

**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ :** ಜಿಎಸ್ಎಸ್ ಪ್ರಾಥಮಿಕ ಶಿಕ್ಷಣವನ್ನು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಸಮೀಪದ ಕೋಟೆಹಾಳ್ ಗ್ರಾಮದಲ್ಲಿ ಪಡೆದು, ಪ್ರೌಢ ಶಿಕ್ಷಣವನ್ನು ದಾವಣಗೆರೆಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಪಡೆದರು. ಈ ಸಮಯದಲ್ಲಿ ಇಲ್ಲಿನ ಜಯದೇವ ವಿದ್ಯಾರ್ಥಿ ನಿಲಯದಲ್ಲಿ ವಸತಿ ಪಡೆದಿದ್ದರು. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಶಿವರಾಮ ಕಾರಂತರಿಂದ ಸ್ಪೂರ್ತಿಗೊಂಡರು. ಪ್ರೌಢ ಶಿಕ್ಷಣ ಹಂತದಲ್ಲಿ ಕುವೆಂಪುರವರ ಕವಿತೆ, ನಾಟಕಗಳು ಜಿಎಸ್ಎಸ್ ಮೇಲೆ ಸಾಹಿತ್ಯದ ಮೋಡಿಯನ್ನು ಮಾಡಿದವು.

ಜಿಎಸ್ಎಸ್‌ರವರಿಗೆ ಇಷ್ಟವಾದ ಗುರುಗಳು ತ.ಸು ಶಾಮರಾಯರು.


***ಎದೆತುಂಬಿ ಹಾಡಿದೆನು***
***ಅಂದು ನಾನು***
***ಮನವಿಟ್ಟು ಕೇಳಿದಿರಿ***
***ಅಲ್ಲಿ ನೀವು***

ಈ ಗೀತೆಯನ್ನು ಜಿಎಸ್ಎಸ್ ತಮ್ಮ ಪ್ರೀತಿಯ ಗುರುಗಳಾದ ಶಾಮರಾಯರಿಗೆ ಅರ್ಪಿಸಿದರು. 1950 ರ ದಶಕದಲ್ಲಿ ಜಿಎಸ್ಎಸ್ ರಚಿಸಿದ 'ಸಾಮಗಾನ' ಕವನ ಸಂಕಲನವನ್ನು ಅವರ ಪ್ರೀತಿಯ ಮೇಷ್ಟ್ರಾದ ಶಾಮರಾಯರು ತಳುಕಿನ ವೆಂಕಣ್ಣಯ್ಯ ಸ್ಮಾರಕ ಮಾಲೆಯಲ್ಲಿ ಪ್ರಕಟಿಸಿದ್ದರು. ಈ ಪ್ರೇರಣೆ ಪ್ರೋತ್ಸಾಹವೇ ಜಿಎಸ್ಎಸ್‌ರವರ ಸಾಹಿತ್ಯ ಸಾಧನೆಗೆ ಅಡಿಪಾಯವಾಯಿತು.

**ದಾವಣಗೆರೆಯಲ್ಲಿ ಚನ್ನವೀರ ಕಣವಿ ಹಾಗೂ ಜಿಎಸ್ಎಸ್ ರವರ ಸ್ನೇಹ ಮಿಲನ.**

1949-51 ರ ಅವಧಿಯಲ್ಲಿ ದಾವಣಗೆರೆಯ ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಜಿಎಸ್ಎಸ್ ಕನ್ನಡ ಉಪಾನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದರು. ಆ ಅವಧಿಯಲ್ಲಿ ಜಿಎಸ್ಎಸ್ ಧಾರವಾಡಕ್ಕೆ ಹೋದಾಗ (ಕರ್ನಾಟಕ ವಿವಿಯ ಆಡಳಿತ ವಿಭಾಗದ ಕಟ್ಟಡಕ್ಕೆ ಅಡಿಪಾಯ ಹಾಕುವ ಸಂದರ್ಭ) ಕಣವಿಯವರನ್ನು ದಾವಣಗೆರೆಗೆ ಆಹ್ವಾನಿಸಿದ್ದರು. 1951 ರಲ್ಲಿ ಕಣವಿಯವರು ತನ್ನ ಸ್ನೇಹಿತರಾದ ಯೋಗೀಶ್ ಎನ್ನುವವರ ಜೊತೆ ದಾವಣಗೆರೆಗೆ ಬಂದಿದ್ದರು.

## ಇಂದು ಜಿಎಸ್ಎಸ್ ಜನುಮ ದಿನ



ಆಗತಾನೆ ಮದುವೆಯಾಗಿ ಸಂಸಾರ ಹೂಡಿದ್ದ ಜಿಎಸ್ಎಸ್ ಅವರು ಕಣವಿ ಮತ್ತು ಅವರ ಸ್ನೇಹಿತರಿಗೆ ಆತ್ಮೀಯವಾದ ಆತಿಥ್ಯ ನೀಡಿದರು. ಅಷ್ಟೇ ಅಲ್ಲದೇ ಅವರ ಕಾಲೇಜಿನಲ್ಲಿ ಕಣವಿಯವರಿಂದ ಭಾಷಣವನ್ನು ಮಾಡಿಸಿದ್ದರು. ಈ ರೀತಿಯಾಗಿ ಕಣವಿಯವರು ಎರಡು-ಮೂರು ದಿನ ದಾವಣಗೆರೆಯಲ್ಲಿ ಸಂತೋಷವಾಗಿ ಕಳೆದರು.

ಊರಾಚೆಯ ಬಯಲಲ್ಲಿ ಸಂಜೆ ತಿರುಗಾಡಲು ಮೂವರೂ ಒಂದು ದಿಬ್ಬದ ಮೇಲೆ ಕುಳಿತು ಸೂರ್ಯಾಸ್ತದ ಸೊಬಗನ್ನು ಸವಿಯುತಿದ್ದ ಕ್ಷಣವನ್ನು ಜಿಎಸ್ಎಸ್ ಎಂದಿಗೂ ಮರೆತಿರಲಿಲ್ಲ. ದಾವಣಗೆರೆಯಲ್ಲಿ ಜಿಎಸ್ಎಸ್‌ನ ಆತ್ಮೀಯ ಗೆಳೆಯರಲ್ಲಿ ಜಯದೇವ ಸ್ಟುಡಿಯೋದ ಮಾಲೀಕ ಜಯದೇವರವರೂ ಒಬ್ಬರು. ಆ ಸ್ಟುಡಿಯೋದ ಅಟ್ಟದ ಮೇಲೆ ಜಿಎಸ್ಎಸ್ ತಮ್ಮ ಕವಿತೆಗಳನ್ನು ಕಣವಿಯವರಿಗೆ ಹಾಡಿ ತೋರಿಸಿದ್ದರು. ಅವುಗಳೆಂದರೆ ಅಂಧಕಾರ ಮುತ್ತುತ್ತಿದೆ ಚಂದದ ಬೆಳಕಾಗುತ್ತಿದೆ, ಜೀವಜಾತ್ರೆಯಲ್ಲಿ ಪ್ರಾಣಪಾತ್ರೆಯು ತುಂಬಿ ಬಾ, ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೇ ಈ ಎಲ್ಲಾ ಕವಿತೆಗಳು ಅವರ ಸಾಮಗಾನ ಸಂಕಲನದಲ್ಲಿ ಪ್ರಕಟವಾಗಿವೆ.

**61ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕೇಂದ್ರ ಬಿಂದುವಾಗಿ ಜಿಎಸ್ಎಸ್**

ಕನ್ನಡ ಸಂಸ್ಕೃತಿಯ ಶ್ರೀಮಂತಿಕೆಗೆ ತನ್ನದೇ ಆದ ಕೊಡುಗೆ ನೀಡಿದ ಜಿಎಸ್ಎಸ್‌ರವರು ದಾವಣಗೆರೆಯಲ್ಲಿ 1992 ನೇ ಇಸವಿಯಲ್ಲಿ ನಡೆದ 61 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಜಿಎಸ್ಎಸ್ ತಮ್ಮ ಅಧ್ಯಾಪಕ ವೃತ್ತಿಯನ್ನು ಆರಂಭಿಸಿದ್ದು ದಾವಣಗೆರೆಯಲ್ಲಿ. ಇದು ಅವರ ಜೀವನಕ್ಕೆ ತಿರುವು ನೀಡಿದ ಮುಖ್ಯ ಘಟನೆ ಎಂದು ತಮ್ಮ ಆತ್ಮಕಥೆ ಚತುರಂಗದಲ್ಲಿ ಹೇಳಿಕೊಂಡಿದ್ದಾರೆ.

***- ಎಲ್ಲೋ ಹುಡುಕಿದೆ ಇಲ್ಲದ ದೇವರ***
***ಕಲ್ಲು ಮಣ್ಣುಗಳ ಗುಡಿಯೊಳಗೆ***
***ಇಲ್ಲೇ ಇರುವ ಪ್ರೀತಿ ಸ್ನೇಹಗಳ***
***ಗುರುತಿಸದಾದೆನು ನಮ್ಮೊಳಗೆ***
***- ಪ್ರೀತಿ ಇಲ್ಲದ ಮೇಲೆ***
***ಮಾತಿಗೆ ಮಾತು ಕೂಡೀತು ಹೇಗೆ?***
***ಅರ್ಥ ಹುಟ್ಟಿತು ಹೇಗೆ?***
***ಬರಿ ಪದಕ್ಕೆ ಪದ ಜೊತೆಗಿದ್ದ ಮಾತ್ರಕ್ಕೆ ಪದ್ಯವಾದೀತು ಹೇಗೆ?***

ಈ ರೀತಿಯಲ್ಲಿ ಜಿಎಸ್ಎಸ್ ತಮ್ಮ ಕವಿತೆಗಳ ಮೂಲಕ ಮನುಷ್ಯರಲ್ಲಿ ಮಾನವೀಯ ಅಂತಕರಣ ತಟ್ಟುವಂತೆ ಮಾಡಿ ಮನದಲ್ಲಿ ಪ್ರೀತಿ-ಸ್ನೇಹಗಳ ಹೂ ಅರಳಿ ಸಾಹಿತ್ಯ ರಸಿಕರಿಗೆ ಮಧುಪಾನ ನೀಡುವಂತಹ ಸಾಹಿತ್ಯ ಕೃಷಿ ಮಾಡಿದ್ದರು.

- ದಾವಣಗೆರೆ ಕುರಿತು ಜಿಎಸ್ಎಸ್ ಬರೆದಿರುವ ಭಾವನ ನುಡಿಗಳು

***ಜೋಳದ ಹೊಲದ ತೆನೆತೆನೆಯ ತೂಗಿ ಬೀಸುವ***
***ಗಾಳಿಯಲ್ಲಿ ಮೂರು ಬಗೆಯ ಮರ್ಮರ, ಸಂಜೆಯ ಕೆಳಗೆ***
***ಅಲ್ಲಲ್ಲಿ ತಳತಳ ನೀರು, ಪಿರಾಮಿಡ್ಡಿನಂತೆದ್ದು ಕೂತ***
***ಬಾತಿಯ ಗುಡ್ಡ, ಮಿಣಿಮಿಣಿ ದೀಪ ಅದರ ತುದಿಗೆ***
***ಅಲ್ಲಿಂದ ಇಳಿದು ಹಿಂದಕ್ಕೆ ಬಂದರೆ ನೀವು***
***ದಾರಿಯುದ್ದಕ್ಕೂ ಹತ್ತಿ, ಶೇಂಗಾ, ಅವರೇ ನೆಲದ ಸೊಗಡು***
***ಊರಕಡೆ ನಡೆವ ಎಮ್ಮೆಯ ಹಿಂಡು, ಅಲ್ಲೊಂದು***
***ಇಲ್ಲೊಂದು ಗಿರಣಿ, ಮಂಡಕ್ಕಿ-ಮೆಣಸಿನಕಾಯಿ ಬೋರ್ಡ್***
***ವರ್ಷಕ್ಕೊಮ್ಮೆ ಜಗದ್ಗುರುಗಳಡ್ಡ ಪಲ್ಲಕ್ಕಿ***
***ಬಸವ ಜಯಂತಿ, ಭಜನೆಯ ಮೇಳ, ಪ್ರವಚನ***
***ದುರುಗಮ್ಮನ ಉತ್ಸವ, ಆನೆಕೊಂಡದ ಜಾತ್ರೆಯಲ್ಲಿ***
***ಮೈದುಂಬಿ ಕಾರಣಿಕ ನುಡಿಯುವ ಒಗಟು ಶಕುನ***
***ಹೊಲ ಗದ್ದೆಗಳ ದಾಟಿ ದೂರದ ತೋಟದೊಳಗೂಟ***
***ಮಹೇಶ್ವರನ ಜಾತ್ರೆ, ವರ್ಷಂಪ್ರತಿ***
***ಒಂಭತ್ತು ಮೈಲಿಗಳಾಚೆ ಹರಿಹರದಲ್ಲಿ***
***ತುಂಗಭದ್ರೆಗೆ ಬರುವ ಭಾಗೀರತಿ***
***ಇದೆಲ್ಲಾ ಹಿಂದಿನ ಮಾತು, ಈಗ ಹ್ಯಾಂಗಿದೆ ಸ್ವಾಮಿ***
***ನನ್ನ ನೆನಪಿನ ಊರು? ನನ್ನ ಕವಿತೆಯ ಹಕ್ಕಿ***
***ರೆಕ್ಕೆ ಬಿಚ್ಚಿದ ಊರು, ಗೆಳೆತನದ ಗೂಡುಕಟ್ಟಿದ ಊರು.***

**ನವ್ಯ ಸಾಹಿತಿಯಾಗಿ ಜಿಎಸ್ಎಸ್ :** ನವೋದಯದ ಉಚ್ಛ್ರಾಯ ಕಾಲದಲ್ಲಿ ತಮ್ಮ ಕಾವ್ಯಸೃಷ್ಟಿಯನ್ನು ಪ್ರಾರಂಭಿಸಿ, ನವ್ಯ ಕಾಲದ ಜೊತೆ ಜೊತೆಯಲ್ಲೇ ಗಟ್ಟಿ ಕವಿಯಾಗಿ ಬೆಳೆದು ದಲಿತ-ಬಂಡಾಯ-ನವ್ಯ ಕಾಲಘಟ್ಟದ ಸಮಯದಲ್ಲಿಯೂ ಜಿಎಸ್ಎಸ್ ತಮ್ಮ ಕಾವ್ಯರಚನೆಯ ನಿರಂತರತೆಯನ್ನು ಕಾಪಾಡಿಕೊಂಡು ಮನ್ನಣೆ ಪಡೆದಿದ್ದರು. ಹೀಗೆ ಅನೇಕ ಚಳುವಳಿಗಳ ಅಗ್ನಿದಿವ್ಯದಲ್ಲಿ ಹಾದು ಹೋಗಿ ತಮ್ಮ ವಿಶಿಷ್ಟ ಕಾವ್ಯ ಧ್ವನಿಯನ್ನು ಸ್ಥಾಪಿಸಿದ್ದು, ಕಾವ್ಯದ ಹೆಗ್ಗಳಿಕೆಗೆ ಮೆರುಗು ನೀಡಿದ್ದಾರೆ.

***'ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ***
***ಇದ್ದಷ್ಟು ದಿನ ನೆಲವ ಉತ್ತು-ಬಿತ್ತಿ ನೀರೆರೆದು***
***ಮಲಗಿರುವ ಬೀಜಗಳ ಕಣ್ಣ ತೆರೆಸುತ್ತೇನೆ.'***

ಎಂದು ಪದ್ಯವೊಂದರಲ್ಲಿ ಜಿಎಸ್ಎಸ್ ತಮ್ಮ ನಿಲುವಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ವಿನಯ ಮತ್ತು ಜೀವನ ಶ್ರದ್ದೆಗಳೇ ಅವರನ್ನು ಕಾವ್ಯ ಮತ್ತು ಜೀವನದ ಹೋರಾಟದಲ್ಲಿ ಬಹು ಎತ್ತರದ ನೆಲೆಗೆ ತಂದು ನಿಲ್ಲಿಸಿದ್ದವು.

**- ಎಲ್.ಜಿ. ಮಧುಕುಮಾರ್ ಬಸವಾಪಟ್ಟಣ**
ಕನ್ನಡ ಪರಿಚಾರಕ. ದಾವಣಗೆರೆ
9448786664, 8861655989

# ಮಡುಗಟ್ಟಿದ ದುಃಖದೊಂದಿಗೆ ಸಾಮೂಹಿಕ ಪೂಜೆ, ಮೌನ ಪ್ರತಿಭಟನೆ

## ರಸ್ತೆ ಅಪಘಾತದಲ್ಲಿ ದುರ್ಮರಣಕ್ಕೀಡಾದ ದಾವಣಗೆರೆಯ 10 ಜನ ಮಹಿಳೆಯರೂ ಸೇರಿದಂತೆ 12 ಜನರಿಗೆ ಹೆದ್ದಾರಿ ತಡೆದು ಭಾವಪೂರ್ಣ ಶ್ರದ್ಧಾಂಜಲಿ, ಅಷ್ಟಪಥ ರಸ್ತೆ ನಿರ್ಮಾಣಕ್ಕೆ ಆಗ್ರಹ

ಇ.ಎಂ. ಮಂಜುನಾಥ





ಧಾರವಾಡದ ಇಟ್ಟಿಗಟ್ಟಿ ಬಳಿಯ ರಾಷ್ಟ್ರೀಯ ಹೆದ್ದಾರಿ ತಡೆದು ಮೃತ ಎಲ್ಲಾ 12 ಜನರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ, ಮೌನ ಪ್ರತಿಭಟನೆ ನಡೆಸುತ್ತಿರುವ ಕುಟುಂಬಸ್ಥರು ಮತ್ತು ಬಂಧುಗಳು ಹಾಗೂ ಸ್ನೇಹಿತರು.

**ಇಟ್ಟಿಗಟ್ಟಿ (ಧಾರವಾಡ), ಫೆ.6-**

**'ಆ ಹೆದ್ದಾರಿಯ ಮಧ್ಯದಲ್ಲಿ ಸಾಲು - ಸಾಲಾಗಿ ಫೋಟೋಗಳನ್ನಿಟ್ಟಿದ್ದರು. ಈ ಲೋಕದಿಂದ ದೂರವಾಗಿರುವ ಫೋಟೋಗಳಲ್ಲಿದ್ದವರಿಗೆ ಸಾಮೂಹಿಕವಾಗಿ ಪೂಜೆ ಸಲ್ಲಿಸುತ್ತಿದ್ದರು. ಅವರನ್ನು ಕಳೆದುಕೊಂಡವರ ಕುಟುಂಬಸ್ಥರಲ್ಲಿ ಕೆಲವರು ಫೋಟೋಗಳಿಗೆ ಪುಷ್ಪಗಳನ್ನಿಡುತ್ತಾ ಬಿಕ್ಕಿ - ಬಿಕ್ಕಿ ಅಳುತ್ತಿದ್ದರು. ಇನ್ನು ಕೆಲವರು ತಮಗೆ ಉಮ್ಮಳಿಸಿ ಬರುತ್ತಿದ್ದ ಕಣ್ಣೀರನ್ನು ಹಿಡಿದಿಟ್ಟುಕೊಂಡು ಪೂಜೆ ಸಲ್ಲಿಸುತ್ತಿದ್ದರು. ಮೌನವಾಗಿ ನಿಂತುಕೊಂಡಿದ್ದ ಮತ್ತೆ ಕೆಲವರ ಕಣ್ಣುಗಳು ತೇವಗೊಂಡಿದ್ದವು. ಸದಾ ವಾಹನಗಳ ಓಡಾಟದಿಂದ ಗಿಜಿಗುಡುತ್ತಿದ್ದ ಆ ಪ್ರದೇಶದಲ್ಲಿ ಸುಮಾರು 18 ನಿಮಿಷಗಳ ಕಾಲ ಮೌನ ಆವಾರಿಸಿತ್ತು.'**

**'ಜೀವಗಳ ರಕ್ಷಣೆ ಎಲ್ಲರ ಹೊಣೆ', 'ಸುರಕ್ಷತೆ ನಾಗರಿಕರ ಜವಾಬ್ದಾರಿ', 'ಅಪಘಾತದಲ್ಲಿ ಮಡಿದವರಿಗೆ ನಮ್ಮ ಶ್ರದ್ಧಾಂಜಲಿ', 'ಅಷ್ಟಪಥ ರಸ್ತೆ ನಿರ್ಮಾಣದ ಕಾಮಗಾರಿಯನ್ನು ತತ್‌ಕ್ಷಣವೇ ಪ್ರಾರಂಭಿಸಬೇಕು', 'ಬೇಜವಾಬ್ದಾರಿಯ ಜನನಾಯಕರು - ಅಧಿಕಾರಿಗಳಿಗೆ ದಿಕ್ಕಾರ', 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ದಿಕ್ಕಾರ', 'ರಸ್ತೆ ಸುರಕ್ಷತೆ ಎಂಬುದನ್ನು ಕೇವಲ ಬಾಯಿ ಮಾತಿನಲ್ಲಾಗಬಾರದು ; ಹಾಗೂ ಅದು ರಸ್ತೆ ಸುಧಾರಣೆಯೊಂದಿಗೆ ಆಗಬೇಕು'.**

- ಭಾವನಾತ್ಮಕ ಮತ್ತು ಆಕ್ರೋಶಭರಿತವಾದ ಈ ಎರಡೂ ದೃಶ್ಯಗಳು ಕಂಡು ಬಂದಿದ್ದು, ಹುಬ್ಬಳ್ಳಿ - ಧಾರವಾಡ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಇಟ್ಟಿಗಟ್ಟಿ ಎಂಬ ಗ್ರಾಮದ ಬಳಿ.

ಕಳೆದ 22 ದಿನಗಳ ಹಿಂದೆ ಜನವರಿ 15ರ ಬೆಳಗಿನ ಜಾವ ಇಟ್ಟಿಗಟ್ಟಿ ಸಮೀಪ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮಡಿದ ದಾವಣಗೆರೆಯ 10 ಮಹಿಳೆಯರೂ ಸೇರಿದಂತೆ ಒಟ್ಟು 12 ಜನರ ಕುಟುಂಬಸ್ಥರು ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದ ಮೂಲಕ ಶನಿವಾರ ಬೆಳಿಗ್ಗೆ ನಡೆಸಿದ ಮೌನ ಪ್ರತಿಭಟನೆಯ ಈ ದೃಶ್ಯ ಮನಮಿಡಿಯುವಂತಿತ್ತು.

ಶಾಲಾ - ಕಾಲೇಜುಗಳ ಆತ್ಮೀಯ ಸಹಪಾಠಗಳಾಗಿದ್ದ 14 ಜನರು ಸೇರಿದಂತೆ ಒಟ್ಟು 17 ಜನರು ಎರಡು ದಿನಗಳ ಗೋವಾ ಪ್ರವಾಸಕ್ಕಾಗಿ ಮಕರ ಸಂಕ್ರಮಣದ ಮರುದಿನ ಬೆಳಗಿನ ಜಾವ ನಗರದಿಂದ ಹೊರಟಾಗ, ಅವರು ಪ್ರಯಾಣಿಸುತ್ತಿದ್ದ ಕೆಎ 64 - 1316 ಸಂಖ್ಯೆಯ ಮಿನಿ ಬಸ್ ಮತ್ತು ಕೆಎ 22-ಸಿ 1649 ಸಂಖ್ಯೆಯ ಟಿಪ್ಪರ್ ಲಾರಿ ನಡುವೆ ಇಟ್ಟಿಗಟ್ಟಿ ಬಳಿ ಡಿಕ್ಕಿಯಾದ ಪರಿಣಾಮ ಭೀಕರ ರಸ್ತೆ ಅಪಘಾತವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ಸ್ಥಳದಲ್ಲಿ ಈವರೆಗೂ ಸಾಕಷ್ಟು ರಸ್ತೆ ಅಪಘಾತಗಳಾಗಿದ್ದು, ಪೊಲೀಸ್ ವರದಿ ಪ್ರಕಾರ ಸಾವಿರಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ. ಆ ಮೂಲಕ ಇದು 'ಅಪಘಾತ ಸ್ಥಳ' ಎಂದು ಖ್ಯಾತಿ ಪಡೆದಿದೆ. ಅಪಘಾತಗಳು ನಡೆದಾಗಲೆಲ್ಲಾ ಅವರ ಕುಟುಂಬಸ್ಥರು ಮತ್ತು ಸಂಘ - ಸಂಸ್ಥೆಗಳು ರಸ್ತೆ ತಡೆದು ಪ್ರತಿಭಟನೆ ನಡೆಸಿ, ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದರು. ಆದರೆ, ಹೆದ್ದಾರಿ ತಡೆದು, ಮಡಿದವರ ಫೋಟೋಗಳನ್ನು ಸಾಲು - ಸಾಲಾಗಿಟ್ಟು ಪೂಜೆ ನಡೆಸುವುದರೊಂದಿಗೆ ಚುನಾಯಿತ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯವನ್ನು ಖಂಡಿಸಿ, ಮೌನ ಹಾಗೂ ಭಾವನಾತ್ಮಕ ಪ್ರತಿಭಟನೆ ನಡೆಸುವುದರ ಮೂಲಕ ಸರ್ಕಾರದ ಗಮನ ಸೆಳೆದಿದ್ದು ಬಹುಶಃ ಇದೇ ಪ್ರಥಮ ಎನ್ನಬಹುದು. ಇದರೊಂದಿಗೆ ಗಂಭೀರತೆಯಿಂದ ಅರ್ಥಪೂರ್ಣವಾಗಿ ಪ್ರತಿಭಟನೆ ನಡೆಸಿ, ಸರ್ಕಾರವನ್ನು ಎಚ್ಚರಗೊಳಿಸಬಹುದು ಎಂಬುದನ್ನು ಸಾವಿಗೀಡಾದವರ ಕುಟುಂಬಸ್ಥರು ತೋರಿಸಿಕೊಟ್ಟು, ಸಾರ್ವಜನಿಕರ ಪ್ರಶಂಸೆಗೊಳ್ಳಗಾಗಿದ್ದಾರೆ.

**ಸಾಲಾಗಿ ಹೊರಟ ಕಾರುಗಳು :** ಶನಿವಾರ ಬೆಳಿಗ್ಗೆ 7ರ ಹೊತ್ತಿಗೆ ದಾವಣಗೆರೆಯ ಎಂ.ಸಿ.ಸಿ 'ಬಿ' ಬ್ಲಾಕ್‌ನಲ್ಲಿರುವ ಭಾರತೀಯ ವೈದ್ಯಕೀಯ ಸಂಘ (ಐಎಂಎ ಹಾಲ್)ದ ಕಚೇರಿ ಬಳಿ ಸೇರಿದ್ದ ಮೃತ 10 ಜನರ ಕುಟುಂಬಸ್ಥರು ಯಾವುದೇ ರೀತಿಯ ಘೋಷಣೆಗಳಿಲ್ಲದೇ ಧಾರವಾಡದ ಇಟ್ಟಿಗಟ್ಟಿಯತ್ತ ಹೊರಟರು.

ಎಲ್ಲಾ 10 ಜನ ಮಹಿಳೆಯರ ಕುಟುಂಬಸ್ಥರು, ಹಿತೈಷಿಗಳು, ಬಂಧುಗಳು, ಆತ್ಮೀಯರಿದ್ದ ಪ್ರತ್ಯೇಕ 50 ಕ್ಕೂ ಹೆಚ್ಚು ಕಾರುಗಳು ಸಾಲು - ಸಾಲಾಗಿ ಶಿಸ್ತು ಬದ್ಧವಾಗಿ ಚಲಿಸುತ್ತಿದ್ದಾಗ ಆ ಎಲ್ಲಾ ಕಾರುಗಳನ್ನು ಜನರು ರಸ್ತೆ ಬದಿಯಲ್ಲಿ ನಿಂತು ಆಶ್ಚರ್ಯದಿಂದ ನೋಡುತ್ತಿದ್ದರು. ಪ್ರತಿ ಕಾರುಗಳು ಗ್ಲಾಸುಗಳಿಗೆ ಅಂಟಿಸಿದ್ದ 10 ಮೃತ



ಮಹಿಳೆಯರ ಫೋಟೋಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದ ಜನರು, ತಾವು ನಿಂತಲ್ಲೇ ಮೃತರ ಆತ್ಮಕ್ಕೆ ಶಾಂತಿ ಕೋರುತ್ತಿದ್ದರು.

ಬೆಳಿಗ್ಗೆ 10.30ರ ವೇಳೆಗೆ ಇಟ್ಟಿಗಟ್ಟಿ ತಲುಪಿದ ಎಲ್ಲರೂ ಅಲ್ಲಿ ಸಿದ್ದ ಪಡಿಸಿದ್ದ ಫೋಟೋಗಳಿಗೆ ಪುಷ್ಪಗಳನ್ನಿಟ್ಟು ಪೂಜೆ ಸಲ್ಲಿಸಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಶ್ರದ್ಧಾಂಜಲಿ ಮತ್ತು ಮೌನ ಪ್ರತಿಭಟನೆಯಿಂದಾಗಿ ಹೆದ್ದಾರಿಯಲ್ಲಿನ ವಾಹನಗಳ ಸಂಚಾರ ಅಸ್ತವ್ಯಸ್ತವಾಗದಂತೆ ಪೊಲೀಸರು ತುಂಬಾ ಅಚ್ಚುಕಟ್ಟಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದೂ, ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.

**ಹಕ್ಕೊತ್ತಾಯ :** ಕಾರ್ಯಕ್ರಮದ ಸಂದರ್ಭದಲ್ಲಿ ಮಾತನಾಡಿದ ಹಲವರು, 'ನಮ್ಮ ಪ್ರತಿಭಟನೆ ಯಾರ ವಿರುದ್ಧವೂ ಅಲ್ಲ; ನಮ್ಮನ್ನಗಲಿದ ಚೇತನಗಳಂತೆ ಮತ್ತೊಂದು ಚೇತನ ಈ ಲೋಕದಿಂದ ದೂರವಾಗಬಾರದು; ನಮ್ಮ ಮನೆಯಲ್ಲಿಯಾಗಿರುವ ಶೋಕವು ಇನ್ನೊಂದು ಮನೆಯಲ್ಲಾಗಬಾರದು ಎಂಬುದಷ್ಟೇ ನಮ್ಮ ಕಳಕಳಿ' ಎಂದರು.

ಹುಬ್ಬಳ್ಳಿ - ಧಾರವಾಡ ಮಧ್ಯದ ದ್ವಿಪಥದ 33.3 ಕಿ.ಮೀ ಉದ್ದದ ಈ ಹೆದ್ದಾರಿ ತತ್‌ಕ್ಷಣವೇ ಅಷ್ಟಪಥ ರಸ್ತೆಯನ್ನಾಗಿ ನಿರ್ಮಾಣ ಮಾಡುವುದರ ಮೂಲಕ ರಸ್ತೆ ಅಪಘಾತಗಳನ್ನು ತಪ್ಪಿಸಬೇಕು ಎಂದು ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಆಗ್ರಹ ಪಡಿಸಿದರು.

ಹತ್ತು ತಾಯಂದಿರು ಸೇರಿದಂತೆ ಒಟ್ಟು 12 ಜನರ ಅಗಲಿಕೆಯಿಂದ ಅವರ ಕುಟುಂಬಕ್ಕೆ ಆಗಿರುವ ದುಃಖವನ್ನು ತುಂಬಿಕೊಡುವವರು ಯಾರು? ಈ ದುಃಖವನ್ನು ತುಂಬಿಕೊಳ್ಳಲು ಅಷ್ಟು ಸುಲಭವೇ ? ಅವರು ಬಿಟ್ಟು ಹೋಗಿರುವ ಚಿಕ್ಕ ಚಿಕ್ಕ ಮಕ್ಕಳ ಗತಿಯೇನು ? ಆ ಮಕ್ಕಳ ಪೋಷಣೆ ಎಷ್ಟು ಕಷ್ಟ ಹೇಳಿ ? ಎಂಬಿತ್ಯಾದಿ ಪ್ರಶ್ನೆಗಳನ್ನು ಮೃತ ಕುಟುಂಬಸ್ಥರು ಕಣ್ಣೀರು ಸುರಿಸುತ್ತಾ ಪತ್ರಕರ್ತರ ಮುಂದೆ ಇಡುತ್ತಾ ಹೊರಟಾಗ, ಮಾಧ್ಯಮದವರ ಕಣ್ಣುಗಳೂ ತೇವಗೊಂಡಿದ್ದವು.

**ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು :** ಲೋಕಸಭೆಯ ಮಾಜಿ ಸದಸ್ಯ ಐ.ಜಿ.ಸನದಿ, ಜಗಳೂರು ಕ್ಷೇತ್ರದ ಮಾಜಿ ಶಾಸಕ ಟಿ. ಗುರುಸಿದ್ದನಗೌಡ, ಮಾಜಿ ಮುಖ್ಯಮಂತ್ರಿ ದಿ. ಜೆ.ಹೆಚ್.ಪಟೇಲ್ ಅವರ ಸಹೋದರಿ ಶ್ರೀಮತಿ ಅನುಸೂಯಮ್ಮ, ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಧಾರವಾಡದ ಹಿರಿಯ ನ್ಯಾಯವಾದಿ ಪಾಂಡುರಂಗ ನಿರ್ಲಕರ್, ರಾಣೇಬೆನ್ನೂರಿನ ಮಾಹಿತಿ ಹಕ್ಕುದಾರ ಜೆ.ಎಂ.ರಾಜಶೇಖರ್, ಧಾರವಾಡ ಜಿಲ್ಲಾ ಜಯ ಕರ್ನಾಟಕ ಸಂಘಟನೆಯ ಅಧ್ಯಕ್ಷ ಸುಧೀರ್ ಎಂ. ಮುಧೋಳ್ ಮತ್ತಿತರರು ಮಾತನಾಡಿದರು.

ದಾವಣಗೆರೆಯ ಆರೈಕೆ ಆಸ್ಪತ್ರೆ ವೈದ್ಯ ಡಾ. ರವಿಕುಮಾರ್, ಬಾಪೂಜಿ ಆಸ್ಪತ್ರೆಯ ಅನಸ್ತೇಷಿಯಾ ತಜ್ಞ ಡಾ. ರವಿ, ಮಕ್ಕಳ ತಜ್ಞ ಡಾ. ರಮೇಶ್, ಡಾ. ಪ್ರಸನ್ನಕುಮಾರ, ಡಾ. ರಮೇಶ್, ಡಾ. ಸುರೇಶ್, ಡಾ.ಹಾಲಸ್ವಾಮಿ ಕಂಬಾಳಿಮಠ, ಡಾ. ಚಂದನ್, ಡಾ. ಸುನೀಲ್, ಡಾ. ಸುಬೋಧ್ ಶೆಟ್ಟಿ, ಡಾ. ಗಣೇಶ್, ಬನ್ನಿಮಟ್ಟಿ ಚಂದ್ರಶೇಖರ್, ಜಿ.ಬಿ.ನಟೇಶ್, ಶಿವಕುಮಾರ್, ಜಿ.ಆರ್. ವಿನಯ್, ವೀರೇಶ್ ಬಿರಾದಾರ್, ರಾಜು ಬಾಬು, ಸಾಗರ್ ರಾರವಿ, ಸಿದ್ದಾರ್ಥ್ ಕುಂಚೂರು, ಶ್ರೀನಿವಾಸ್ ಮಾಡುಳಾ, ವಿನಯ್ ಮರುಳ, ಬೇತೂರು ಜಗದೀಶ್, ಬೇತೂರು ರಾಜೇಶ್, ಜಿ.ಬಿ.ನಿಶ್ಚಯ್, ಅಭಿಷೇಕ್ ಬಿರಾದಾರ್ ಹಾಗೂ ಸಂಬಂಧಿಕರು, ಸ್ನೇಹಿತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಮೃತ ಪಟ್ಟವರು :** ಶ್ರೀಮತಿ ಪ್ರೀತಿ ರವಿಕುಮಾರ್, ಡಾ. ವೀಣಾ ಪ್ರಕಾಶ್, ಶ್ರೀಮತಿ ಮಂಜುಳಾ ನಟೇಶ್, ಶ್ರೀಮತಿ ರಾಜೇಶ್ವರಿ ಶಿವಕುಮಾರ್ ಬಂದಮ್ಮನವರ್, ಶ್ರೀಮತಿ ಪರಂಜ್ಯೋತಿ ಶಶಿಧರ್, ಶ್ರೀಮತಿ ವರ್ಷಿತಾ ವೀರೇಶ್, ಶ್ರೀಮತಿ ಹೇಮಲತಾ (ಮಾನಸಿ), ಶ್ರೀಮತಿ ವೇದಾ ಮಂಜುನಾಥ್, ಕು. ಕ್ಷೀರಾ ಸುರೇಶ್ ಬಾಬು, ಕು. ರಶ್ಮಿತಾ ಅವರುಗಳು ದಾವಣಗೆರೆಯವರಾಗಿದ್ದು, ಮಿನಿ ಬಸ್ಸಿನ ಚಾಲಕ ರಾಜು ಸೋಮಪ್ಪ ಗೊರಬಣ್ಣನವರ್, ನಿರ್ವಾಹಕ ಮಲ್ಲಿಕಾರ್ಜುನ್ ಅವರುಗಳು ರಾಣೇಬೆನ್ನೂರಿನವರಾಗಿದ್ದಾರೆ.

**ಗಾಯಾಳುಗಳು :** ದುರಂತದಲ್ಲಿ ಗಾಯಗೊಂಡಿದ್ದ ಶ್ರೀಮತಿ ನಿರ್ಮಲ ಚಂದ್ರಶೇಖರ್, ಶ್ರೀಮತಿ ಉಷಾರಾಣಿ ಡಾ. ರಮೇಶ್, ಶ್ರೀಮತಿ ಆಶಾ ಬೇತೂರು ಜಗದೀಶ್, ಶ್ರೀಮತಿ ಪೂರ್ಣಿಮ ಸುರೇಶ್ ಬಾಬು, ಶ್ರೀಮತಿ ರಾಮ ಲಕ್ಷ್ಮಿ (ರಜನಿ ಶ್ರೀನಿವಾಸ್) ಅವರುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾಗುತ್ತಿದ್ದಾರೆ.

ತೀವ್ರ ರಕ್ತಸ್ರಾವ ಗಾಯಗೊಂಡಿದ್ದ ಶ್ರೀಮತಿ ಪ್ರವೀಣ ಪ್ರಕಾಶ್ ಅವರು ಹುಬ್ಬಳ್ಳಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಫೆ.3- ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಅರ್ಹರಿರುವ ವಿದ್ಯಾರ್ಥಿಗಳು (https://ssp.post-matric.karnataka.gov.in) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಮಾರ್ಚ್ 10 ಕಡೆಯ ದಿನವಾಗಿರುತ್ತದೆ.

ಇ-ದೃಢೀಕರಣ ಪೋರ್ಟಲ್‌ನಲ್ಲಿ ಅರ್ಜಿದಾರರ ದಾಖಲಾತಿಗಳನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಇ-ದೃಢೀಕರಣ ಅಧಿಕಾರಿಯಾಗಿರುತ್ತಾರೆ. ಅದರಂತೆ ಇ-ದೃಢೀಕರಣ ಪೋರ್ಟಲ್‌ನಲ್ಲಿ ತಮ್ಮ ದಾಖಲಾತಿಗಳನ್ನು ಸಲ್ಲಿಸಿ, ಇ-ದೃಢೀಕರಣಾಧಿಕಾರಿಯಾದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಿದೆ.

## ನಗರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ದಾವಣಗೆರೆ, ಫೆ.6- ಬೆ.ವಿ.ಕಂ/ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ 24x7 ಜಲಸಿರಿ ಕಾಮಗಾರಿ ಅಡಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ತುರ್ತು ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ವಿದ್ಯಾನಗರ ಮುಖ್ಯ ರಸ್ತೆ, 12,13,14,15 & 16ನೇ ಕ್ರಾಸ್, ಆಂಜನೇಯ ದೇವಸ್ಥಾನ ಸುತ್ತಮುತ್ತ, ತರಳಬಾಳು ಬಡಾವಣೆ 12,13 & 14 ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಫೆ.8 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಕುವೆಂಪು ನಗರ, ಸಿದ್ದವೀರಪ್ಪ ಬಡಾವಣೆ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.8 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ದುಬಾರಿ ಕೈಗಾರಿಕಾ ನಿವೇಶನ ದೂರವಾದ ಉದ್ಯಮಿಗಳು

ದಾವಣಗೆರೆ, ಫೆ. 6 – ಒಂದೆಡೆ ಕೈಗಾರಿಕಾ ಪ್ರದೇಶಗಳಿಗಾಗಿ ರೈತರಿಂದ ಜಮೀನು ವಶಪಡಿಸಿಕೊಂಡಾಗ ಅವರಿಗೆ ಸ್ವಲ್ಪ ಹೆಚ್ಚು ಪರಿಹಾರ ಕೊಡಲು ಸಾಧ್ಯವಾಗುತ್ತಿಲ್ಲ. ಮತ್ತೊಂದೆಡೆ ಉದ್ಯಮಿಗಳು ಕೈಗಾರಿಕೆ ಸ್ಥಾಪಿಸಲು ಕಡಿಮೆ ಬೆಲೆಗೆ ಪ್ಲಾಟ್‌ಗಳು ಸಿಗುತ್ತಿಲ್ಲ ಎಂಬ ಅಭಿಪ್ರಾಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ವ್ಯಕ್ತವಾಯಿತು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ದುಬಾರಿ ದರದ ಕುರಿತು ಚರ್ಚೆ ನಡೆದು, ದರ ಪರಿಷ್ಕರಣೆಗೆ ಪ್ರಸ್ತಾವನೆ ಕಳಿಸಲು ತೀರ್ಮಾನಿಸಲಾಯಿತು.

ದರ ಹೆಚ್ಚಾಗಿರುವ ಬಗ್ಗೆ ಮಾತನಾಡಿದ ಉದ್ಯಮಿ ಎಸ್.ಎನ್. ಬಾಲಾಜಿ, ಕೆ.ಎಸ್.ಎಸ್.ಐ.ಡಿ.ಸಿ. ಪ್ಲಾಟ್ ಪಡೆಯಲು 2.20 ಕೋಟಿ ರೂ.ಗಳವರೆಗೆ ವೆಚ್ಚವಾಗುತ್ತಿದೆ. ಇಷ್ಟು ಸಾಲದು ಎಂಬಂತೆ, ನಂತರದಲ್ಲಿ ಸೌಲಭ್ಯಗಳಿಗೆ ಮತ್ತಷ್ಟು ಹಣ ಕೇಳಲಾಗುತ್ತದೆ. ಈ ಹೆಚ್ಚುವರಿ ವೆಚ್ಚಕ್ಕೆ ಬ್ಯಾಂಕುಗಳಿಂದ ಸಾಲವೂ ಸಿಗುವುದಿಲ್ಲ. ಹೀಗಾಗಿಯೇ ಉದ್ಯಮ ಸ್ಥಾಪಿಸಲು ಆಸಕ್ತಿ ಬರುತ್ತಿಲ್ಲ ಎಂದರು.

ಪರಿಶಿಷ್ಟ ಜಾತಿ ಹಾಗೂ ಪಂಗಡದ ಉದ್ಯಮಿಗಳಿಗೆ ಶೇ.75ರವರೆಗೆ ಪ್ಲಾಟ್ ದರದಲ್ಲಿ ಸಬ್ಸಿಡಿ ಇದೆ. ಈ ರಿಯಾಯಿತಿ ಕೊಟ್ಟರೂ ಹೊರೆಯಾಗುತ್ತಿದೆ. ಇನ್ನು



ಸಾಮಾನ್ಯ ವರ್ಗದವರ ಹೊರೆ ಮತ್ತಷ್ಟಾಗಿದೆ. ಹೀಗಾಗಿ ಉದ್ಯಮಿಗಳು ಹಿಂಜರಿಯುತ್ತಿದ್ದಾರೆ ಎಂದರು.

ಕೆಐಎಡಿಬಿ ಮೂಲಕ ನೀಡಲಾಗುವ ಜಮೀನಿಗೆ ಪ್ರತಿ ಎಕರೆಗೆ 83 ಲಕ್ಷ ರೂ. ದರ ನಿಗದಿ ಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಕ್ಕೆ ಅಚ್ಚರಿ ವ್ಯಕ್ತಪಡಿಸಿದ ಜಿಲ್ಲಾಧಿಕಾರಿ ಬೀಳಗಿ, ರೈತರಿಗೆ ಒಂದು ಲಕ್ಷ ರೂ. ಹೆಚ್ಚು ಪರಿಹಾರ ಕೊಡಿ ಎಂದರೂ ಸಾಧ್ಯವಾಗದು ಎನ್ನುತ್ತೀರಿ. ನಾನು ಕೆಐಎಡಿಬಿಯಲ್ಲಿ ಕೆಲಸ ಮಾಡಿದ್ದೇನೆ. ರೈತರಿಂದ ಪಡೆದ ಜಮೀನು ಯಾವ ರೀತಿ ಅಭಿವೃದ್ಧಿ ಪಡಿಸುತ್ತೀರಾ ಎಂಬುದು ಗೊತ್ತಿದೆ ಎಂದರು.

ಹರಿಹರ ತಾಲ್ಲೂಕಿನ ಸಾರಥಿ - ಕುರುಬರಹಳ್ಳಿ ಕೈಗಾರಿಕಾ ವಸಾಹತುವಿನಲ್ಲಿ ನಿವೇಶನ ಪಡೆಯಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರಿಂದ 18 ಅರ್ಜಿಗಳು ಬಂದಿವೆ. ಒಂದು ನಿವೇಶನಕ್ಕೆ ಒಂದೇ ಅರ್ಜಿ ಸಲ್ಲಿಸಲಾಗಿದೆ. ಹೀಗಾಗಿ ಅರ್ಜಿ ಸಲ್ಲಿಸಿದ ಎಲ್ಲರಿಗೂ ನಿವೇಶನ ನೀಡಬಹುದು ಎಂದು ಸಭೆಗೆ ಅಧಿಕಾರಿಗಳು ತಿಳಿಸಿದರು.

ಈ ವಸಹಾತುವಿನಲ್ಲಿ 95 ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇನ್ನೂ 57 ನಿವೇಶನಗಳು ಹಂಚಿಕೆಯಾಗದೇ ಉಳಿದಿವೆ. ನಿವೇಶನ ಪಡೆದ ಎರಡು ವರ್ಷಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಕ್ರಮ ತೆಗೆದುಕೊಳ್ಳದ 19 ಜನರಿಂದ ಒಂದು ಕೋಟಿ ರೂ.ಗಳವರೆಗೆ ದಂಡ ದೊರೆತಿದೆ ಎಂದೂ ಅಧಿಕಾರಿಗಳು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹರಿಹರದ ಉದ್ಯಮಿ ಹನುಮಂತರಾವ್, ಚದುರ ಮೀಟರ್ ಜಾಗಕ್ಕೆ 5 ಸಾವಿರ ರೂ.ಗಳ ಹೆಚ್ಚಿನ ದರ ನಿಗದಿ ಪಡಿಸಲಾಗಿದೆ. ಹೀಗಾಗಿ ಕೈಗಾರಿಕಾ ಪ್ರದೇಶದಲ್ಲಿ ಪ್ಲಾಟ್‌ಗಳು ಇದ್ದರೂ ಹೂಡಿಕೆ ಮಾಡಲು ಬರುತ್ತಿಲ್ಲ ಎಂದು ಹೇಳಿದರು.

ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದವರು ತಮ್ಮ ಸದಸ್ಯರಿಗೆ ಹರಿಹರ ಕೈಗಾರಿಕಾ ವಸಾಹತುವಿನಲ್ಲಿ 20 ಎಕರೆ ಜಮೀನು ನೀಡಬೇಕೆಂದು ಕೇಳಿದ್ದು ಸಭೆಯಲ್ಲಿ ಪ್ರಸ್ತಾಪವಾಯಿತು. ಅಂಗವಿಕಲರಿಗಾಗಿಯೇ ಶೇ.3 ರಷ್ಟು ನಿವೇಶನಗಳು ಮೀಸಲಾಗಿವೆ ಎಂದ ಜಿಲ್ಲಾಧಿಕಾರಿ ಬೀಳಗಿ, ಈ ನಿವೇಶನಗಳನ್ನು ಮಂಜೂರು ಮಾಡುವಂತೆ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ್ ವೀರ ಮಲ್ಲಪ್ಪ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿನಿರ್ದೇಶಕ ಹೆಚ್.ಎಸ್. ಜಯಪ್ರಕಾಶ್ ನಾರಾಯಣ್, ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕ ಸುರೇಶ್, ಕೆಐಎಡಿಬಿ ಅಧಿಕಾರಿ ಶ್ರೀಧರ್ ಮತ್ತಿತರರು ಪಾಲ್ಗೊಂಡಿದ್ದರು.

# ಸಂವಿಧಾನದ 74ನೇ ತಿದ್ದುಪಡಿ ರದ್ದು ಮಾಡುವುದು ಸೂಕ್ತ

## ಮುಖ್ಯಮಂತ್ರಿಗಳು ನಡೆಸಿದ ಸಭೆಯಲ್ಲಿ ದಾವಣಗೆರೆ ಮೇಯರ್ ಬಿ.ಜಿ.ಅಜಯ್‌ಕುಮಾರ್ ಅಭಿಮತ

ಬೆಂಗಳೂರು, ಫೆ.6- ಬೆಂಗಳೂರಿನ ಸಿ.ಎಂ ಗೃಹ ಕಛೇರಿ ಕೃಷ್ಣಾದಲ್ಲಿ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ ಎರಡನೇ ತಿದ್ದುಪಡಿ ಅಧಿನಿಯಮ 2015ರ ಅನ್ವಯ ವಿಕೇಂದ್ರೀಕೃತ ಆಡಳಿತ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿರುವ ಹಾಗೂ ಆಯವ್ಯಯ ಅವಕಾಶವನ್ನು ಕಲ್ಪಿಸುವ ಕುರಿತು ಪುನರಾವಲೋಕನೆಯನ್ನು ಕೈಗೊಳ್ಳುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಚಿಸಲಾಗಿದೆ.

ಸಂವಿಧಾನದ 74ನೇ ತಿದ್ದುಪಡಿ ಆಶಯಗಳಿಗೆ ಅನುಗುಣವಾಗಿ ನಗರ ಸ್ಥಳೀಯ ಸಂಸ್ಥೆಗಳು ತಳಮಟ್ಟದಿಂದ ಯೋಜನೆಗಳನ್ನು ರೂಪಿಸಲು ವಾರ್ಡ್ ಮಟ್ಟದಲ್ಲಿ ಸಭೆ ಸೇರಿ ದೂರದೃಷ್ಟಿ ಹಾಗೂ ವಾರ್ಷಿಕ ಯೋಜನೆಗಳನ್ನು ಕಡ್ಡಾಯವಾಗಿ ತಯಾರಿಸಿ ಅನುಷ್ಠಾನಗೊಳಿಸಲು ಆದೇಶ ಕೋರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಈ ಪ್ರಶ್ನೆಗೆ ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರ ಬಿ.ಜಿ.ಅಜಯ್ ಕುಮಾರ್ ಅವರು ಜನಸಾಮಾನ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಳಮಟ್ಟದಿಂದ ನಗರದ ಅಭಿವೃದ್ಧಿಗೆ ಸಮಿತಿಗಳನ್ನು ರಚಿಸಿ, ಅವರ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಒಳ್ಳೆಯ ವಿಷಯ, ಆದರೆ ಸಾರ್ವಜನಿಕರು ಈ



ವಿಷಯವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಉದಾಹರಣೆಗೆ ನಮ್ಮಲ್ಲಿ ಮಾಹಿತಿ ಪಡೆಯಲು ಆರ್.ಟಿ.ಐ (ರೈಟ್ ಇನ್ಫಾರ್ಮೇಷನ್ ಆಕ್ಟ್) ಇದೆ, ಆದರೆ ಇದರ ಸದುಪಯೋಗವನ್ನು ಎಷ್ಟು ಜನರು ಪಡೆಯುತ್ತಿದ್ದಾರೆ ಎಂದು ನಾವೆಲ್ಲರೂ ಯೋಚಿಸಲೇಬೇಕು ಮತ್ತು ಸಂವಿಧಾನದ 74ನೇ ತಿದ್ದುಪಡಿಯನ್ನು ಮೇಲ್ಮಟ್ಟದಲ್ಲಿ ಬರೆದು, ಚರ್ಚಿಸಿ ಇದನ್ನು ರದ್ದು ಮಾಡಿದರೆ ಒಳ್ಳೆಯದು ಎಂದು ಪ್ರತಿಕ್ರಿಯಿಸಿದರು.

ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಹಶೀಲ್ದಾರ್ ಅವರನ್ನು ತಾಲ್ಲೂಕು ನಗರ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಸದಸ್ಯರನ್ನಾಗಿಸಲು ಅವಕಾಶ ಕಲ್ಪಿಸಲು ಆದೇಶ ಕೋರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಇದಕ್ಕೆ ಉತ್ತರಿಸಿದ ಮಹಾಪೌರರು ತಹಶೀಲ್ದಾರ್ ಅವರನ್ನು ನಮ್ಮ ರೈತರಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ ಕಾನೂನುನಾತ್ಮಕವಾಗಿ ಸೂಚನೆಗಳನ್ನು ನೀಡಿದೆ.

ಆದರೆ ನಾವುಗಳು ನಗರ ಯೋಜನೆಗೆ ಮತ್ತು ಸಮಗ್ರ ಅಭಿವೃದ್ಧಿ ಸಮಿತಿಯ ಸದಸ್ಯರನ್ನಾಗಿ ಮಾಡುವುದರಿಂದ ಅವರು ಕಚೇರಿಗೆ ಸಮಯ ನೀಡಲು ಆಗುವುದಿಲ್ಲ. ಅದಾಗಿ ಈಗಾಗಲೇ ಕೆಲಸದ ಒತ್ತಡದಿಂದಾಗಿ ರೈತರಿಗೆ ಸಮಯ ನೀಡಲು ಆಗುತ್ತಿಲ್ಲ, ತಹಶೀಲ್ದಾರ್ ನ್ಯಾಯಾಲಯ ಕೂಡ ಇದ್ದು ಸಮಯದ ಕೊರತೆ ಇದೆ. ಆದ್ದರಿಂದ ನಗರ ಯೋಜನೆಗೆ ಮತ್ತು ಸಮಗ್ರ ಅಭಿವೃದ್ಧಿಗೆ ಸದಸ್ಯರನ್ನಾಗಿ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ಅಭಿಪ್ರಾಯ ತಿಳಿಸಿದರು.

ಈ ವಿಷಯಗಳ ಬಗ್ಗೆ ದಾವಣಗೆರೆ ಮಹಾಪೌರ ಬಿ.ಜಿ.ಅಜಯ್ ಕುಮಾರ್ ಅವರು ನೀಡಿದ ಮಾಹಿತಿ ಒಳ್ಳೆಯದು ಎಂದು ನಗರಾಭಿವೃದ್ಧಿ ಆಪ್ತ ಕಾರ್ಯದರ್ಶಿಗಳು ಹೇಳಿದರು.

ಈ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಪಶುಸಂಗೋಪನೆ ಸಚಿವ ಪ್ರಭು ಚೌಹಾಣ್, ವಿಕೇಂದ್ರೀಕರಣ ಸಮಿತಿ ಅಧ್ಯಕ್ಷ ಪ್ರಮೋದ್ ಹೆಗಡೆ, ಯೋಜನಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಲಸಿಕೆ ಚುರುಕುಗೊಳಿಸಲು ಸೂಚನೆ

ನವದೆಹಲಿ, ಫೆ. 6 -ಕೊರೊನಾ ಲಸಿಕೆ ಅಭಿಯಾನವನ್ನು ಚುರುಕುಗೊಳಿಸುವಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದ್ದು, ಫೆಬ್ರವರಿ 20ರ ಒಳಗೆ ಎಲ್ಲಾ ಆರೋಗ್ಯಕಾರ್ಯಕರ್ತರಿಗೆ ಕನಿಷ್ಠ ಮೊದಲ ಸುತ್ತಿನ ಲಸಿಕೆ ದೊರೆಯುವಂತಾಗಬೇಕು ಎಂದು ಹೇಳಿದೆ.

ಜನವರಿ 16 ರಂದು ಲಸಿಕಾ ಅಭಿಯಾನ ಆರಂಭಿಸಲಾಗಿತ್ತು. ಫೆಬ್ರವರಿ 13ರಿಂದ ಎರಡನೇ ಸುತ್ತಿನ ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ಸಿಗಲಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

## ಸಮೂಹ ನೃತ್ಯ-ಗಾಯನಕ್ಕೆ ಆಹ್ವಾನ

ದಾವಣಗೆರೆ, ಫೆ.4- ಜಿಲ್ಲೆ ಸಮಾಚಾರ ಬಳಗದಿಂದ ಸಾರ್ವಜನಿಕವಾಗಿ ಹಿರಿಯರು ಮತ್ತು ಕಿರಿಯರಿಗೆ ಉಚಿತವಾಗಿ ಸಮೂಹ ಗೀತೆ, ಸಮೂಹ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಸಂಸ್ಥಾಪಕ ವಿ. ಹನುಮಂತಪ್ಪ ತಿಳಿಸಿದ್ದಾರೆ. ಆಸಕ್ತರು ವಾಟ್ಸ್‌ಪ್ ನಂ: 9740112249, 990395797 ಹೆಸರು ನೋಂದಾಯಿಸುವುದು. ವಿವರಕ್ಕೆ ಮೊಬೈಲ್ 9538732777ಕ್ಕೆ ಸಂಪರ್ಕಿಸಲು ಬಳಗದ ಪ್ರಧಾನ ಕಾರ್ಯದರ್ಶಿ ಸಿ.ಕೆ. ಆನಂದತೀರ್ಥಾಚಾರ್, ಸಂಚಾಲಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

Civil

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್** VCS

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಮೊ. 99168 73399, 93432 77422, 99161 73399

## ವಾಸವಿ ಕ್ಲಬ್ ದೇವನಗರಿ ಅಧ್ಯಕ್ಷರಾಗಿ ಆರ್.ಸಿ.ರಮೇಶ್



ದಾವಣಗೆರೆ, ಫೆ.6- ವಾಸವಿ ಕ್ಲಬ್ ದೇವನಗರಿ ಅಧ್ಯಕ್ಷರಾಗಿ ಆರ್.ಸಿ. ರಮೇಶ್, ಪ್ರಧಾನ ಕಾರ್ಯದರ್ಶಿಯಾಗಿ ಕೆ.ವಿ. ರಂಗನಾಥ್, ಖಜಾಂಚಿಯಾಗಿ ಸುನಿತಾ ಭಾರ್ಗವಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ನೂತನ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂ ಭವು ನಾಳೆ ದಿನಾಂಕ 7ರ ಭಾನುವಾರ ಸಂಜೆ 6 ಗಂಟೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ದತ್ತ ಮಂದಿರದಲ್ಲಿ ನಡೆಯಲಿದೆ.

ವಾಸವಿ ಕ್ಲಬ್ ದೇವನಗರಿ ನೂತನ ಅಧ್ಯಕ್ಷ ರಮೇಶ್ ಅವರ ನೇತೃತ್ವದ ಪದಾಧಿಕಾರಿಗಳಿಗೆ ಸಂಸ್ಥೆಯ ಜಿಲ್ಲಾ ವಿ301ಎ ವಿಸಿಐ ರಾಜ್ಯಪಾಲ ಪದ್ಮಾವತಿ ಕೃಷ್ಣಪ್ರಸಾದ್ ಪ್ರಮಾಣ ವಚನ ಬೋಧಿಸುವರು. ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕರಾದ ಶ್ರೀಮತಿ ಗೀತಾ ಬದರಿನಾಥ್ ವಿಶೇಷ ಆಹ್ವಾನಿತರಾಗಿದ್ದಾರೆ. ಕ್ಲಬ್‌ನ ರೀಜಿನಲ್ ಛೇರ್‌ಪರ್ಸನ್ ಬಿ.ಎ. ಚಂದ್ರಕುಮಾರ್ ಅವರು ಮುಖ್ಯ ಅತಿಥಿಯಾಗಿದ್ದಾರೆ.

ಪದಾಧಿಕಾರಿಗಳು : ವಾಸವಿ ಕ್ಲಬ್ ದೇವನಗರಿಗೆ ಆರ್.ಸಿ. ರಮೇಶ್ ಅಧ್ಯಕ್ಷತೆಯಲ್ಲಿ ಆಯ್ಕೆಯಾಗಿರುವ ಪದಾಧಿಕಾರಿಗಳ ವಿವರ :

ಉಪಾಧ್ಯಕ್ಷರು : ಪಿ.ಎಸ್. ರವಿ, ಮಾಲತೇಶ್ ಸಿ. ಹಲ್ಲೂರು, ಜಂಟಿ ಕಾರ್ಯದರ್ಶಿಗಳು : ಇ.ಎಸ್. ನಾಗರಾಜ್, ಬಿ.ಸಿ. ವರಮಹಾಲಕ್ಷ್ಮಿ, ಜಂಟಿ ಖಜಾಂಚಿಗಳು : ಲಲಿತಾ ಸುರೇಶ್, ಎಸ್.ಎಸ್. ಶ್ರೀನಿವಾಸಲು, ಛೇರ್ಮನ್ ನರೇಂದ್ರನಾಥ್ ಸಂಜಿ, ಎಸ್.ರಾಘವೇಂದ್ರ, ಸಂಪರ್ಕಾಧಿಕಾರಿಗಳು : ವೆಂಕಟೇಶಮೂರ್ತಿ, ಕೆ.ಶ್ರೀನಿವಾಸ್.

ನಿರ್ದೇಶಕರುಗಳು : ಜಯಲಕ್ಷ್ಮಿ ಎಂ .ಹಲ್ಲೂರು, ಲಕ್ಷ್ಮಿ ಸತೀಶ್, ಡಾ. ಚಿತ್ರಾಲಿ ಎನ್. ಸಂಜಿ, ವೀಣಾ ಪ್ರಭಾಕರ್, ಪಿ. ರಾಜಗುಪ್ತಾ, ಸುಮ ವೆಂಕಟೇಶ್, ಪಿ.ಅರುಣ, ಎನ್. ಜಯಶ್ರೀ, ಎಸ್.ಎ. ಶ್ರೀಲಕ್ಷ್ಮಿ, ಆರ್. ಗಾಯತ್ರಿ ರಮೇಶ್.

# ವೈದ್ಯರಿಗೂ ಸಹ ಬೇಕಿದೆ ಇಂಜಿನಿಯರಿಂಗ್ ತಂತ್ರಜ್ಞಾನ




**ಗ್ಯಾಡ್ಜೆಟ್‌ಗಳಿಂದ ರೋಬೋಗಳವರೆಗೆ ಹಲವಾರು ತಂತ್ರಜ್ಞಾನಗಳ ತಿಳುವಳಿಕೆ ವೈದ್ಯರಿಗೆ ಅಗತ್ಯ.**

**ಎಸ್.ಎಸ್.ಐ.ಎಂ.ಎಸ್. ಪದವಿ ಪ್ರದಾನ ಸಮಾರಂಭದಲ್ಲಿ ಡಾ. ಕರಿಸಿದ್ದಪ್ಪ**

ದಾವಣಗೆರೆ, ಫೆ. 6 - ಅಂತರ್ಜಾಲದ ಮೂಲಕ ವೈದ್ಯಕೀಯ ಉಪಕರಣಗಳ ಬಳಕೆ, ಚಿಕಿತ್ಸೆಯಲ್ಲಿ ರೋಬೋಟ್‌ಗಳು, ಬಿಗ್ ಡಾಟಾ, ಧರಿಸಬಹುದಾದ ಗ್ಯಾಡ್ಜೆಟ್‌ಗಳು, 3ಡಿ ಬಯೋ ಪ್ರಿಂಟಿಂಗ್ ಸೇರಿದಂತೆ ಹತ್ತಾರು ತಂತ್ರಜ್ಞಾನಗಳು ವೈದ್ಯಕೀಯ ವಲಯದಲ್ಲಿ ಬಳಕೆಯಾಗುತ್ತಿದ್ದು, ಇವುಗಳನ್ನು ಸಶಕ್ತವಾಗಿ ಉಪಯೋಗಿಸಲು ವೈದ್ಯರು ಸಜ್ಜಾಗಬೇಕಿದೆ ಎಂದು ಬೆಳಗಾವಿಯ ವಿಶ್ವೇಶ್ವರಾಯ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಕರಿಸಿದ್ದಪ್ಪ ಕರೆ ನೀಡಿದ್ದಾರೆ.

ನಗರದ ಎಸ್.ಎಸ್.ಐ.ಎಂ.ಎಸ್. ವೈದ್ಯಕೀಯ ವಿಜ್ಞಾನ ಹಾಗೂ ಸಂಶೋಧನಾ ಕೇಂದ್ರದಲ್ಲಿ ಹತ್ತನೇ ವರ್ಷದ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ರಕ್ತದೊಳಗೆ ಸಂಚರಿಸಿ ಚಿಕಿತ್ಸೆ ನೀಡುವ ಅತಿ ಸೂಕ್ಷ್ಮ ಗಾತ್ರದ ನ್ಯಾನೋ ರೋಬೋಗಳಿಂದ ಹಿಡಿದು, ಕೈಯಲ್ಲಿ ಧರಿಸುವ ಗ್ಯಾಡ್ಜೆಟ್‌ಗಳಂತಹ ಉಪಕರಣಗಳು ವೈದ್ಯರು ಚಿಕಿತ್ಸೆ ನೀಡಲು ನೆರವಾಗುತ್ತಿವೆ. ಇಂತಹ ಉಪಕರಣಗಳ ತಿಳುವಳಿಕೆ ಹೊಂದಿದರೆ ಉತ್ತಮ ವೈದ್ಯರಾಗಲು ಸಾಧ್ಯವಾಗುತ್ತದೆ ಎಂದರು.

ನೂತನ ಶಿಕ್ಷಣ ನೀತಿ ಸಹ ಈ ಅಗತ್ಯವನ್ನು ಪರಿಗಣಿಸಿದೆ. ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಎಂಬ ಭೇದ ಕಡಿಮೆಯಾಗಿ ಅಂತರಶಾಸ್ತ್ರೀಯ ಅಧ್ಯಯನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳೂ ಈಗ ಜೀವಶಾಸ್ತ್ರ ಕಲಿಯಲಿದ್ದಾರೆ. ಅದರಂತೆ ವೈದ್ಯರೂ ಬಯೋ - ಮೆಕ್ಯಾನಿಕ್ಸ್ ತಿಳಿಯಬೇಕಿದೆ ಎಂದವರು ಅಭಿಪ್ರಾಯ ಪಟ್ಟರು.

ಹಿಂದಿನ ವೈದ್ಯರು ಚಿಕಿತ್ಸೆ ನಿರ್ಧರಿಸುವ ಸಂದರ್ಭದಲ್ಲಿ ಸ್ವಪ್ರಜ್ಞೆಯಿಂದ ನಿರ್ಧರಿಸುತ್ತಿದ್ದರು. ಆದರೆ, ಈಗ ರೋಗಿಯ ಕುರಿತ ಅಪಾರ ಮಾಹಿತಿಗಳು ಹಲವಾರು ಪರೀಕ್ಷೆಗಳ ಮೂಲಕ ಲಭ್ಯವಾಗುತ್ತಿವೆ. ಈ ಮಾಹಿತಿಯನ್ನು ವೈದ್ಯರು ಪರಿಶೀಲಿಸಿದಾಗ ಚಿಕಿತ್ಸೆಯ ಬಗ್ಗೆ ಇನ್ನೊಂದು ಒಳನೋಟ ಸಿಗಬಹುದು ಎಂದು ಕರಿಸಿದ್ದಪ್ಪ ತಿಳಿಸಿದರು.

ಇಂಟರ್‌ನೆಟ್ ಮೂಲಕ ನಿಯಂತ್ರಿಸಬಹುದಾದ ಉಪಕರಣಗಳು ವೈದ್ಯರಿಗೆ ಉಪಯುಕ್ತವಾಗಿವೆ. ಇದರಿಂದಾಗಿ ರೋಗಿಗಳ ಮೇಲೆ ವೈದ್ಯರು ನಿರಂತರ ನಿಗಾ ವಹಿಸಬಹುದು ಎಂದ ಅವರು, ಇದರಿಂದ ಪರಿಣಾಮಕಾರಿ ಚಿಕಿತ್ಸೆ ಸಾಧ್ಯವಾಗುತ್ತದೆ ಎಂದರು.

ಕೊರೊನಾ ಸಂದರ್ಭದಲ್ಲಿ ಬೆಳಗಾವಿ ಸರ್ಕಾರಿ ಆಸ್ಪತ್ರೆಯಲ್ಲಿ ರೋಬೋಟ್‌ಗಳನ್ನು ಬಳಸಲಾಗಿತ್ತು. ಬ್ರಿಟನ್‌ನಲ್ಲಿ ಸೂಕ್ಷ್ಮ ರೋಬೋಗಳು ರಕ್ತ ನಾಳಗಳಲ್ಲಿ ಸಂಚರಿಸಿ ಆರೋಗ್ಯದ ಮೇಲೆ ನಿಗಾ ವಹಿಸುತ್ತವೆ. ಕ್ಯಾನ್ಸರ್ ರೀತಿಯ ರೋಗಗಳಿಗೆ ಸೂಕ್ಷ್ಮ ರೋಬೋಗಳು ನೆರವಾಗುತ್ತಿವೆ ಎಂದವರು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಶಾಸಕ ಹಾಗೂ ಬಾಪೂಜಿ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ, ಎಂ.ಬಿ.ಬಿ.ಎಸ್. ಹಂತದಲ್ಲೇ ನಿಲ್ಲದೇ ವೈದ್ಯಕೀಯ ಸ್ನಾತಕೋತ್ತರ ಅಧ್ಯಯನಕ್ಕೆ ಮುಂದಾದರೆ ಬೇಡಿಕೆ ಸಿಗಲಿದೆ ಎಂದರು.

ಕಾಲೇಜು ಈ ಬಾರಿ ಐದು ರ‍್ಯಾಂಕ್ ಪಡೆದಿದ್ದು, ಶೇ.87ರ ಫಲಿತಾಂಶ ಗಳಿಸಿದೆ. ಉತ್ತಮ ಉಪಕರಣಗಳು, ಪ್ರಯೋಗಾಲಯ ಹಾಗೂ ಅಧ್ಯಾಪಕರಿಂದ ಈ ಸಾಧನೆ ಸಾಧ್ಯವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್ ಸ್ವಾಗತಿಸಿದರು. ವೇದಿಕೆಯ ಮೇಲೆ ಉಪ ಪ್ರಾಂಶುಪಾಲ ಡಾ. ಅರುಣ್ ಕುಮಾರ್ ಅಜ್ಜಪ್ಪ, ವೈದ್ಯಕೀಯ ನಿರ್ದೇಶಕ ಡಾ. ಎನ್.ಕೆ. ಕಾಶಪ್ಪನವರ್ ಉಪಸ್ಥಿತರಿದ್ದರು. ಸುನೀತ ಕಳಸೂರು ಮಠ ಹಾಗೂ ಆಶಾ ಬುಳ್ಳಪ್ಪ ನಿರೂಪಿಸಿದರು.

# ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡುವ ಅಧಿಕಾರ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಬೇಡ



ಬೆಂಗಳೂರು, ಫೆ 6 - ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ವಹಿಸಿರುವ ಸರ್ಕಾರದ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕೆಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಇಂದಿಲ್ಲಿ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಬಿ.ಜೆ.ಪಿ. ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳ ಹಿತಾಸಕ್ತಿಯನ್ನು ರಕ್ಷಿಸುವವರು ಇಲ್ಲದಂತಾಗಿದೆ ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಆಳವಾಗಿ ಬೇರೂರುತ್ತಿದೆ. ಇದಕ್ಕೆ ಪೂರಕವೆಂಬಂತೆ ಜನವರಿ 16 ರಂದು ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಿರುವ ಆದೇಶವೇ ಸಾಕ್ಷಿಯಾಗಿದೆ.

ಸದರಿ ಆದೇಶದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ನಿಯಮಗಳು 1992 ರ ಪ್ರಕಾರ ಸರ್ಕಾರದ ಇಲಾಖೆಗಳಿಗೆ/ ಸಂಸ್ಥೆಗಳಿಗೆ ನೌಕರರಾಗಿ ಆಯ್ಕೆಯಾದ ಸಂದರ್ಭಗಳಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗೆ ಅಧಿಕಾರ ನೀಡಲಾಗಿತ್ತು. ಆದರೆ ಈಗ ಕೆಲವು ನಿರ್ದಿಷ್ಟ ಜಾತಿಗಳಿಗೆ ಸಂಬಂಧಿಸಿ ದಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಜಾಗೃತ ಕೋಶ) ದಿಂದ ವರದಿ ಪಡೆದು ಜಾತಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡತಕ್ಕದ್ದು ಎಂದು ಜಿಲ್ಲಾ ಸಮಿತಿಗೆ ಆದೇಶ ಹೊರಡಿಸಲಾಗಿದೆ.

ಈ ಜಾತಿ, ವರ್ಗಗಳ ಹಿತಾಸಕ್ತಿ ಯನ್ನು ಕಾಪಾಡಬೇಕಾದ ಸರ್ಕಾರ ಮತ್ತು ಸರ್ಕಾರ ದಲ್ಲಿನ ಸಚಿವರುಗಳು ಕೂಡಲೇ ಸೂಕ್ತ ಕ್ರಮ ಕೈಗೊಂಡು ಅವೈಜ್ಞಾನಿಕವಾದ ಮತ್ತು ಅಮಾಯಕರಿಗೆ ಕಿರುಕುಳ ನೀಡುವ ಈ ಸರ್ಕಾರಿ ಆದೇಶವನ್ನು ತಕ್ಷಣದಿಂದ ಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

### ದಿನದ ಚುಟುಕು

ಹೆತ್ತೊಡಲಿಗೆ ತನ್ನ ಕಂದ ಸುಂದರ
ಬಾನ ಮಡಿಲ ಪೂರ್ಣ ಚಂದಿರ
ಅಂದ- ಚೆಂದದ ಕುಡಿಯು ಕಣ್ಮಣಿ
ಹರ್ಷದುಣಿಸಿನಲ್ಲಿ ಬೆಸೆದ ಸರಪಣಿ.

- ವೀಕೆಎಂ.


**ಹೃತ್ಪೂರ್ವಕ ಕೃತಜ್ಞತೆಗಳು**

ದಾವಣಗೆರೆ ತಾಲ್ಲೂಕು ಐಗೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ- ಉಪಾಧ್ಯಕ್ಷರ ಚುನಾವಣೆಯಲ್ಲಿ ನಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ ಗ್ರಾ.ಪಂ. ಸದಸ್ಯರು ಪಂಚಾಯ್ತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಗ್ರಾಮಸ್ಥರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.





ಎಂ.ಜಿ. ರವೀಂದ್ರ
ಅಧ್ಯಕ್ಷರು, ಗ್ರಾ.ಪಂ. ಐಗೂರು

ಶ್ರೀಮತಿ ನಿರ್ಮಲ ಬಾಯಿ ಪಂಪನಾಯ್ಕ್
ಉಪಾಧ್ಯಕ್ಷರು, ಗ್ರಾ.ಪಂ ಐಗೂರು

ಭಾರತದ ಅತ್ಯಂತ ವಿಶ್ವಾಸಾರ್ಹ ಸೋಲಾರ್ ಬ್ರಾಂಡ್
Sudarshan Saur
ತಿಂಗಳ ಸುಲಭ ಕಂತುಗಳಲ್ಲಿ ಲಭ್ಯ
ಬುದ್ಧಿವಂತಿಕೆಯ ಆಲೋಚನೆ
10% ಕ್ಯಾಶ್ ಡಿಸ್ಕೌಂಟ್
10 ವರ್ಷಗಳ ಗ್ಯಾರಂಟಿ*
*T&C apply.
ದಾವಣಗೆರೆ ಹಾಗೂ ಚಿತ್ರದುರ್ಗ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ
PEACE ENTERPRISES
SUPER STOCKIST : DAVANAGERE, CHITRADURGA
Ganesh Temple Building, Opp. Bakkeshwara High School, Nijalingappa Layout, Davanagere. E-mail ID : peacedvgmarketing@gmail.com
8310042490, 9901318277, 9945515076, 9880156667.


## ಮುದಹದಡಿ ಗ್ರಾ.ಪಂ. ಅಧ್ಯಕ್ಷೆಯಾಗಿ ಬಸಮ್ಮ, ಉಪಾಧ್ಯಕ್ಷೆ ಸಾಕಮ್ಮ



ದಾವಣಗೆರೆ, ಫೆ.6- ಮುದಹದಡಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಜರೀ ಕಟ್ಟೆ ಗ್ರಾಮದ ಬಸಮ್ಮ ಕೋಂ ಎ.ಕೆ. ನಾಗಪ್ಪ ಹಾಗೂ ಉಪಾಧ್ಯಕ್ಷರಾಗಿ ಸಾಕಮ್ಮ ಕೋಂ ಸುರೇಶ್ ಮುದಹದಡಿ ಇವರು ಆಯ್ಕೆಯಾಗಿದ್ದಾರೆ ಎಂದು ಪಿಡಿಓ ಹೆಚ್.ವೈ. ಲಕ್ಷ್ಮೀದೇವಿ ತಿಳಿಸಿದ್ದಾರೆ.

## ಐಗೂರು ಗ್ರಾ.ಪಂ.ಗೆ ರವೀಂದ್ರ ಅಧ್ಯಕ್ಷ, ನಿರ್ಮಲಾಬಾಯಿ ಉಪಾಧ್ಯಕ್ಷೆ



ದಾವಣಗೆರೆ, ಫೆ.6- ತಾಲ್ಲೂಕಿನ ಐಗೂರು ಗ್ರಾಮ ಪಂಚಾಯ್ತಿಗೆ ನೂತನ ಅಧ್ಯಕ್ಷರಾಗಿ ಎಂ.ಜಿ. ರವೀಂದ್ರ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ನಿರ್ಮಲಬಾಯಿ ಪಂಪನಾಯ್ಕ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


**16ನೇ ವರ್ಷದ ಚಿರಸ್ಮರಣೆ**





ದಿ|| ಎಂ.ಕೆ. ಕಮಲಮ್ಮನವರು

ನಂದಾದೀಪದ ಹಾಗೆ ನಮ್ಮ ಮನೆ, ಮನಗಳನ್ನು ಬೆಳಗಿದ ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು. ವಾತ್ಸಲ್ಯಮಯಿ ತಾಯಿಯಾಗಿ ಎಲ್ಲರ ಅಕ್ಕರೆಗೂ ಪಾತ್ರರಾಗಿದ್ದ ನೀವು ನಿತ್ಯ ಸ್ಮರಣೀಯರಾಗಿದ್ದೀರಿ.

ಪತಿ : ಎಂ. ಕನ್ನಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಬಂಧುಗಳು ಹಾಗೂ ಮಿತ್ರರು.

* ಎಂ.ಕೆ. ಇಂಡಸ್ಟ್ರೀಸ್ * ಎಂ.ಕೆ. ಐಸ್ ಇಂಡಸ್ಟ್ರೀಸ್ * ಎಂ.ಕೆ. ಆಯಿಲ್ ಟ್ರೇಡರ್ಸ್, ದಾವಣಗೆರೆ.

ಗ್ರಾಹಕರ ಒತ್ತಾಯದ ಮೇರೆಗೆ ಕೇವಲ 4 ದಿನಗಳು ಮಾತ್ರ ಸೇಲ್
ರಾಷ್ಟ್ರೀಯ, ಅಂತರಾಷ್ಟ್ರೀಯ ಬ್ರ್ಯಾಂಡೆಡ್ ರೆಡಿಮೇಡ್ ಗಾರ್ಮೆಂಟ್‌ಗಳ ಭಾರೀ ರಿಯಾಯಿತಿ ಮಾರಾಟ
ಸೂಚನೆ : ಕಳೆದ ಕರೋನಾ ಮಹಾಮಾರಿ ಕಾರಣದಿಂದ ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಶಾಪಿಂಗ್ ಟ್ರೆಂಡ್ ಹೆಚ್ಚಾಗಿದ್ದರಿಂದ ಸ್ಥಳೀಯ ಬಟ್ಟೆ ವ್ಯಾಪಾರಿಗಳು ಫ್ಯಾಕ್ಟರಿಗಳಿಂದ ಅತೀ ಕಡಿಮೆ ಪ್ರಮಾಣ ಬಟ್ಟೆಗಳನ್ನು ಖರೀದಿಸುತ್ತಿದ್ದಾರೆ. ಇದರ ಫಲವಾಗಿ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸರಕುಗಳು ಫ್ಯಾಕ್ಟರಿಯಲ್ಲಿಯೇ ಶೇಖರಿಸಲ್ಪಟ್ಟಿವೆ. ಈ ಕಾರಣಗಳಿಂದ ಫ್ಯಾಕ್ಟರಿಯು ಉಳಿದ ಎಲ್ಲಾ ಸರಕಗಳನ್ನು ದಾವಣಗೆರೆಯಲ್ಲಿ ಮಾರಾಟ ಮಾಡಲು ನಿರ್ಧರಿಸಿದ್ದೇವೆ.
ನಾವು ಲೇಡಿಸ್, ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳಿಗೆ ಭಾರೀ ರಿಯಾಯಿತಿಯನ್ನು ಕೊಡುತ್ತಿದ್ದೇವೆ.
ARROW USA·1851 ಜೆಂಟ್ಸ್ ಶರ್ಟ್ಸ್
M.R.P. ರೂ. 1999/- ರಿಂದ ರೂ. 3499/-
ಸ್ಪೋರ್ಟ್ಸ್, ನ್ಯೂಯಾರ್ಕ್, ಪ್ರಸಿಡೆಂಟ್ ಕಲೆಕ್ಷನ್
ಕೇವಲ ರೂ. 899/-
Lee ಲೀ ಪುರುಷರ ಉಡುಪುಗಳು ಡಿನಿಮ್ ಉಡುಪುಗಳು
M.R.P. ರೂ. 2999/- ರಿಂದ ರೂ. 4999/-
ಕೇವಲ ರೂ. 999/-
Pepe Jeans LONDON ಮಹಿಳಾ ಉಡುಪುಗಳು
M.R.P. ರೂ. 1299/- ರಿಂದ 2999/-
ಪೆಪೆ ಡೆನಿಮ್ ಜೀನ್ಸ್, ಟೀ ಶರ್ಟ್, ಪುಲ್‌ಓವರ್, ಜಾಕೆಟ್, ಟಾಪ್, ಶರ್ಟ್, ನೈಟ್ ಪ್ಯಾಂಟ್, ಶಾರ್ಟ್, ಇತರ ರಿಯಾಯಿತಿ ನಂತರ
ಕೇವಲ ರೂ. 399/- ರಿಂದ 499/-
50,000 ವಿವಿಧ ಪ್ರಕಾರ ಜೆಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಲೋವೇರ್, ಬರ್ಮುಡಾ, ಟಾಪ್, ಕೇಪ್ರಿ, ಲೇಡಿಸ್‌ಪೈಜಾಮ, ಬಾಬಾ ಸೂಟ್, ಫ್ಯಾನ್ಸಿ ಕಿಡ್ಸ್ ಡ್ರೆಸ್, ಸ್ಯಾರೀ, ಕುರ್ತೀಸ್ ಹಾಗೂ ಇತರೆ
ಕೇವಲ ರೂ. 150/- ರಿಂದ 350/-
ವಿಶೇಷ ಕೌಂಟರ್ : ಮಲ್ಟಿ ಬ್ರಾಂಡೆಡ್ ಗಾರ್ಮೆಂಟ್ಸ್, ಜೆಂಟ್ಸ್ : ಪ್ಯಾಂಟ್, ನೆಟೆಡ್ ಕಾಟನ್ ಸ್ಟ್ರೆಚ್, ಮಸ್ಸರೈಸ್ ಕಾಟನ್ ಸ್ಟ್ರೆಚ್, ಸಾರ್ಟಿನ್ ಸ್ಟ್ರೆಚ್, ಸಿಲ್ಕಿ ಸ್ಟ್ರೆಚ್, 100 ಕಾಟನ್ ಸ್ಟ್ರೆಚ್, ಡಾಬಿ ಕಾಟನ್ ಸ್ಟ್ರೆಚ್, ಫಿಟ್ ಕಂಫರ್ಟ್ ಫಿಟ್, ನ್ಯಾರೋ ಫಿಟ್, ಪೆನ್ಸಿಲ್ ಫಿಟ್, ರಿಲ್ಯಾಕ್ಸ್‌ಡ್ ಫಿಟ್, ಕ್ಯಾಷುಯಲ್, ಫಾರ್ಮಲ್ ಟ್ರೌಷರ್ ಶರ್ಟ್ಸ್ ಫಾರ್ಮಲ್, ಆಫೀಸ್‌ವೇರ್, ಕ್ಯಾಷುಯಲ್, ಪಾರ್ಟಿವೇರ್, ಬ್ಯುಸಿನೆಸ್ ಕ್ಲಾಸ್, ಲೋವೇರ್, ಟೀ-ಶರ್ಟ್, ಮಲ್ಟಿ ಬ್ರ್ಯಾಂಡೆಡ್ ಲೇಡಿಸ್ ಕುರ್ತೀಸ್ ಸಲ್ವ್ ಚೂಸ್ ಇತರೆ
ಕೇವಲ ರೂ. 400/- ರಿಂದ 999/- ರವರೆಗೆ
ಜೀನ್ಸ್ ಪ್ಯಾಂಟ್ ಸೈಜ್ : 28 ರಿಂದ 46 ಶರ್ಟ್ ಸೈಜ್ : 36 ರಿಂದ 46
MRP 200/- to 300/- ರೂ. ಬ್ರ್ಯಾಂಡೆಡ್ ಬ್ರಾ & ಪ್ಯಾಂಟೀಸ್
ಕಾಟನ್ ಚಿಕನ್ ಬ್ರಾ, ಸ್ಟ್ರೆಚಬಲ್ ಬ್ರಾ, ಅಲ್ಟ್ರಾ ಮಾಡೆಲ್ ಬ್ರಾ, ಮಿಸ್‌ವರ್ಲ್ಡ್ ಬ್ರಾ, ಇಂಪೋರ್ಟೆಡ್ ಬ್ರಾ, ಸ್ಪೋರ್ಟ್ಸ್ ಬ್ರಾ
ಸಿಲ್ಕ್ ಪ್ಯಾಂಟೀಸ್, ಪ್ರಿಂಟೆಡ್ ಕಾಟನ್ ಪ್ಯಾಂಟೀಸ್, ಅಲ್ಟ್ರಾ ಮಾಡೆಲ್ ಪ್ಯಾಂಟೀಸ್, ಇಂಪೋರ್ಟೆಡ್ ಪ್ಯಾಂಟೀಸ್
ಕೇವಲ ರೂ. 50/-
ನೇರವಾಗಿ ಸೀರೆ ಮಿಲ್ ಮುಖಾಂತರ ರೀಟೆಲ್ ಗ್ರಾಹಕರಿಗೆ
ಗ್ರೀನ್ ವಿತ್ ಮೆರೂನ್ ಝರಿ ವರ್ಕ್ ಸ್ಯಾರಿ, ವೈಯ್‌ಲೆಟ್ ಸ್ಯಾಂಡಲ್ ಸ್ಯಾರಿ, ಟ್ರೆಡಿಷನಲ್ ಬುಟ್ಟಿ ಸ್ವರ್ಣಲತ ಸಿಲ್ಕ್‌ಸ್ಯಾರಿ, ಚಾಂದೇರಿ ಸಿಲಕ್ ಸ್ಯಾರಿ, ಕಾಟನ್ ಸ್ಯಾರಿ, ಜ್ಯಾರ್ಜೆಟ್ ಶಿಫಾನ್ ಪ್ರಿಂಟೆಡ್, ಕ್ರೇಪ್ ಸಿಲ್ಕ್ ಸ್ಯಾರಿ, ಪೈಠಾನೀ ಸ್ಯಾರಿ ಸಾವಿರಾರು ಬಗೆಯ ಫ್ಯಾನ್ಸಿ ಕಾಟನ್ ಮತ್ತು ಸಿಲ್ಕ್ ಸೀರೆ
ಕೇವಲ ರೂ. 150/- ರಿಂದ 200/- ಮಾತ್ರ
ಬ್ರ್ಯಾಂಡೆಡ್ ಡಿಸೈನರ್ ಲೇಡಿಸ್ ಕುರ್ತಿ
ಮಿಂಟ್ ಗ್ರೀನ್ ಕಾಟನ್ ಕುರ್ತಿ, ವಿವಿಧ ಬಣ್ಣಗಳ ಕುರ್ತಿಗಳು, ಎಕ್ಸಲೆಂಟ್ ಪಾರ್ಟಿವೇರ್, ಎಂಬ್ರಾಡೆಡ್ ರಯಾನ್ ರೆಗ್ಯುಲರ್ ಕುರ್ತಿ, ಬ್ಲಾಕ್ ಪ್ರಿಂಟೆಡ್ ಕಾಟನ್ ಲಾಂಗ್, ಬಾಲಿವುಡ್ ವುಮೆನ್ ಡಿಸೈನರ್ ಬ್ಯೂಟಿಫುಲ್
abof
ಕೇವಲ ರೂ. 400/- ರಿಂದ 600/- ಮಾತ್ರ
ಕೇವಲ 4 ದಿನಗಳ ಮಾರಾಟ ಮಾತ್ರ 7, 8, 9, & 10ನೇ ಫೆಬ್ರವರಿ 2021
ಸಮಯ : ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ No Lunch Break
ತೊಗಟವೀರ ಸಮುದಾಯ ಭವನ
6ನೇ ಮುಖ್ಯರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
All Major Debit / Credit Cards, Google Pay, Phone Pe Accepted
ಸೂಚನೆ : ಸರ್ಕಾರದಿಂದ ನಿರ್ದೇಶಿಸಲಾದ ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಡ್ಡಾಯ
Entry and Parking Free


## ನಗರಕ್ಕೆ ನಾಳೆ ಸಚಿವ ಸುರೇಶ್ ಕುಮಾರ್



ದಾವಣಗೆರೆ, ಫೆ.5 - ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಎಸ್. ಸುರೇಶ್‌ಕುಮಾರ್ ಅವರು ನಾಡಿದ್ದು ದಿನಾಂಕ 7 ರ ಭಾನುವಾರ ನಗರಕ್ಕೆ ಆಗಮಿಸಲಿದ್ದಾರೆ. ಭಾನುವಾರ ರಾತ್ರಿ 8.30 ಕ್ಕೆ ನಗರಕ್ಕೆ ಆಗಮಿಸಿ ವಾಸ್ತವ್ಯ ಮಾಡುವ ಸಚಿವರು, ಸೋಮವಾರ ಬೆಳಿಗ್ಗೆ 6 ಗಂಟೆಗೆ ನಗರದಿಂದ ನಿರ್ಗಮಿಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಪಿ.ಎಂ. ಚಿದಂಬರ ತಿಳಿಸಿದ್ದಾರೆ.

## ವಾಸವಿ ಕ್ಲಬ್ ರೀಜಿನಲ್ ಛೇರ್‌ಪರ್ಸನ್ ಆಗಿ ಚಂದ್ರಕುಮಾರ್



ದಾವಣಗೆರೆ, ಫೆ.6- ವಾಸವಿ ಕ್ಲಬ್ ರೀಜಿನಲ್ ಛೇರ್ ಪರ್ಸನ್ ಆಗಿ ಚನ್ನಗಿರಿ ಪುರಸಭೆ ಪ್ರಭಾರ ವ್ಯವಸ್ಥಾಪಕ ಬಿ.ಎ. ಚಂದ್ರಕುಮಾರ್ ಅವರು ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.


ಬಾಪೂಜಿ ವಿದ್ಯಾಸಂಸ್ಥೆ (ರಿ)
ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್
ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್
ಎಸ್.ಎಸ್. ಜನರಲ್ ಆಸ್ಪತ್ರೆ, ಕೆ.ಆರ್. ರಸ್ತೆ, ದಾವಣಗೆರೆ - 577001
ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್
ಎಸ್.ಎಸ್.ಐ.ಎಂ.ಎಸ್. ಕ್ಯಾಂಪಸ್, ರಾಷ್ಟ್ರೀಯ ಹೆದ್ದಾರಿ-4, ಬೈಪಾಸ್ ರಸ್ತೆ, ದಾವಣಗೆರೆ 577005, ಕರ್ನಾಟಕ.
(ಮಾನ್ಯತೆ: ಐ.ಎನ್.ಸಿ., ಕೆ.ಎನ್.ಸಿ., ಕರ್ನಾಟಕ ಸರ್ಕಾರ ಮತ್ತು ಆರ್.ಜಿ.ಯು.ಹೆಚ್.ಎಸ್. ಬೆಂಗಳೂರು ಇವರಿಂದ ಅನುಮೋದನೆ)
ನರ್ಸಿಂಗ್ ಕೋರ್ಸ್ ಪ್ರವೇಶ ಪ್ರಕಟಣೆ 2020-21
+ ಡಿಪ್ಲೋಮಾ (GNM) ನರ್ಸಿಂಗ್. (3 ವರ್ಷಗಳು)
+ ಪಿ.ಬಿ. ಬಿ.ಎಸ್‌ಸಿ (P.B. B.Sc) ನರ್ಸಿಂಗ್. (2 ವರ್ಷಗಳು)
+ ಎಂ.ಎಸ್.ಸಿ, (M.Sc) ನರ್ಸಿಂಗ್. (2 ವರ್ಷಗಳು)
ಶ್ರೀ ಡಾ. ಶಾಮನೂರು ಶಿವಶಂಕರಪ್ಪನವರು
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ಶಾಸಕರು, ದಾವಣಗೆರೆ (ದಕ್ಷಿಣ), ದಾವಣಗೆರೆ.
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್
ಜಂಟಿಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ಹಾಗೂ ಛೇರ್ಮನ್, ಎಸ್.ಎಸ್.ಐ.ಎಂ.ಎಸ್ ಅಂಡ್ ಆರ್.ಸಿ. ದಾವಣಗೆರೆ.
ಪ್ರವೇಶಕ್ಕಾಗಿ ಸಂಪರ್ಕಿಸಿ
ರವಿ ಆರ್.ಜಿ.
ವ್ಯವಸ್ಥಾಪಕರು
ಫೋನ್ : 94497 63322
ಕಛೇರಿಯ ಫೋನ್ : 08192-266307
ವೀರೇಶ್ ವಿ.ಬಿ.
ಪ್ರಾಂಶುಪಾಲರು
ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್
ಫೋನ್ : 99724 74258
ಕಛೇರಿಯ ಫೋನ್ : 08192-266323
ಎಸ್. ಎಫ್. ಬಿಲ್ಲಳ್ಳಿ
ಪ್ರಾಂಶುಪಾಲರು
ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್
ಫೋನ್ : 94485 34605
ಕಛೇರಿಯ ಫೋನ್ : 08192-296906
ಹರ್ಷ ಕೆ.ಎಂ.
ಪ್ರಾಂಶುಪಾಲರು
ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್
ಫೋನ್ : 94811 61215
ಕಛೇರಿಯ ಫೋನ್ : 08192-237045
ಪ್ರವೇಶಾತಿಯ ಕೊನೆಯ ದಿನಾಂಕ : 27-02-2021


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte